ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 3 ಸಂಚಿಕೆ 13

ಮಾರ್ಚ್ 29, 2009

ರೂ. 5/-

ಸಿಪಿಐ(ಎಂ) ಪ್ರಣಾಳಿಕೆ



ಭಾರತದ ಜನತೆಗೆ ಹೊಸ ದಾರಿ

ಕರಾವಳಿ :



ಕದಡಿದ ಶಾಂತಿ
ಓಟ್ ಬ್ಯಾಂಕ್ ಸಮಾಜೋತ್ಸವಗಳು

ಮೂರನೇ ಪರ್ಯಾಯದ ಬಲವರ್ಧನೆ



ಬಿಜೆಪಿ-ಕಾಂಗ್ರೆಸ್‌ಗಳಲ್ಲಿ ನಡುಕ



ಚಾಪ್ಲಿನ್ ಎದುರು ಕುಬ್ಜರಾದವರು

ಯಡ್ಡಿ ಸರ್ಕಾರದ ತಂತ್ರಗಳು
ಮಹಿಳೆಯರ ಬಗ್ಗೆ ಮೊಸಳೆ ಕಣ್ಣೀರು

ಐದು

ನೋಟ



ಡಾ. ಜಿ. ಭಾಸ್ಕರ ಮಯ್ಯ

ಮತಾಂತರ

ಎಂಬ ದುರ್ಗಮ ಅರಣ್ಯದಲ್ಲಿ ಒಂದು ಪಯಣ

ನವಬೌದ್ಧರು ಬೌದ್ಧಧರ್ಮವನ್ನು ಪುನರುಜ್ಜೀವನಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ಜಗತ್ತಿನ ಬೌದ್ಧರೊಡನೆ ಅವರ ಜೀವಂತ ಸಂಬಂಧ ಸಾಧ್ಯವಾಗುತ್ತಿಲ್ಲ. ಬುದ್ಧನ ಸಂದೇಶಗಳಿಗೂ ಇಂದಿನ ಬೌದ್ಧಮತಕ್ಕೂ ಇರುವ ಅಂತರ ಅಜಗಜಾಂತರ.

ಬಾಬಾ ಸಾಹೇಬ್ ಅಂಬೇಡ್ಕರ್ ಅವರ 'ಮತಾಂತರ'ದ ಐತಿಹಾಸಿಕ ರಣನೀತಿ (Stratagy) ಯು ಹಿಂದೂ ಜಾತಿವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ವಿರುದ್ಧ ಅಭೂತಪೂರ್ವ ಪ್ರತಿರೋಧವಾಗಿತ್ತು. ಅದನ್ನೆ ಅನುಸರಿಸಿ ಇಂದೂ ಕೂಡಾ ಬುದ್ಧನು ಪರಿನಿರ್ವಾಣ ಹೊಂದಿದ ದಿನ ದಲಿತರು ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳುತ್ತಾರೆ. ಈ ಕುರಿತು ಸ್ಪಷ್ಟ ಚಿಂತನೆಗೆ ನಾನು ಬಿ.ಟಿ. ರಣದಿವೆ (ಕೃತಿ: Caste and Class) ಯವರನ್ನು ಸುದೀರ್ಘವಾಗಿ ಉಲ್ಲೇಖಿಸಲು ಬಯಸುತ್ತೇನೆ:

ಸಾಮಾಜಿಕ, ಆರ್ಥಿಕ ವ್ಯವಸ್ಥೆಯನ್ನು ಮುರಿದಿರುವುದು

"ಇಂದಿನ ಸರಕಾರ ಮತ್ತು ಈ ಹಿಂದಿನ ಸರಕಾರಗಳ ಆಡಳಿತಗಳಲ್ಲಿ ದಲಿತರ ಮೇಲೆ ಎಷ್ಟೊಂದು ಬರ್ಬರ ಅತ್ಯಾಚಾರಗಳು ನಡೆಯುತ್ತಾ ಇವೆಯೆಂದರೆ ಸ್ವಾತಂತ್ರ್ಯ ದೊರೆತು ದಶಕಗಳು ಸಂದರೂ ದಲಿತರ ಮೇಲಿನ ಅನ್ಯಾಯ, ಅತ್ಯಾಚಾರಗಳು ಸ್ವಲ್ಪವೂ ಬದಲಾಗಿಲ್ಲ. ಅಸ್ಪೃಶ್ಯರ ಹಿತಕ್ಕಾಗಿ ಅವಿಶ್ರಾಂತ ಹೋರಾಟ ನಡೆಸಿದ ಮಹಾನ್ ಯೋಧ ಅಂಬೇಡ್ಕರ್ ತಮ್ಮ ಆರಂಭದ ಕಾಲಘಟ್ಟದಲ್ಲಿ ಸವರ್ಣೀಯರ ದಗಲ್ಬಾಜಿತನವನ್ನು ಸ್ಪಷ್ಟವಾಗಿ ವಿರೋಧಿಸಿದರು. ಕಾಂಗ್ರೆಸಿನ ದ್ವಿಮುಖ ನೀತಿಯನ್ನು ಬಯಲಿಗೆಳೆದರು. ಆನಂತರ ದಲಿತರಿಗೆ ಭೂಮಿ ಮತ್ತು ಪ್ರತ್ಯೇಕ ಕಾಲೋನಿಗಳ ಬೇಡಿಕೆಗಳನ್ನು ಮುಂದಿಟ್ಟರು. ಆದರೆ, ವಾಸ್ತವದಲ್ಲಿ ಇವೆಲ್ಲವೂ ಕೃಷಿಕ್ರಾಂತಿಯಾಗದೇ ಸಾಧ್ಯವಾಗುತ್ತಿರಲಿಲ್ಲ. ಭೂಹೀನ ದಲಿತರ ಗುಲಾಮಗಿರಿಯನ್ನು ಕೊನೆಗೊಳಿಸುವ ಅವರ ವಿಚಾರಗಳು ಸರಿಯಾಗಿಯೇ ಇದ್ದವು. ಆದರೆ, ಈ ಉದ್ದೇಶವು ಎಲ್ಲಾ ಭೂಮಿಹೀನರ ಸಂಯುಕ್ತ-ಐಕ್ಯ ಹೋರಾಟದಿಂದ ಮಾತ್ರವೇ ಸಾಧ್ಯವಾಗುತ್ತಿತ್ತು.

ಮುಂದೆ ಅಂಬೇಡ್ಕರ್ ಅವರು ಹಿಂದೂ ಸಮಾಜದ ಅನ್ಯಾಯಗಳಿಂದ ಮುಕ್ತರಾಗಲು ತಮ್ಮ ಅನುಯಾಯಿಗಳಿಗೆ ಬೌದ್ಧಧರ್ಮದಲ್ಲಿ ದೀಕ್ಷೆ ಪಡೆಯಲು ಹೇಳಿದರು. ಆದರೆ, ಅವರು ಬೌದ್ಧಧರ್ಮಕ್ಕೆ ಮತಾಂತರ ಹೊಂದಿದರೂ ಅಸಮಾನತೆಯಿಂದ ಕೂಡಿದ ಭೂಮಿ ಸಂಬಂಧಗಳ ಮೇಲೆ ಆಧರಿಸಲ್ಪಟ್ಟ, ಭಯ ಹುಟ್ಟಿಸುವ ಸಾಮಾಜಿಕ ವಾಸ್ತವದಲ್ಲಿ ಯಾವುದೇ ಬದಲಾವಣೆಯುಂಟಾಗಲಿಲ್ಲ. ಪ್ರೇಮ ಮತ್ತು ಸಮಾನತೆಯ ಹುಡುಕಾಟದಲ್ಲಿ ಅವರಿಗೆ ಯಾವುದೇ ಸಫಲತೆ ಪ್ರಾಪ್ತವಾಗಲಿಲ್ಲವೆಂಬುದಕ್ಕೆ ಇಂದು ನಡೆಯುತ್ತಿರುವ ಅತ್ಯಾಚಾರದ ಘಟನೆಗಳೇ ಸಾಕ್ಷಿ. ಅತ್ಯಂತ ಖೇದಕರವಾದ ಸಂಗತಿಯೆಂದರೆ ಶೋಷಿತ ವರ್ಗದಿಂದ ಬಂದಿರುವ ಬುದ್ಧಿಜೀವಿಗಳೂ ಕೂಡಾ ನೌಕರಿಗಳಲ್ಲಿ, ಸೀಟುಗಳಲ್ಲಿ ಮೀಸಲಾತಿ, ಶೈಕ್ಷಣಿಕ ಸವಲತ್ತುಗಳು ಇತ್ಯಾದಿ ಸಮಾನತೆಯ ಔಪಚಾರಿಕ ಘೋಷಣೆಗಳಿಂದ ಮುಂದಕ್ಕೆ ದೃಷ್ಟಿ ಹಾಯಿಸುತ್ತಿಲ್ಲ. ಇಂದಿನ ಸಾಮಾಜಿಕ ಆರ್ಥಿಕ ವ್ಯವಸ್ಥೆಯನ್ನು ಮುರಿದುಹಾಕುವ ವಿಚಾರ ಅವರ ಆಲೋಚನೆಯ ಒಂದು ಭಾಗವಾಗಿ ಬರುತ್ತಿಲ್ಲ. ಭೂಮಿ-ಸಂಬಂಧಗಳ ವಿರುದ್ಧ ದಲಿತರ ಶೋಷಿತರೊಂದಿಗೆ ಸೇರಿಕೊಂಡು ಐಕ್ಯ ಹೋರಾಟ ನಡೆಸುವ ವಿಚಾರವೇ ಅವರ ತಲೆಗೆ ಹೊಳೆಯುತ್ತಿಲ್ಲ. ಈ ವರ್ಗದಿಂದ ಬಂದ ಬುದ್ಧಿಜೀವಿಗಳು ಬಹುಬೇಗ ಬಂಡವಾಳಶಾಹಿ ಪ್ರಜಾಪ್ರಭುತ್ವದ ನೆಲಗಟ್ಟನ್ನು ಒಪ್ಪಿಕೊಂಡು ಬಿಟ್ಟಿದ್ದಾರೆ. ಇಂದಿನ ಭೂಮಿ ಮತ್ತು ಕೈಗಾರಿಕೆಗಳ ಸಂಪತ್ತಿನ ಸಂಬಂಧಗಳ ಬಗೆಗೆ ಪ್ರಶ್ನೆಯನ್ನೆತ್ತದೆ ಪ್ರಜಾಪ್ರಭುತ್ವದ ಹಕ್ಕಿನ ಸಾಮಾನ್ಯ ಘೋಷಣೆಗಳಿಂದಲಷ್ಟೇ ಅವರು ತೃಪ್ತರಾಗಿದ್ದಾರೆ.

ಕಾಂಗ್ರೆಸಿನ ಮುಖಂಡರು ಹಾಗೂ ಅವರ ವಂಚನೆಯ ವಿರುದ್ಧ ಅಂಬೇಡ್ಕರ್ ಅವರಷ್ಟು ತೀಕ್ಷ್ಣ ಮತ್ತು ನಿರಂತರ ಆಕ್ರಮಣವನ್ನು ಪ್ರಾಯಶಃ ಮತ್ಯಾರೂ ಮಾಡಲಾರರು. ಆದಾಗ್ಯೂ, ಅವರು ನಮ್ಮ ಸಂವಿಧಾನದ ನಿರ್ಮಾಣಕಾರರಲ್ಲಿ ಪ್ರಮುಖರು. ಜಗತ್ತಿನಲ್ಲಿ ಇಂದಿನತನಕ ಇದಕ್ಕೆ ಸಮನಾದ ಪ್ರಜಾಪ್ರಭುತ್ವದ ಮಾದರಿಯೇ ಇಲ್ಲ ಎಂದು ಕಾಂಗ್ರೆಸ್ ಪ್ರಶಂಸೆಯ ಸುರಿಮಳೆಗೈಯುತ್ತಿರುವುದು ಇದೇ ಸಂವಿಧಾನವನ್ನು. ಅಂತೆಯೇ ಇದು ಅದೇ ಸಂವಿಧಾನ ಹಾಗೂ ಅದರ ಕೆಳಗೇನೆ ಅಸ್ಪೃಶ್ಯರ ಮನೆಗಳಿಗೆ ಬೆಂಕಿಯಿಡಲಾಗುತ್ತಿದೆ. ಅವರ ಮನೆಗಳನ್ನು ಲೂಟಿ ಮಾಡಲಾಗುತ್ತಿದೆ. ಅವರ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಮಾಡಲಾಗುತ್ತಿದೆ. ಅವರನ್ನು ಕೊಲ್ಲಲಾಗುತ್ತಿದೆ. ತನಗೆ ಮೋಸವಾಗಿದೆಯೆಂದು ಅಂಬೇಡ್ಕರ್ ಅವರಿಗೆ ಅನ್ನಿಸಿದ್ದರೆ, ಅದು ಆಶ್ಚರ್ಯದ ವಿಷಯವಲ್ಲ."

ತಮ್ಮದೆ ಬಲೆಯಲ್ಲಿ

ಇನ್ನು ಪುನಃ 'ಮತಾಂತರ'ದ ವಿಚಾರಕ್ಕೆ ಬಂದರೆ ಇದನ್ನು 'ಭೂತಾಕಾರ' ಮಾಡಿ ವಿವಾದ ಸೃಷ್ಟಿಸಿದ್ದೇ ಭಾಜಪ ಮತ್ತು ಅದರ ಅಂಗ ಸಂಸ್ಥೆಗಳು. ಇಷ್ಟೆಲ್ಲಾ ಸಂಗತಿಗಳಿದ್ದೂ ಮತಾಂತರದ ಮೇಲೆ ನಿಷೇಧ ಹೇರಬೇಕನ್ನುವ ಸಂಘ ಪರಿವಾರದ ವಾದ ವಾದ ಅಸಂಬದ್ಧವಾದುದು. ಇಷ್ಟಕ್ಕೂ ಈ ಆಗ್ರಹ ಅವರ 'ಸಮಯಕ್ಕೊಂದು ಸುಳ್ಳಿನ' ಹಾಗೆ ಸಂದರ್ಭಸಾಧಕತನದಿಂದ ಕೂಡಿದೆ. ಏಕೆಂದರೆ, ಗುಜರಾತಿನಲ್ಲಿ ಮತಾಂತರ ನಿಷೇಧ ಕಾನೂನನ್ನು ಜಾರಿಮಾಡಿ ಕೊನೆಗೆ ಹಿಂದಕ್ಕೆ ಪಡೆಯಲಾಯಿತು. ಏಕೆಂದರೆ ತಾವು ಹಾಕಿದ ಬಲೆಯಲ್ಲಿ ತಾವೆ ಸಿಕ್ಕಿ ಬಿದ್ದರೆ ಎಂಬ ಭಯ. ಈ ಸಂಘಿಗಳು 'ಮತಾಂತರ ನಿಷೇಧ' ಕಾನೂನಿನ ಬಗೆಗೆ ಎಲ್ಲಾ ಕಾಲದಲ್ಲೂ ಹೆಚ್ಚು ಒತ್ತು ಕೊಡುವುದಿಲ್ಲ. ಏಕೆಂದರೆ ಸ್ವತಃ ಅವರೇ ದೊಡ್ಡ ಸಂಖ್ಯೆಯಲ್ಲಿ ಮತಾಂತರ ಮತ್ತು ಮರು ಮತಾಂತರಕ್ಕೆ ಇಳಿದಿದ್ದಾರೆ.

ಅಂತೆಯೇ ಇನ್ನೊಂದು ಸಂಗತಿಯನ್ನು ಮರೆಯುವಂತಿಲ್ಲ. ಉತ್ತರ ಪೂರ್ವಭಾಗದಲ್ಲಿ ವಿದೇಶಿ ಕ್ರೈಸ್ತ ಮಿಶನರಿಗಳು ಆದಿವಾಸಿಗಳನ್ನು ದೊಡ್ಡ ಪ್ರಮಾಣದಲ್ಲಿ ಮತಾಂತರಿಸಿದ ಪರಿಣಾಮ ಅಲ್ಲಿ ಆದಿವಾಸಿಗಳ ಪ್ರತ್ಯೇಕತೆಯ ಚಳುವಳಿ ಬೆಳೆದು ಬಂದು ಭಾರತದ ಅಖಂಡತೆಗೆ ಸವಾಲಾದ ವಿಚಾರ ಎಳು ಎಂಟನೆಯ ದಶಕದ ಒಂದು ಪ್ರಮುಖ ಸಮಸ್ಯೆ. ಈ ಸಮಸ್ಯೆಯನ್ನು ಸಾಮ್ರಾಜ್ಯಶಾಹಿಗಳ ಪಿತೂರಿ ಹಾಗೂ ಭಾರತವನ್ನು ದುರ್ಬಲಗೊಳಿಸುವ ಅವರ ಹುನ್ನಾರದ ಒಂದು ಭಾಗವಾಗಿ ನೋಡಬೇಕೆ ಹೊರತು ಕ್ರೈಸ್ತರ ಉದ್ದೇಶವೇ ಮತಾಂತರ ಎಂಬ ತಪ್ಪು ನಿರ್ಣಯಕ್ಕೆ ಬರಬಾರದು. ಇಲ್ಲಿ 'ಮತಾಂತರ'ವನ್ನು ಪ್ರತ್ಯೇಕತಾವಾದಕ್ಕೆ ಬಳಸಲಾಗಿದೆ. ಇದೇ ರೀತಿ 1959 ರಲ್ಲಿ ಕೇರಳದಲ್ಲಿ EMS ಸರಕಾರವನ್ನು ಉರುಳಿಸುವಲ್ಲಿಯೂ ಈ ಮಿಶನರಿಗಳು ಪ್ರಮುಖ ಪಾತ್ರ ವಹಿಸಿರುವುದನ್ನು ಮರೆಯುವಂತಿಲ್ಲ.

ಸಂವಿದಾನಬದ್ಧ

ಮತಾಂತರವು ಸಂವಿಧಾನ ಬದ್ಧವಾದುದು. ಭಾರತದ ಸಂವಿಧಾನವು ಯಾವುದೇ ಮತವನ್ನು ಹೊಂದಲು ವ್ಯಕ್ತಿಗೆ ಸ್ವಾತಂತ್ರ್ಯವನ್ನು ನೀಡಿದೆ. ಅದು ಪ್ರಜಾಪ್ರಭುತ್ವದ ಒಂದು ಹಕ್ಕು. ಈ ಹಕ್ಕನ್ನು ವ್ಯಕ್ತಿಗತವಾಗಿ ಚಲಾಯಿಸಿದ ಬುದ್ಧಿಜೀವಿಗಳೂ ಸಾಕಷ್ಟು ಇದ್ದಾರೆ. ಉದಾ: ಸುಪ್ರಸಿದ್ಧ ಇಂಗ್ಲಿಷ್ ಕಾದಂಬರಿಕಾರಳಾದ ಕೇರಳದ ಮಾಧವೀ ಕುಟ್ಟಿ (ಅವರು 'ಕಮಲಾದಾಸ್' ಎಂಬ ಹೆಸರಿನಲ್ಲಿ ಬರೆಯುತ್ತಿದ್ದರು) ದಶಂಬರ 1999ರಲ್ಲಿ ತನ್ನ 65ನೆಯ ವಯಸ್ಸಿನಲ್ಲಿ ಇಸ್ಲಾಂಗೆ ಮತಾಂತರಗೊಂಡು ತಮ್ಮ ಹೆಸರನ್ನು ಸುರೈಯ್ಯಾ ಎಂದು ಬದಲಾಯಿಸಿಕೊಂಡರು. ಆನಂತರ ಸ್ವಲ್ಪ ಕಾಲದಲ್ಲೇ ಕೇರಳದ ಸುಪ್ರಸಿದ್ಧ ಮಲೆಯಾಳಿ ಸಾಹಿತಿ "ಪುನಾಥಿಲ್ ಕಂಞಬ್ದುಲ್ಲಾ" ಅವರು ಇಸ್ಲಾಂ ತೊರೆದು ಹಿಂದೂ ಧರ್ಮವನ್ನು ಸ್ವೀಕರಿಸಿದರು. ಅದಾದ ಮೂರು ತಿಂಗಳಲ್ಲಿ ಕೇರಳದ ಯುವಕ ಇಸ್ಲಾಂ ಪಂಡಿತ ಮೌಲವಿ ಹಸನ್ ಪಲಕ್ಕೋಡ್ ಇಸ್ಲಾಂ ತೊರೆದು ಹಿಂದೂ ಧರ್ಮವನ್ನು ಸ್ವೀಕರಿಸಿದರು ಹಾಗೂ ತನ್ನ ಹೆಸರನ್ನು "ಕಮಲ್ ಹಸನ್" ಎಂದು ಘೋಷಿಸಿಕೊಂಡರು. ಅಂತೆಯೇ ಕೇರಳದ ಇನ್ನೊರ್ವ ಬುದ್ಧಿಜೀವಿ ಬಾಲಚಂದ್ರನ್ ಚುಲ್ಲೀಕಡೂ ಅವರು ಬೌದ್ಧದರ್ಮವನ್ನು ಸ್ವೀಕರಿಸಿದರು?

ಭಾರತವು ಪಾಕಿಸ್ತಾನ, ಬಾಂಗ್ಲಾದಂತೆ ಇಸ್ಲಾಮೀ ದೇಶವೂ ಅಲ್ಲ; 'ಹಿಂದೂ' ದೇಶವೂ ಅಲ್ಲ. ಇದು 'ಧರ್ಮನಿರಪೇಕ್ಷಿತ' (Secular) ರಾಷ್ಟ್ರ. ಇಲ್ಲಿ ಯಾವುದೇ ಮತವನ್ನು ಪ್ರಚಾರ ಮಾಡಲಿಕ್ಕೂ ಸ್ವೀಕರಿಸಲಿಕ್ಕೂ ಸ್ವಾತಂತ್ರ್ಯವಿದೆ ಎಂಬುದನ್ನು ಕೋಮುವಾದಿಗಳಿಗೆ ತಿಳಿ ಹೇಳುವವರು ಯಾರು? ಕರಿನಾಯಿಯನ್ನು ಬಿಳಿನಾಯಿ ಮಾಡುವುದು ಅಸಾಧ್ಯ. ಹುಚ್ಚು ಹಿಡಿದ ಕರಿನಾಯಿಯನ್ನು ಸಂಹರಿಸುವ ಸುನಿಯೋಜಿತ ಕಾರ್ಯಕ್ರಮವೊಂ[ದೇ] ಪರಿಹಾರ.

ಜಾತಿವ್ಯವಸ್ಥೆ, ಅಸ್ಪೃಶ್ಯತೆ ಮತ್ತು ಕಮ್ಯೂನಿಷ್ಟರು

ಸ್ವಾತಂತ್ರ್ಯ ಹೋರಾಟದ ಐತಿಹಾಸಿಕ ಕಾಲಘಟ್ಟದಲ್ಲಿ 'ಜಾತಿವಾದ' ಮತ್ತು "ಅಸ್ಪೃಶ್ಯತಾ ವಿರೋಧಿ" ಸಂಘರ್ಷವನ್ನು 'ಸಾಮ್ರಾಜ್ಯವಾದ ವಿರೋಧಿ ಹೋರಾಟ' ಹಾಗೂ 'ಕೃಷಿಕ್ರಾಂತಿ'ಯಿಂದ ಪ್ರತ್ಯೇಕಗೊಳಿಸಿದ್ದರಿಂದಾದ ಭಯಾನಕ ಪರಿಣಾಮಗಳನ್ನು ನಾವು ಇಂದು ಅನುಭವಿಸುತ್ತಿದ್ದೇವೆ.

(ಮುಂದುವರಿಯುವುದು)

ಅಂತರ್ಜಾಲದ ಸಮಸ್ಯೆ...

ಅಂತರ್ಜಾಲ (Internet) ಸಂಪರ್ಕ ಸಾಧ್ಯವಾಗದ ಹಿನ್ನೆಲೆಯಲ್ಲಿ ಕಳೆದ ವಾರದ ಸಂಚಿಕೆಯಲ್ಲಿ ವಾರಾವಾರ ಪ್ರಕಟವಾಗುತ್ತಿರುವ ಕ್ಯಾತೆ, ಜಗದಗಲ, ನೋಟ ಮುಂತಾದ ಅಂಕಣಗಳು ಪ್ರಕಟವಾಗಲಿಲ್ಲ. ಈ ಮೂಲಕ ವಿಷಯವನ್ನು ಓದುಗರ ಗಮನಕ್ಕೆ ತರಲಾಗಿದೆ.

- ಸಂ.

ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರ ಬಿ.ಮಾಧವ ಸಿಪಿಐ(ಎಂ) ಅಭ್ಯರ್ಥಿ

ಉದಾರ ಧನ ಸಹಾಯಕ್ಕೆ ಮನವಿ

ಕರ್ನಾಟಕದಲ್ಲಿ ಸಿಪಿಐ(ಎಂ) ಪಕ್ಷದಿಂದ ಮೂರನೇ ಪರ್ಯಾಯದ ಭಾಗಿದಾರ ಪಕ್ಷಗಳಾದ ಜೆಡಿ(ಎಸ್) ಮತ್ತು ಸಿಪಿಐಗಳ ಬೆಂಬಲದೊಂದಿಗೆ ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಲು ನಿರ್ಧರಿಸಲಾಗಿದೆ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ, ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿಗಳೂ ಹಾಗೂ ಸಿಐಟಿಯು ಸಂಘಟನೆಯ ರಾಜ್ಯ ಅಧ್ಯಕ್ಷರೂ ಆದ ಕಾಂ. ಬಿ.ಮಾಧವ ಪಕ್ಷದ ಅಭ್ಯರ್ಥಿಯಾಗಿರುತ್ತಾರೆ.

ಈ ಚುನಾವಣಾ ಹೋರಾಟದಲ್ಲಿ ಭೂಮಾಲಕ ಬಂಡವಾಳಶಾಹಿ ಪಕ್ಷಗಳ ಭಾರಿ ಹಣಬಲವನ್ನು ಎದುರಿಸಿ ಸ್ಪರ್ಧಿಸಬೇಕಿದೆ. ಲಕ್ಷಾಂತರ ರೂ.ಗಳು ಅಗತ್ಯವಾದ ಈ ಚುನಾವಣೆಯ ಖರ್ಚು ವೆಚ್ಚಗಳಿಗೆ ಸಿಪಿಐ(ಎಂ) ಪಕ್ಷವು ದುಡಿಯುವ ಜನತೆಯನ್ನು ಹಾಗೂ ಪಕ್ಷದ ಹಿತೈಷಿಗಳನ್ನೇ ನೆಚ್ಚಿಕೊಂಡಿದೆ. ಉದಾರವಾದ ಚುನಾವಣಾ ನಿಧಿಗಾಗಿ ಸಿಪಿಐ(ಎಂ) ರಾಜ್ಯ ಸಮಿತಿ ಮನವಿ ಮಾಡಿದೆ.

ಸಂಪಾದಕೀಯ

ಪ್ರಜಾಸತ್ತಾತ್ಮಕ ಹಕ್ಕು ದಮನಿಸುವ ಕ್ರೂರ ಯತ್ನ

ಪೂರ್ಣ ಬಹುಮತ ಪಡೆಯದೇ ಅಧಿಕಾರದಾಹಿಗಳ ಬೆಂಬಲದೊಂದಿಗೆ ಅಧಿಕಾರಕ್ಕೇರಿದ ಬಿಜೆಪಿಯು ರಾಜ್ಯದಲ್ಲಿ ಸರ್ಕಾರದ ಮೂಲಕ ಹೆಚ್ಚುಹೆಚ್ಚಾಗಿ ಪ್ರಜಾಸತ್ತಾತ್ಮಕ ಅವಕಾಶಗಳು, ಹಕ್ಕುಗಳನ್ನು ಕುಗ್ಗಿಸುವ, ದಮನಿಸುವ ಧೋರಣೆಯನ್ನೇ ಅನುಸರಿಸುತ್ತಾ ಬರುತ್ತಿದೆ. ಅಕ್ರಮ ಆಪರೇಷನ್ ಕಮಲ, ಧಾರ್ಮಿಕ, ಜಾತಿಯ ಕೆಲ ಮಠಾಧೀಶರಿಗೆ ಬಜೆಟ್ ಹಣ ನೀಡಿಕೆ ಮೂಲಕ ಓಟಿನ ರಾಜಕಾರಣ, ಕೋಮುವಾದೀ, ಫ್ಯಾಸಿಸ್ಟ್ ಶಕ್ತಿಗಳ ಅಟ್ಟಹಾಸಕ್ಕೆ ಧಾಳಿಗಳಿಗೆ ಕುಮ್ಮಕ್ಕು, ಬೆಂಬಲ ಕೋಮುಗಲಭೆಗೆ ಕಾರಣರಾದ ಕ್ರಿಮಿನಲ್‌ಗಳಿಗೆ ರಕ್ಷಣೆ, ಕೇಸ್ ವಾಪಸ್ ಶಿಕ್ಷಣರಂಗದ ಕೋಮುವಾದೀಕರಣ, ಕಾನೂನು ಸಂವಿಧಾನದ ಉಲ್ಲಂಘನೆಗೆ ಪರೋಕ್ಷ ಬೆಂಬಲ ಇತ್ಯಾದಿಗಳನ್ನು ಪಟ್ಟಿ ಮಾಡಬಹುದು.

ಬಿಜೆಪಿ ಸರ್ಕಾರದ ಈ ಎಲ್ಲಾ ಕ್ರಮಗಳೂ ಕೂಡ ಸಂಘ ಪರಿವಾರದ ನಿರ್ದೇಶನದಂತೆಯೇ ನಡೆಯುತ್ತಿರುವುದನ್ನು ರಾಜ್ಯದ ಜನತೆ ಕಂಡಿದ್ದಾರೆ. ಸಂಘ ಪರಿವಾರದ ಅಜೆಂಡಾಗಳ ಜಾರಿಗೆ, ಸರ್ಕಾರದ ಯಂತ್ರವನ್ನು, ವಿಫುಲ ಅವಕಾಶಗಳ ಶಕ್ತಿ ಬಳಕೆ ಮಾಡುತ್ತಿರುವುದು ನಗ್ನ ಸತ್ಯವಾಗಿದೆ.

ಇಂತಹ ಬಿಜೆಪಿ ಸರ್ಕಾರವು 'ಗೃಹ ಇಲಾಖೆಯ ಮೂಲ ಅಧಿಸೂಚನೆಯನ್ನು ಹೊರಡಿಸಿ ರಾಜಕೀಯ ಪಕ್ಷಗಳು, ಸಾಮೂಹಿಕ ಸಂಘಟನೆಗಳು ಒಟ್ಟಾರೆ ಜನತೆಯ ಪ್ರತಿಭಟನೆಯ ಪ್ರಜಾಸತ್ತಾತ್ಮಕ ಹಕ್ಕನ್ನೇ ಕಿತ್ತುಕೊಳ್ಳಲು ಮುಂದಾಗಿದೆ. ಸಾರ್ವಜನಿಕ ಜಮಾವಣೆ, ಲೈಸೆನ್ಸ್ ಮತ್ತು ನಿಯಂತ್ರಣ (ಬೆಂಗಳೂರು ನಗರ) 2009 ರ ಕರಡು ಅಧಿಸೂಚನೆ ಹೆಸರಿನಲ್ಲಿ ಹೊರಟಿರುವ ಆದೇಶವು ಇನ್ನು ಮುಂದೆ ಯಾವುದೇ ಪ್ರತಿಭಟನೆ ಅಥವಾ ಸಾರ್ವಜನಿಕ ಮತಪ್ರದರ್ಶನ ಮಾಡಬೇಕಾದಲ್ಲಿ ಏಳು ದಿನಗಳ ಮೊದಲೇ ಪೊಲೀಸ್ ಅಧಿಕಾರಿಗಳಿಂದ ಪರವಾನಗಿ ಪಡೆಯಬೇಕಾಗುತ್ತದೆ. ಆಯುಕ್ತರ ಹೆಸರಿನಲ್ಲಿ ನೂರು ರೂಪಾಯಿ ಡಿ.ಡಿ. ನೀಡಿ ಆಯುಕ್ತರ ಹೆಸರಿನಲ್ಲಿ ನೂರು ರೂಪಾಯಿ ಡಿ.ಡಿ. ನೀಡಿ ಲೈಸೆನ್ಸ್‌ಗೆ ಅರ್ಜಿ ಸಲ್ಲಿಸಬೇಕಾಗುತ್ತದೆ. ಇಷ್ಟಾದ ಮೇಲೆಯೂ ಅನುಮತಿ ಕೊಡುವುದು, ಬಿಡುವುದರಲ್ಲಿ ಪೊಲೀಸ್ ಅಧಿಕಾರಿಯ ತೀರ್ಮಾನವೇ ಅಂತಿಮ. ಈ ಕ್ರಮ 25 ಜನರಿಗಿಂತ ಹೆಚ್ಚಿನ ಜನ ತೊಡಗುವುದಿದ್ದರೆ ಕಡ್ಡಾಯವೆಂದು ಹೇಳಲಾಗಿದೆ. ಈಗಾಗಲೇ ರಾಜಧಾನಿಯಲ್ಲಿ 15 ಸಾವಿರಕ್ಕಿಂತ ಅಧಿಕ ಜನರನ್ನು ಸೇರಿಸಬಾರದು ಎಂಬ ನಿರ್ಬಂಧದ ಶಿಫಾರಸು ನ್ಯಾಯಾಲಯದ ಮುಂದಿದೆ. ಈ ಎಲ್ಲದಕ್ಕೂ ಸರ್ಕಾರ ಹೇಳುವಂತೆ ರಸ್ತೆ ಸಂಚಾರಕ್ಕೆ ಅಡ್ಡಿ ಎಂಬುದು ಒಂದು ಪಿಳ್ಳೆನೆಪ ಎಂಬುವುದರಲ್ಲಿ ಅನುಮಾನವೇ ಇಲ್ಲ.

ಪ್ರತಿಭಟನೆ ಎಂಬುದು ಜನತೆಯ, ರಾಜಕೀಯ ಪಕ್ಷಗಳ, ಸಂಘಟನೆಗಳ ಮೂಲಭೂತ ಪ್ರಜಾಸತ್ತಾತ್ಮಕ ಹಕ್ಕಾಗಿದೆ. ಇದನ್ನು ಸಂವಿಧಾನವು ಗ್ಯಾರಂಟಿ ನೀಡಿದ್ದು, ವ್ಯಕ್ತಿಸ್ವಾತಂತ್ರ್ಯದ ರಕ್ಷಣೆಯ ಭಾಗವಾಗಿದೆ. ಸಂವಿಧಾನದ ಕಲಮು 19(1) ಎ, ಮತ್ತು 19(2) ಈ ಹಕ್ಕುಗಳನ್ನೇ ಪ್ರತಿಪಾದಿಸಿ ಎತ್ತಿಹಿಡಿಯುತ್ತದೆ. ರಾಜ್ಯದ ಗೃಹ ಇಲಾಖೆಯ ಅಧಿಸೂಚನೆಯು ಸಂವಿಧಾನದ ಆಶಯ, ನಿರ್ದೇಶನಕ್ಕೆ ವಿರುದ್ಧವಾಗಿದೆ. 1963 ರಲ್ಲಿ ಸುಪ್ರಿಂ ಕೋರ್ಟ್ ತೀರ್ಪು ನೀಡಿ ಪ್ರತಿಭಟನೆಯು ಪ್ರಜೆಗಳ ಹಕ್ಕು, ಅದು ಅಭಾವಿತ ಎಂದಿದೆ ಇಂತಹ ಪ್ರತಿಭಟನೆಯ ಹಕ್ಕನ್ನೂ ಪಡೆಯಲು ಜನತೆಯು ಬ್ರಿಟೀಶರ ವಿರುದ್ಧ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಪಾರ ತ್ಯಾಗ, ಬಲಿದಾನಗಳಿಂದ ಹೋರಾಡಿ ಗಳಿಸಿದ್ದಾಗಿದ್ದು ಆಳುವವರು ನೀಡಿದ ಭಿಕ್ಷೆಯಲ್ಲ. ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭಧಲ್ಲಿ ಬ್ರಿಟೀಷರ ಜೊತೆಗೆ ನಿಂತಿದ್ದ ಸಂಘ ಪರಿವಾರ ಬಿಜೆಪಿಯ ಹಿಂದಿನ ಅವತಾರವಾಗಿದ್ದ ಜನಸಂಘವು ದೇಶದ ಜನತೆ ಗಳಿಸಿದ ಹಕ್ಕುಗಳನ್ನು ಕಿತ್ತುಕೊಳ್ಳುವ ಯತ್ನಗಳ ಮೂಲಕ ತನ್ನ ನಿಜ ಬಣ್ಣವನ್ನು ಬಯಲು ಮಾಡಿಕೊಂಡಿದೆ. ಇದು ಉಗ್ರಖಂಡನೀಯ.

ತಾನು ತುರ್ತುಸ್ಥಿತಿಯ ಕರಾಳ ದಿನಗಳ ವಿರುದ್ಧ ಪ್ರಜಾಪ್ರಭುತ್ವದ ಉಳಿವಿಗೆ ಹೋರಾಡಿದ ಪಕ್ಷವೆಂದೆಲ್ಲಾ ಬೊಗಳೆ ಹೊಡೆಯುವ ಬಿಜೆಪಿ ಅವಕಾಶ ಸಿಕ್ಕಲ್ಲಿ ಪ್ರಜಾಪ್ರಭುತ್ವದ ಕಗ್ಗೊಲೆ ನಡೆಸಿ, ಫ್ಯಾಸಿಸ್ಟ್ ಸ್ವರೂಪದ ಕ್ರೂರ ಸರ್ವಾಧಿಕಾರವನ್ನೇ ಹಂತಹಂತವಾಗಿ ಹೇರಲು ಬಯಸುತ್ತವೆ ಎಂಬುದು ಈ ಪ್ರಕರಣದಲ್ಲಿಯೂ ಸ್ಪಷ್ಟವಾಗಿ ತೋರುತ್ತದೆ.

ತನ್ನ ನೀತಿಗಳ ಪರಿಣಾಮವಾಗಿ ಎದ್ದುಬರುವ ಪ್ರತಿಭಟನೆಗಳನ್ನು ಹೊಸಕಿ ಹಾಕುವ ಇಂತಹ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನಿಸುವ ಬಿಜೆಪಿ ಸರ್ಕಾರದ ಪ್ರಯತ್ನಗಳ ವಿರುದ್ಧ ಎಲ್ಲಾ ಸ್ವಾತಂತ್ರಪ್ರೇಮಿ, ಪ್ರಜಾಸತ್ತಾತ್ಮಕ ಶಕ್ತಿಗಳು ತೀವ್ರವಾಗಿ ಪ್ರತಿರೋಧಿಸಬೇಕು. ಕರಡು ಅಧಿಸೂಚನೆ ರದ್ದುಪಡಿಸಲು ಆಕ್ಷೇಪ ಸಲ್ಲಿಸುವುದಲ್ಲದೇ, ಮುಖ್ಯವಾಗಿ ಇದನ್ನು ತಡೆಯಲು ಪ್ರಬಲ ಸಾರ್ವಜನಿಕ ಆಂದೋಲನವನ್ನು ನಡೆಸಬೇಕು. ಚುನಾವಣೆಯ ಪ್ರಕ್ರಿಯೆ ತೀವ್ರವಾಗುತ್ತಿರುವಾಗಲೇ ಇಂತಹ ಅಧಿಸೂಚನೆ ಹೊರಡಿಸಿರುವುದು ಸರ್ಕಾರದ ಕುತಂತ್ರಗಳ ಪ್ರಮಾಣವನ್ನೇ ತೋರಿಸುತ್ತದೆ. ಈ ಪ್ರಶ್ನೆಯೂ ಒಳಗೊಂಡು ಇಂತಹ ಹಲವು ಅಂಶಗಳನ್ನು ಒಂದು ರಾಜಕೀಯ ಪ್ರಶ್ನೆಯಾಗಿ ಜನರ ನಡುವೆ ಕೊಂಡೊಯ್ಯುವುದು ಅಗತ್ಯ.

ಆದ್ದರಿಂದ ಎಂತಹ ಬೆಲೆ ತೆತ್ತಾದರೂ ಜನತೆಯ ಪ್ರಜಾಸತ್ತಾತ್ಮಕ ಹಕ್ಕು ಉಳಿಸಿಕೊಳ್ಳಲು ಹೋರಾಟ ಸಾಗಲೇಬೇಕು. ಜಾಗತೀಕರಣ, ವಿದೇಶಿ ಬಂಡವಾಳ, ಸಾಮ್ರಾಜ್ಯಶಾಹಿಗಳಿಗೆ ಮುಕ್ತ ಆಹ್ವಾನದ ಈ ದಿನಗಳಲ್ಲಿ ಹೆಚ್ಚೆಹೆಚ್ಚುಗೂ ಹೋರಾಡಬೇಕಾದ್ದು ಅನಿವಾರ್ಯ ಅಗತ್ಯ.

ಓಟ್ ಬ್ಯಾಂಕ್ ರಾಜಕಾರಣದಲ್ಲಿ ನಲುಗಿದ ಜನತೆ



ಲೋಕಸಭೆಯ ಚುನಾವಣೆಗೆ ಸಿದ್ಧತೆಗಳು ವೇಗ ಪಡೆದುಕೊಳ್ಳುತ್ತವೆ. ಅಭ್ಯರ್ಥಿಗಳ ಆಯ್ಕೆಗೆ ವಿಪರೀತ ಕಸರತ್ತುಗಳು, ಗೆಲುವಿಗೆ ಹಾಗೆಯೇ ಕೇಂದ್ರದಲ್ಲಿ ಅಧಿಕಾರ ಹಿಡಿಯಲು ಮೈತ್ರಿಗಳ ವರಸೆಗಳು ನಡೆದಿವೆ. ಕಳೆದ ವಾರ ಎಡಪಕ್ಷಗಳು, ಹಾಗೂ ಇತರೆ ಸೆಕ್ಯೂಲರ್ ಪಕ್ಷಗಳ ಮೂರನೆಯ ಪರ್ಯಾಯಕ್ಕೆ ಚಾಲನೆ ದೊರೆತ ನಂತರ ಇದಕ್ಕೆ ಹೊಸ ಮಿತ್ರರೂ ಸೇರುತ್ತಾ, ಹೆಚ್ಚಿನ ಭರವಸೆಯನ್ನು ಮೂಡಿಸುತ್ತಿರುವುದು ಗಮನಾರ್ಹ. ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ಜೊತೆಯಲ್ಲಿರುವ ಪಕ್ಷಗಳೂ ಸಹ ಮೆಲ್ಲಮೆಲ್ಲನೆ ಅಲ್ಲಿಂದ ಕಳಚಿಕೊಂಡು ಮೂರನೆಯ ಪರ್ಯಾಯದತ್ತ ಬರುತ್ತಿದ್ದರೆ, ಇನ್ನೂ ಕೆಲವರು ಚುನಾವಣಾ ಫಲಿತಾಂಶ ನೋಡಿಕೊಂಡು ಸೇರಿಬಿಡುವುದಾಗಿಯೂ ಇಂಗಿತ ವ್ಯಕ್ತಪಡಿಸುತ್ತಿವೆ. ಈ ಪಕ್ಷಗಳೂ ಸಹ ಬಿಜೆಪಿ, ಕಾಂಗ್ರೆಸ್‌ನೊಂದಿಗೆ ಸುಮಧುರ ಮೈತ್ರಿ ಮುಂದುವರಿಸಲು ಇಷ್ಟಪಡದೇ ತಾವು ಬಲವಿರುವ ರಾಜ್ಯಗಳಲ್ಲಿ ಅವುಗಳಿಗೆ ಹೆಚ್ಚಿನ ಸ್ಥಾನ ನೀಡಲೂ ನಿರಾಕರಿಸುತ್ತಿವೆ. ಹೀಗಾಗಿ ತಾವೇ ಪರಸ್ಪರ ಪರ್ಯಾಯಗಳು ಎಂದೆಲ್ಲಾ ಡಂಗುರ ಹೊಡೆಯುತ್ತಿದ್ದ ಕಾಂಗ್ರೆಸ್, ಬಿಜೆಪಿಗಳು ಮಿತ್ರರಿಲ್ಲದೆ ಸೊರಗುತ್ತಿವೆ.

ಹತಾಶೆ

ವಿಶೇಷವಾಗಿ ದೆಹಲಿ ಗದ್ದುಗೆ ಹೇಗೂ ಹಿಡಿದೇತೀರುವೆವೆಂಬ ಮಹದಾಕಾಂಕ್ಷೆಯಲ್ಲಿರುವ ಬಿಜೆಪಿಯು ಪ್ರಧಾನಿ ಅಭ್ಯರ್ಥಿಯನ್ನು ಆಯ್ಕೆ ಮಾಡಿಕೊಂಡು ಕುಳಿತಿದ್ದರೂ ಎಷ್ಟೆಲ್ಲಾ ಹಣ ಸುರಿಯಲು, ಆಧುನಿಕ ತಂತ್ರಜ್ಞಾನ ಬಳಸಿ ಪ್ರಚಾರಿಸಲು ಯತ್ನಿಸುತ್ತಿದ್ದರೂ ಅದಕ್ಕೆ ಅಷ್ಟು ಬೆಂಬಲ ಸಿಗದೆ ಇರುವುದರಿಂದ ಒಂದೆಡೆ ಹತಾಶೆಯನ್ನೂ ಅನುಭವಿಸುತ್ತಿದೆ.



ಕರ್ನಾಟಕದಲ್ಲಂತೂ ಅನೈತಿಕವಾದ 'ಆಪರೇಷನ್ ಕಮಲ' ಮಾಡುತ್ತಾ ಬೇರೆ ಪಕ್ಷಗಳ ನಾಯಕರು, ಕಾರ್ಯಕರ್ತರನ್ನು ಸೆಳೆಯುತ್ತಿದ್ದರೂ ಬಹಿರಂಗವಾಗಿ ಹೇಳುತ್ತಿದ್ದಂತೆ 18 ರಿಂದ 20 ಸ್ಥಾನ ಗೆಲ್ಲಲು ಅಸಾಧ್ಯವೆನ್ನಿಸುತ್ತದೆ. ಇಂತಹ ಸ್ಥಿತಿಯಲ್ಲಿ ಅದು ಹೆಚ್ಚು ಹೆಚ್ಚು ಮತೀಯ ಉನ್ಮಾದ, ಕೋಮು ವಿಭಜನೆ ಉದ್ರಿಕ್ತಗೊಳಿಸಲು ತೊಡಗಿದೆ. ಹಾಗೆ ಮುಚ್ಚಿಟ್ಟಿದ್ದ ರಾಮಮಂದಿರ ವಿವಾದವನ್ನು ಕೇಂದ್ರ ಬಿಜೆಪಿ ಹೊರತೆಗೆದಿದ್ದು ಇಂತಹ ಹಿನ್ನೆಲೆಯಲ್ಲಿಯೇ.

ಅದೇ ರೀತಿ ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸುವಲ್ಲಿಯೂ ಅದು ಹಿಂದೆ ಬಿದ್ದಿಲ್ಲ. ರಾಜ್ಯದಲ್ಲಂತೂ ಮುಖ್ಯಮಂತ್ರಿ, ಮಂತ್ರಿಗಳ, ಅಭ್ಯರ್ಥಿಗಳು, ಅಧಿಕಾರಿಗಳು ಇದರಲ್ಲಿ ಸಿಕ್ಕಿಹಾಕಿಕೊಂಡರು. ಹೀಗೆ ಬಿಜೆಪಿಯು ಒಂದು ಹಂತದಲ್ಲಿ ಅಕ್ರಮ ರಾಜಕೀಯ ಸಿದ್ಧತೆ, ವರಸೆ ನಡೆಸಿದ್ದರೆ, ಇನ್ನೊಂದೆಡೆ ಇದು ಸಾಕಾಗಲಾರದು ಎಂದು ಸಂಘಪರಿವಾರವೇ ಬಿಜೆಪಿಗೆ ಓಟು ಸಂಗ್ರಹಿಸಿಕೊಡಲು ತೊಡಗಿದೆ. ಕೇವಲ ಸಾಂಸ್ಕೃತಿಕ ಸಂಘಟನೆ ಎಂಬ ಆರ್‌ಎಸ್‌ಎಸ್ ತನ್ನ ಅಂಗಸಂಸ್ಥೆಗಳ ಮೂಲಕ ಹಿಂದೂ ಸಮಾಜೋತ್ಸವ ಸಂಘಟಿಸುತ್ತಿದೆ. ಸರ್ವ ಸಂಗ ಪರಿತ್ಯಾಗಿ (!) ಸನ್ಯಾಸಿ ಎನ್ನಲಾಗುವ ಉಡುಪಿಯ ಪೇಜಾವರ ವಿಶ್ವೇಶ್ವರತೀರ್ಥ ಮಠಾಧೀಶರು, 'ಹಿಂದೂ ಸಮಾಜೋತ್ಸವ'ಗಳ ಹೆಸರಿನಲ್ಲಿ ಬಿಜೆಪಿಗೆ ಓಟು ಕೊಡಿಸುವ ಅಭಿಯಾನವನ್ನು ನಡೆಸುತ್ತಿದ್ದಾರೆ. ಅವರೇ ಹೇಳುವಂತಹ ರಾಮಮಂದಿರ ನಿರ್ಮಾಣ, ಮತಾಂತರ ನಿಷೇಧ ಭಯೋತ್ಪಾದನೆ ನಿರ್ಮೂಲನೆ, ಹಿಂದೂ ಸಂಸ್ಕೃತಿಯ ಮೇಲೆ ಪಾಶ್ಚಾತ್ಯ ಸಂಸ್ಕೃತಿಯ ಆಕ್ರಮಣ ತಡೆ ಇತ್ಯಾದಿಗಳು ನೇರವಾಗಿ ಅಲ್ಪಸಂಖ್ಯಾತ ಮುಸ್ಲಿಂ, ಕ್ರಿಶ್ಚಿಯನ್ ಅಲ್ಲದೆ ಪ್ರಗತಿಪರರನ್ನು ಗುರಿಯಾಗಿಸಿಕೊಂಡಿವೆ. ಈ ಮೂಲಕ ಇಂದಿನ ದೇಶದ ಎಲ್ಲಾ ಸಮಸ್ಯೆಗಳಿಗೂ ಇವರೇ, ಈ ಶತ್ರುಗಳೇ ಕಾರಣವಾಗಿವೆ ಎಂದೂ ಕೃತಕ ಶತ್ರು ಸೃಷ್ಟಿಸಿ, ಆ ಮೂಲಕ ಭಾರತೀಯ ಸಮಾಜದಲ್ಲಿ ಜನತೆಯಲ್ಲಿ ಕೋಮು ಆಧಾರದ ವಿಭಜನೆ ತರುತ್ತಿರುವುದು ಮತ್ತು ಬಿಜೆಪಿಗೆ ಓಟು ಹಾಕಲು ಮತ ಕ್ರೋಢೀಕರಣವೇ ಈ 'ಸಮಾಜೋತ್ಸವ'ದ ರಾಜಕಾರಣ.

ಇದನ್ನೇ ಅನುಸರಿಸಿ ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂಟ್ವಾಳ, ಪುತ್ತೂರು, ಕುಂದಾಪುರ, ಗಂಗೊಳ್ಳಿ, ಬೈಂದೂರು, ಕಾಪು, ಹಾವೇರಿ, ಮುಂಡಗೋಡ, ಹುಕ್ಕೇರಿ, ಶಿರಾ ಮುಂತಾದೆಡೆ ಕೋಮುಗಲಭೆಗಳನ್ನು ಸೃಷ್ಟಿಸಲಾಗಿದೆ. ಚುನಾವಣೆ ಘೋಷಿತವಾದ ಈ ಅವಧಿಯಲ್ಲಿ 19ಕ್ಕೂ ಹೆಚ್ಚು ಕೋಮುಗಲಭೆ, ಅಕ್ರಮಣದ ಘಟನೆಗಳು ವರದಿಯಾಗಿವೆ. ಇನ್ನು ಕರಾವಳಿಯಲ್ಲಿ 'ಸಂಸ್ಕೃತಿ ರಕ್ಷಕ' ಸ್ವಯಂ ಪೊಲೀಸರ ದೌರ್ಜನ್ಯಗಳಿಗೆ ಕಡಿವಾಣವೇ ಇಲ್ಲವಾಗಿದೆ. 'ಪೇಜಾವರರ' ಈ ಸಮಾಜೋತ್ಸವಗಳು ಬಿಜೆಪಿಗೆ ಓಟನ್ನು ಕ್ರೋಢೀಕರಿಸುವ, ಅದಕ್ಕಾಗಿ ಧರ್ಮವನ್ನು ಬಳಸುವುದು, ಅನ್ಯಧರ್ಮೀಯರ ವಿರುದ್ಧ ಪ್ರಚೋದಿಸುವುದು ಸಂವಿಧಾನದ, ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆಯಾಗಿದೆ. ಇಂತಹ ಸಮಾವೇಶಗಳಲ್ಲಿ ಗೃಹಸಚಿವ ಆಚಾರ್ಯ, ಮತ್ತಿತರರು

ಪುಟ 7ಕ್ಕೆ

ಮನೆಯೊಳಗಿನ ಎಳ್ಳೆಣ್ಣೆಯ ಕಿರುದೀಪ, ಮನಸಿನಲ್ಲಿ ಕುರುಡುಗತ್ತಲೆ!

ಬೈಂದೂರಿನ ಬಳಿ ಚಿತ್ರೀಕರಣವೊಂದಕ್ಕಾಗಿ ಚಾರ್ಲಿಚಾಪ್ಲಿನ್ ಪ್ರತಿಮೆ ಸ್ಥಾಪಿಸಬೇಕೆಂದು ಹೊರಟರೆ ಆತ ಕ್ರಿಶ್ಚಿಯನ್ ಅನ್ನುವ ಕಾರಣಕ್ಕೆ ವಿರೋಧ ಬರಬೇಕೆ?

ಜೋಗಿ

ದಯವಿಟ್ಟು ಕ್ಷಮಿಸಿ,

ನನ್ನ ಅಜ್ಞಾನಕ್ಕೆ. ಗಮನಿಸಿದೇ ಇದ್ದಿದ್ದಕ್ಕೆ. ಆ ವಿಚಾರವಾಗಿ ಯೋಚಿಸದೇ ಉಳಿದಿದ್ದಕ್ಕೆ. ಹಿಂದುವಾಗಿ ಹಿಂದುಸ್ತಾನದ ಪ್ರಜೆಯಾಗಿ ದಕ್ಷಿಣ ಕನ್ನಡದಲ್ಲಿ ಹುಟ್ಟಿದ್ದಕ್ಕಾಗಿ ಹಾಗೆಲ್ಲ ಯೋಚಿಸದೆ ಇದ್ದದ್ದು ಎಂಥ ದೊಡ್ಡ ತಪ್ಪು ಎಂದು ಈಗ ಅರ್ಥವಾಗುತ್ತಿದೆ.


ಎಷ್ಟು ಸರಳ ಸಂಗತಿ ನೋಡಿ. ಚಾರ್ಲಿ ಚಾಪ್ಲಿನ್ ಅವನು ನಗಿಸಿದಷ್ಟು ಯಾರೂ ನಗಿಸಿಲ್ಲ. ಅವನು ಅಳಿಸುತ್ತಲೇ ನಗಿಸುತ್ತಿದ್ದ. ಮಾತಿಲ್ಲದೆ ನಗಿಸುತ್ತಿದ್ದ. ಸರ್ವಾಧಿಕಾರದ ವಿರುದ್ಧ ಸಿಡಿದೇಳುತ್ತಿದ್ದ. ಮೂಲಭೂತವಾಗಿ ಗುಣವನ್ನು ಖಂಡಿಸುತ್ತಿದ್ದ. ನಮಗೆಲ್ಲ ಇಷ್ಟವಾಗುತ್ತಿದ್ದ. ನಾವೆಲ್ಲ ಅವನನ್ನು ಪ್ರೀತಿಸುತಿದ್ದೆವು. ಮೆಚ್ಚಿಕೊಳ್ಳುತ್ತಿದ್ದೆವು. ಆರಾಧಿಸುತ್ತಿದ್ದೆವು.

ಛೇ, ಎಂಥಾ ತಪ್ಪಾಗಿ ಹೋಯಿತು. ಅವನು ಕ್ರಿಶ್ಚಿಯನ್ ಎಂದು ನಮಗೆ ಹೊಳೆದಿರಲೇ ಇಲ್ಲ. ಒಂದು ವೇಳೆ ಹೊಳೆದಿದ್ದರೆ ಅವನನ್ನು ದ್ವೇಷಿಸಬಹುದಿತ್ತು. ಅವನ ಜೋಕುಗಳಿಗೆ ಬಿಮ್ಮನೆ ಕೂತು ಪ್ರತಿಕ್ರಿಯಿಸದೇ ಉಳಿಯಬಹುದಾಗಿತ್ತು. ಆತನ ಸಿನಿಮಾಗಳನ್ನು ನೋಡಿ ನಗುವವರ ಮೇಲೆ ರೇಗಬಹುದಾಗಿತ್ತು. 'ನಾಚಿಕೆ ಆಗಬೇಕು ನಿಮ್ಮ ಜನ್ಮಕ್ಕೆ. ಒಬ್ಬ ಕ್ರಿಶ್ಚಿಯನ್ ಮಾಡಿದ ಸಿನಿಮಾಗಳನ್ನು ನೋಡಿ ನಗುತ್ತಿದ್ದೀರಲ್ಲ' ಎಂದು ಹೀಯಾಳಿಸಬಹುದಿತ್ತು. ಶಕ್ತಿಯಿದ್ದರೆ ತೋಳೇರಿಸಿ ಮೂತಿಗೆರೆಡು ತಪರಾಕಿ ಕೊಟ್ಟು ಇನ್ನು ಚಾಪ್ಲಿನ್ ಸಿನಿಮಾ ನೋಡಿದರೆ ಜೋಕೆ ಎಂದು ಎಚ್ಚರಿಕೆ ನೀಡಬಹುದಾಗಿತ್ತು.

ಇದರಲ್ಲಿ ನಮ್ಮ ತಪ್ಪೇನಿಲ್ಲ ಬಿಡಿ. ನಮಗೆ ಪಾಠ ಕಲಿಸಿದ ಮೇಷ್ಟ್ರುಗಳೂ ಹಾಗೇ ಇದ್ದರು. ಅವರು ಯಾವತ್ತೂ ಚಾರ್ಲಿಚಾಪ್ಲಿನ್ ಕ್ರಿಶ್ಚಿಯನ್ ಎಂದು ಹೇಳಲಿಲ್ಲ. ಅವನ ಜಾತಿಯ ಬಗ್ಗೆ ನಮಗೆ ಹೇಳಿಕೊಡಲೇ ಇಲ್ಲ. ಆಗ ನಾವಿನ್ನೂ ಚಿಕ್ಕವರು. ಎಳೆಯ ಮನಸ್ಸುಗಳಿಗೆ ಇಂಥ ವಿಚಾರಗಳನ್ನು ತಿಳಿಸಿಕೊಡುವುದು ಗುರುಗಳ ಕರ್ತವ್ಯ. ಗುರುದೇವೋ ಮಹೇಶ್ವರ ಎಂದು ನಂಬಿದವರು ನಾವು. ನಮಗೇ ಗುರುಗಳು ಮೋಸ ಮಾಡಿದರೆ? ಅವರನ್ನು ಗುರುಗಳೆಂದು ಹೇಗೆ ಕರೆಯುವುದು.

ಹೋಗಲಿ, ಮೊದಲ ಗುರು ಎಂದು ನಾವು ಕರೆಯುವ ಅಮ್ಮನೂ ಆ ಬಗ್ಗೆ ಹೇಳಲಿಲ್ಲ. ಚಾಪ್ಲಿನ್ ಜಾತಿ ಯಾವುದೆಂದು ಅವಳಿಗೆ ಗೊತ್ತಿತ್ತೋ ಇಲ್ಲವೋ? ಗೊತ್ತಿಲ್ಲದೇ ಇದ್ದರೆ ಅವಳ ತಪ್ಪಲ್ಲ. ಗೊತ್ತಿದ್ದೂ ಹೇಳದೇ ಹೋದರೆ ಅದು ಅಪರಾಧವೇ ಸರಿ. ನನ್ನ ಅಜ್ಞಾನದಲ್ಲಿ ಅವಳದೂ ಪಾಲಿದೆ. ಹೋಗಲಿ ನಮ್ಮೂರಿನ ಮಂದಿಯಾದರೂ ಹೇಳಿದರೆ? ಮಂಗಳೂರಿನ ನ್ಯೂಚಿತ್ರಾ ಥೇಟರಿಯಲ್ಲಿ ಚಾಪ್ಲಿನ್ ಸಿನಿಮಾ ನೋಡಲು ಹೋಗುತ್ತಿದ್ದಾಗ ಅಲ್ಲಿಗೆ ಬರುತ್ತಿದ್ದ ನಮ್ಮೂರ ಮಂದಿಯಾದರೂ ಹೇಳಬಾರದಿತ್ತೇ? ಎಂಥವರ ಮಧ್ಯೆ ನಾನಿದ್ದೆ ಎಂದು ನೆನೆದರೆ ಪಶ್ಚಾತ್ತಾಪವಾಗುತ್ತದೆ.

ಬೆಂಗಳೂರಿಗೆ ಬಂದ ಮೇಲೂ ಯಾರೂ ಈ ಬಗ್ಗೆ ನನ್ನ ತಿಳುವಳಿಕೆಯನ್ನು ವಿಸ್ತರಿಸಲೇ ಇಲ್ಲ. ಗೆಳೆಯ ಸಿಆರ್ ಸಿಂಹ ಮನೆಗೆ ಹೋದಾಗ ಮನೆಯ ಒಂದು



ಕಂಬದಲ್ಲೇ ಚಾಪ್ಲಿನ್ ಮೂರ್ತಿ ಕೆತ್ತಿದ್ದರು. ಅವರಿಗೂ ಚಾಪ್ಲಿನ್ ಕ್ರಿಶ್ಚಿಯನ್ ಎಂದು ಗೊತ್ತಿರಲಿಲ್ಲ ಎಂದು ಕಾಣುತ್ತದೆ. ಅವರಿಗೂ ನನಗೆ ಸಿಕ್ಕಂಥ ಗುರುಗಳೇ ಸಿಕ್ಕಿರಬೇಕು. ಮೇಷ್ಟ್ರು ಎಲ್ಲಾ ಊರುಗಳಲ್ಲೂ ಒಂದೇ ಥರ ಇರುತ್ತಾರೆಂದು ಕಾಣುತ್ತದೆ.

ಸಾಹಿತಿಗಳೂ ಸಮಾಜದ ಕಣ್ತೆರೆಸಬೇಕು ಎನ್ನುತ್ತಾರೆ. ನಾನು ಬಹುವಾಗಿ ಮೆಚ್ಚಿದ ಸಾಹಿತಿಗ ಈ ಕೆಲಸ ಮಾಡಲಿಲ್ಲ. ಕುಂ. ವೀರಭದ್ರಪ್ಪನ ಅನೇಕ ಕತೆ ಕಾದಂಬರಿಗಳ ಅಭಿಮಾನಿಯಾಗಿದ್ದ ನಾ ಅವರ ಬರೆದ ಚಾರ್ಲಿ ಚಾಪ್ಲಿನ್ ಪುಸ್ತಕವನ್ನು ಓದಿ ಅದರಲ್ಲೂ ಅವರು ಈ ಅಂಶವನ್ನು ಮುಚ್ಚಿಟ್ಟಿದಾ

ಮೊನ್ನೆ ಮೊನ್ನೆ ದಕ್ಷಿಣ ಕನ್ನಡದ ಒತ್ತಿನೆಣೆ ಎಂ ಚಾರ್ಲಿ ಚಾಪ್ಲಿನ್ ಮೂರ್ತಿಯನ್ನು ಸ್ಥಾಪಿಸ ಹೊರಟ ಗೆಳೆಯ ನಿರ್ದೇಶಕ ಹೇಮಂ ಹೆಗಡೆಯವರನ್ನು ತಡೆದು ನಿಲ್ಲಿಸಿ ಕೆಲವು ಸನ್ಮಿತ್ರ ಬುದ್ಧಿವಾದ ಹೇಳಿದ್ದಾರೆ. ಚಾಪ್ಲಿನ್ ಕ್ರಿಶ್ಚಿಯನ್ ಮ ಸೇರಿದವನು. ಅವನ ಪ್ರತಿಮೆ ಸ್ಥಾಪಿಸಬ ಎಂದಿದ್ದಾರೆ. ಜೊತೆಗೇ ಅವನು ಭಾರತಕ್ಕೆ ಮಾಡಿದ್ದಾನೆ ಎಂದು ಕೇಳಿದ್ದಾರೆ.

ಎಂಥಾ ಒಳ್ಳೆಯ ಪ್ರಶ್ನೆ? ಎಂಥಾ ತಿಳುವಳಿ ಈ ಕಾಲದಲ್ಲಿ ಜ್ಞಾನದ ಹಂಚಿಕೆ ಎಷ್ಟು ಸಮ ಆಗುತ್ತಿದೆ. ನಾವು ಎಷ್ಟು ಆಧುನಿಕವಾಗುತ್ತಿದ್ದೇವ ಸಂತೋಷವಾಗುತ್ತಿದೆ. ಅಂಥವರು ನಮ್ಮ ಬಾ ತಾರುಣ್ಯ ಕಾಲದಲ್ಲೂ ಯಾಕಿರಲಿಲ್ಲ ಎಂ ಬೇಸರವಾಗುತ್ತದೆ. ನಮ್ಮ ಜೊತೆಗಿದ್ದವ ಶತದಡ್ಡರೆಂಬ ತೀರ್ಮಾನಕ್ಕೆ ಬಂದಿದ್ದೇನೆ. ಇ ಮೇಲೆ ಇಂಥ ಪ್ರಕಾಂಡ ಪಂಡಿತರ ಜೊ ಓಡಾಡಲು ನಿರ್ಧರಿಸಿದ್ದೇನೆ. ಆಗಲಾದರೂ ಜ್ಞಾನದಿಗಂತ ವಿಸ್ತರಿಸಲಿ. ತಮಸೋಮ ಜ್ಯೋತಿರ್ಗಮಯ.

ಜ್ಯೋತಿರ್ಗಮಯ ಎಂದಾಗ ನೆನಪಾಯಿ ಇದನ್ನು ರಾತ್ರಿ ಲೈಟ್ ಹಾಕಿಕೊಂಡು ಕಂಪ್ಯೂಟರಿ ಟೈಪ್ ಮಾಡುತ್ತಿದ್ದೆ. ಅರೇ, ವಿದ್ಯುತ್ ಕಂ ಹಿಡಿದವನು ಬೆಂಜಮಿನ್ ಫ್ರಾಂಕ್ಲಿನ್. ಬ

ಪುಟ 1

ಆಪರೇಷನ್ ಸೈಡ್ ಎಫೆಕ್ಟು!

ಕ್ಯಾತೆ

ಶ್ರೀ

ಇತ್ತ ಕರ್ನಾಟಕದಿಂದ 22 ಸಂಸದರನ್ನು ಗೆಲ್ಲಿಸಿ ಸನ್ಮಾನ್ಯ ಶ್ರೀ ಅದ್ವಾನಿಯವರನ್ನು ಪ್ರಧಾನಿ ಪಟ್ಟಕ್ಕೇರಿಸುವುದೇ ನಮ್ಮ ಗುರಿ ಎಂದು ಸನ್ಮಾನ್ಯ ಯಡಿಯೂರಪ್ಪನವರು ಗುಡುಗಿಕೊಂಡು ತಿರುಗಾಡುತ್ತಿದ್ದರೆ, ಅತ್ತ ಅದ್ವಾನಿಯವರ ರಥದ ಒಂದೊಂದೇ ಚಕ್ರಗಳು ಕಳಚಿಕೊಳ್ಳುತ್ತವೆ. ಜತೆಗೆ ಅವರ ಪಕ್ಷದವರೇ ಚಕ್ರಗಳಿಗೆ ಚುಚ್ಚಿ ಟುಸ್ ಅಂತ ಪಂಕ್ಚರ್ ಮಾಡುತ್ತಿದ್ದಾರೆ. ಯಾಕೋ ಅದ್ವಾನಿಯವರ ರಥದ ವಾಸ್ತು ಸರಿಯಿಲ್ಲ ಅನಿಸುತ್ತೆ. ಅದ್ವಾನಿಯವರನ್ನು ಪ್ರಧಾನಿಯನ್ನಾಗಿಸಲು 22 ಸ್ಥಾನ ಗೆದ್ದೇ ಗೆಲ್ಲುತ್ತೇವೆ ಎಂದು ಸರಕಾರಿ ಆಜ್ಞೆ ಹೊರಡಿಸಿದ ಹಾಗೆ ಪಂಚಾಯಿತ್ಕೆ ಮಂತ್ರಿಣಿಯವರು ಘೋಷಿಸುತ್ತಿರುವಂತೆ, ಸನ್ಮಾನ್ಯ ಮು.ಮಂ.ಗಳ ಕುರ್ಚಿಯೇ ಅಲುಗಾಡತೊಡಗಿದೆ. ಅದೇನೇ ಆಗಲಿ, ರಾಜ್ಯದಲ್ಲಿ ಇಪ್ಪತ್ತೆಂಟು ಸ್ಥಾನಗಳಿರುವಾಗ ಕೇವಲ ಇಪ್ಪತ್ತೆರಡೇ ಸ್ಥಾನ ಯಾಕೆ? ಇನ್ನುಳಿದ ಆರು ಸ್ಥಾನಗಳಲ್ಲಿ ಆಗಲೇ ಸೋಲೊಪ್ಪಿಕೊಂಡಾಯಿತೇ? ಅಥವಾ 22 ಒಳ್ಳೆಯ ಸಂಖ್ಯೆ ಎಂದು ಜೋತಿಷಿಗಳೇನಾದರೂ ಹೇಳಿದರೇ? ಅಥವಾ ಗಣಕಾರಣಿಗಳು ಅಷ್ಟನ್ನು ಮಾತ್ರ ಗೆಲ್ಲಿಸಿ ಕೊಡುವ ಕಂಟ್ರಾಕ್ಟ್ ತಗೊಂಡಿದ್ದಾರೆಯೇ?

ಸನ್ಮಾನ್ಯ ಯಡಿಯೂರಪ್ಪನವರಿಗೆ ಐದು ವರ್ಷ ಮು.ಮಂ ಕುರ್ಚಿಯ ಯೋಗವಿಲ್ಲ ಅಂತ ಕೋಡಿ ಮಠದ ಸ್ವಾಮಿಗಳು ಹೇಳಿದ್ದಾರಂತಲ್ಲ? ಛೇ ಬಜೆಟ್‌ನಲ್ಲಿ ಕೋಡಿ ಮಠಕ್ಕೆ ಪ್ರಸಾದ ಸಿಕ್ಕಿಲ್ಲವೇ? ಭವಿಷ್ಯ ಹೇಳುವವರು ಒಳ್ಳೇ ಭವಿಷ್ಯ ಹೇಳಿದರೆ, ಅವರಿಗೆ ಮುಂದಿನ ಬಜೆಟ್‌ನಲ್ಲಿ ಒಳ್ಳೆ ಭವಿಷ್ಯವಿದೆ! ಅಪಶಕುನದ ಭವಿಷ್ಯ ಹೇಳಿದಲ್ಲಿ, ಭವಿಷ್ಯ ಹೇಳುವ ದಂಧೆಯ ಮೇಲೆ ತೆರಿಗೆ ಹಾಕುವ ಸಂಭವವಿದೆ!

ಒಂದು ವೇಳೆ ಭವಿಷ್ಯವನ್ನು ಮೀರಿ ಇದೇ ಘನ ಸರಕಾರ ಮುಂದುವರೆದರೆ ಸರಕಾರದ ಮಂತ್ರಿಗಳ ಖಾತೆಗಳು ಹೀಗೆ ಬದಲಾಗಬಹುದು. ಮುಖ್ಯ ಮಂತ್ರಿ ಎನ್ನುವ ಬದಲು ಮಠದ ಮಂತ್ರಿ ಎನ್ನಬಹುದು. ಚರ್ಚು ಧಾಳಿ ಖಾತೆಗೆ ಸಂಪುಟದರ್ಜೆ ಸಚಿವ. ಪಬ್ಬು ಧಾಳಿ ಖಾತೆಗೆ ಅ(ಉ)ಪ ಸಚಿವ!. ಮಹಿಳೆಯರ ಮತ್ತು ಮಕ್ಕಳ ಮೇಲೆ ಧಾಳಿ ಖಾತೆ, ಕೈಕಾಲು ಮುರಿಯುವ ಖಾತೆ!. ನಾಲಿಗೆ ಕೀಳುವ ಖಾತೆ! ಕಲಾವಿದರನ್ನು, ಸಾಹಿತಿಗಳನ್ನು ಎತ್ತಸೆಯುವ ಖಾತೆ! ವಿದ್ಯಾಭ್ಯಾಸದಲ್ಲಿ ವಿಷ ಬೆರೆಸುವ ಖಾತೆ! ನಿಕ್ಕರ್ ಮಕ್ಕಳ ರಕ್ಷಣಾ ಖಾತೆ, ಇತ್ಯಾದಿ..,

ಆಪರೇಷನ್ ಕಾ ಮಲ ದ ಸೈಡ್ ಎಫೆಕ್ಟ್ ಶುರುವಾಗಿದೆ. ವಿಚಿತ್ರ ನೋಡಿ, ಸೈಡ್ ಎಫೆಕ್ಟು ಆಪರೇಷನ್ ಮಾಡಿಸಿಕೊಂಡವರಿಗಲ್ಲ. ಆಪರೇಷನ್ ಮಾಡಿಸಿದವರಿಗೆ!

ಭ್ರಷ್ಟಾಚಾರಿ ಶಾಸಕರನ್ನು (ಶಾಸ ಭವನದಲ್ಲಿ) ಹಿಡಿಯುವ ಹಾಗಿಲ್ಲ ಅಂತ ಸನ್ಮಾನ್ಯ ಸ್ಪೀಕರ್ ರವರು ರೂಲಿಂಗ್ ನೀಡಿದ್ದಾರಂತೆ.

ಭ್ರಷ್ಟಾಚಾರ ನಿರ್ಮೂಲನೆಗಾಗಿ ಬಿ ಜೇ ಪಿ ಸೇರಿದ ಮಾಜಿ ಲೋಕಾಯುಕ್ತರು ಏನನ್ನುತ್ತಾರೆ?

ರಾಜ್ಯದಲ್ಲಿ ಈ ಪರಿ ಪವರ್ ಕಟ್ ನೋಡಿ ಬೇಸತ್ತಿರೋ ಜನತೆ , ಈ ಬಿ ಜೇ ಪಿ ಗೂ ಪವರ್ ಕಟ್ ಮಾಡಿ , ಪವರ್ ಕಟ್ ಆದ್ರೆ ಎಷ್ಟು ಕಷ್ಟ ಅಂತ ತೋರಿಸಬೇಕು ಅಂತ ಕಾಯ್ತಿದಾರಂತೆ.

ಕೇಂದ್ರ ಸರಕಾರ ಮಲತಾಯಿ ಅಂತ ಮಾತು ಮಾತಿಗೆ ಹೇಳೋ ಮು.ಮಂ. ಗಳು, ಕೇಂದ್ರ ಗೃಹ ಮಂತ್ರಿ ಕರೆದ ಮೂರು ಸಭೆಗಳಿಗೂ ಗೈರು ಹಾಜರಾಗಿದ್ದಲ್ಲ. ಇವರದ್ದು ಮಲ ಮಗನ ಧೋರಣೆ ಎನ್ನಬಹುದೇ? ಸ್ವಂತ ಮಗನ ಉದ್ಧಾರದ ಪಣ ತೊಟ್ಟು, ರಾಜ್ಯದ ರಕ್ಷಣೆ ವಿಚಾರದಲ್ಲಿ ಈ ರೀತಿ ಮಲ ಮಗನ ಧೋರ ತೋರಬಹುದೇ?



ಸಿಪಿಐ(ಎಂ) ಪ್ರಣಾಳಿಕೆ

ಭಾರತದ ಜನತೆಗೊಂದು ಹೊಸದಾರಿ

ಭಾಗ 1

ರಾಷ್ಟ್ರರಾಜಕಾರಣದಲ್ಲಿ ದುಡಿಯುವ ಜನತೆಯ ಪರವಾಗಿ ಶೋಷಿತ ಸಮುದಾಯಗಳ ಪರವಾಗಿ ಮಹತ್ವದ ಪಾತ್ರವಹಿಸುತ್ತಿರುವ ಸಿಪಿಐ(ಎಂ) ಪಕ್ಷವು ಇತ್ತೀಚೆಗೆ ತನ್ನ ಚುನಾವಣಾ ಪ್ರಣಾಳಿಕೆ ಬಿಡುಗಡೆ ಮಾಡಿದೆ. ಒಂದು ಜನಪರವಾದ ನೀತಿಗಳ ಆಧಾರದಲ್ಲಿ ಬಿಜೆಪಿ-ಕಾಂಗ್ರೆಸ್‌ಗಳಿಗೆ ಬದಲಿಯೊಂದನ್ನು ರೂಪಿಸುವ ಆಶಯವುಳ್ಳ ಪ್ರಣಾಳಿಕೆಯ ಮುಖ್ಯಾಂಶಗಳ ಕುರಿತ ಲೇಖನ.

ಪಿಐ(ಎಂ) ಪಕ್ಷವು ಭಾರತದ ಜನತೆಯು ಎಡ ುತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬಲಪಡಿಸಲೂ ಕೇಂದ್ರದಲ್ಲಿ ಪರ್ಯಾಯ ಜಾತ್ಯಾತೀತ ವೊಂದನ್ನು ರಚಿಸಲು ಮತ ನೀಡಬೇಕೆಂದೂ ೆ ನೀಡುತ್ತದೆ. ಕಾಂಗ್ರೆಸ್ ನೇತೃತ್ವದ ಸರ್ಕಾರವು ದು ವರ್ಷಗಳ ಆಡಳಿತವು ಜನತೆಗೆ ದೊಡ್ಡ ರಾಶೆಯನ್ನು ತಂದಿದೆ. ಮಾತ್ರವಲ್ಲ 2004 ರ ೋಕಸಭಾ ಚುನಾವಣೆಯಲ್ಲಿ ಜನತೆ ನೀಡಿದ ನಾದೇಶಕ್ಕೆ ದ್ರೋಹ ಬಗೆದಿದೆ. ಉದಾರೀಕರಣ ುತ್ತು ಖಾಸಗೀಕರಣ ನೀತಿಗಳಿಗೆ ಕಟಿಬದ್ಧವಾದ ಂಗ್ರೆಸ್ ಪಕ್ಷವು ಇಂದು ಜಾಗತಿಕ, ಆರ್ಥಿಕ ಬಿಕ್ಕಟ್ಟಿನ ನ್ನೆಲೆಯಲ್ಲಿ ಸಂಪೂರ್ಣ ವಿಶ್ವಾಸಾರ್ಹತೆಯನ್ನು ೆದುಕೊಂಡಿದೆ. ಈ ನೀತಿಗಳು ದೇಶದ ಕಾರ್ಮಿಕ, ೈತ, ಕೃಷಿ ಕೂಲಿಕಾರರು, ಕುಶಲ ಕೆಲಸಗಾರರು, ಣ್ಣ ವ್ಯಾಪಾರಿಗಳು, ಮಹಿಳೆಯರು, ವಿದ್ಯಾರ್ಥಿ ಯುವಜನರ ಹಿತಗಳಿಗೆ ಶತ್ರು ಎಂಬುದು ಈಗಾಗಲೇ ಾಬೀತಾಗಿದೆ. ಅಮೇರಿಕದ ಅಂಗಿಯ ಚುಂಗಿಗೆ ಾರತದ ಭವಿಷ್ಯವನ್ನು ಗಂಟು ಹಾಕುವಂತಹ ಕ್ಷವೊಂದಕ್ಕೆ ಒಂದು ಸಾರ್ವಭೌಮ, ್ರಜಾಸತ್ತಾತ್ಮಕ ಗಣತಂತ್ರವಾದ ಾರತವನ್ನಾಳುವ ಅರ್ಹತೆಯಿಲ್ಲ.

ಜೆಪಿ ಪಕ್ಷವು ನಮ್ಮ ದೇಶದ ತ್ಯಂತ ಪ್ರತಿಗಾಮಿ ಶಕ್ತಿಗಳನ್ನು ್ರತಿನಿಧಿಸುತ್ತದೆ. 1998 ರಿಂದ 2004 ವರೆಗೆ ಬಿಜೆಪಿ ನೇತೃತ್ವದ ಆಡಳಿತವು ್ರೀಮಂತ ಪರವಾದ ಮತ್ತು ೋಮುವಾದಿ ನೀತಿಗಳಿಂದ ೂಡಿತ್ತು. ಬಿಜೆಪಿಯ ಸಿದ್ಧಾಂತವು ಾತ್ಯಾತೀತ ವ್ಯವಸ್ಥೆಯ ಪರಿಕಲ್ಪನೆಗೆ ದ್ವಿರುದ್ಧವಾಗಿದೆ. ಅದು 'ಎನ್‌ಡಿಎ' ರನ್ನು ತನ್ನ ಹಿಂದುತ್ವದ ಾಜಕೀಯವನ್ನು ಮರೆಮಾಚಲು ಳಸಬಯಸುತ್ತದೆ. ಕಳೆದ ಐದು ರ್ಷಗಳ ಅವಧಿಯಲ್ಲಿ ಪ್ರಮುಖ ವಿರೋಧ ಕ್ಷವಾಗಿ ಅದು ಮಾಡಿದ್ದಾದರೂ ಏನು? ಯೋತ್ಪಾದನೆ ಸೇರಿದಂತೆ ಪ್ರತಿಯೊಂದೂ ್ರಶ್ನೆಯನ್ನು ಕೋಮುವಾದಿ ನೆಲೆಯಲ್ಲಿ ಎತ್ತುವುದು.

ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಎರಡೂ ಪಕ್ಷವನ್ನು ಜನತೆ ಸೋಲಿಸುವುದು ಗತ್ಯವಾಗಿದೆ. ದೇಶಕ್ಕೆ ಪರ್ಯಾಯ ನೀತಿ ಬೇಕಾಗಿದೆ. ಅದು ಜನಪರ ಆರ್ಥಿಕ ನೀತಿಯಾಗಿದ್ದು, ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಖಾತ್ರಿಪಡಿಸುವಂತದ್ದೂ, ದೃಢವಾದ ಜಾತ್ಯಾತೀತತೆಯನ್ನು ಹೊಂದಿರುವಂಥದ್ದೂ ಪ್ರಾಮಾಣಿಕವಾದ ಒಕ್ಕೂಟ ತತ್ವವನ್ನಾಧರಿಸಿದ್ದೂ ಆಗಿರಬೇಕಾಗುತ್ತದೆ ಮತ್ತು ಒಂದು ಸ್ವತಂತ್ರ ವಿದೇಶಾಂಗ ನೀತಿಯನ್ನು ಹೊಂದಿರಬೇಕಾಗುತ್ತದೆ. ಸಿಪಿಐ(ಎಂ) ಪಕ್ಷವು ಎಲ್ಲ ಪ್ರಜಾಸತ್ತಾತ್ಮಕ ಜಾತ್ಯಾತೀತ ಶಕ್ತಿಗಳೂ ಇಂತಹ ಪರ್ಯಾಯವೊಂದನ್ನು ಬೆಂಬಲಿಸಬೇಕೆಂದು ಮನವಿ ಮಾಡುತ್ತದೆ. ಸಿಪಿಐ(ಎಂ) ಪಕ್ಷವು ಕಾಂಗ್ರೆಸ್, ಬಿಜೆಪಿಗಳಿಗೆ ಹೊರತಾದ ಹಾಗೂ ಪ್ರಜಾಪ್ರಭುತ್ವವನ್ನು ಬಲಿಪಡಿಸುವ, ಸಮಾನ ಆರ್ಥಿಕ ಬೆಳವಣಿಗೆ ಹಾಗೂ ಸಾಮಾಜಿಕ ನ್ಯಾಯಕ್ಕೆ ಬದ್ಧವಾದ ಸರ್ಕಾರವೊಂದರ ರಚನೆಗಾಗಿ ಶ್ರಮಿಸಲಿದೆ.

ಕಾಂಗ್ರೆಸ್ ನೇತೃತ್ವದ ಸರ್ಕಾರದ ದಾಖಲೆಗಳು

ಐದು ವರ್ಷಗಳ ಕಾಂಗ್ರೆಸ್ ನೇತೃತ್ವದ ಯುಪಿಎ ಆಡಳಿತವು ಸಮಾಜದಲ್ಲಿನ ಅಸಮಾನತೆಯನ್ನು ಇನ್ನಷ್ಟು ತೀವ್ರಗೊಳಿಸಿದೆ ಮತ್ತು ಶ್ರೀಮಂತರು ಸೂಪರ್ ಶ್ರೀಮಂತರಾಗಿದ್ದಾರೆ. ಅದೇ ಸಮಯದಲ್ಲಿ ಬಡವರು ಮತ್ತಷ್ಟು ಬಸವಳಿದಿದ್ದಾರೆ.



ಆಹಾರ ಮತ್ತು ಕೃಷಿಯ ಕುರಿತ ತಾತ್ಸಾರದ ಧೋರಣೆ :

ಕೃಷಿ ಬಿಕ್ಕಟ್ಟು ಮುಂದುವರೆದಿದೆ. ರೈತರ ಆತ್ಮಹತ್ಯೆಗಳು ಮುಂದುವರಿದೇ ಇವೆ. ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಡಿತರ ವ್ಯವಸ್ಥೆ)ಯನ್ನು ಮತ್ತಷ್ಟು ದುರ್ಬಲಗೊಳಿಸಲಾಗಿದೆ. ಸರ್ಕಾರದ ಬಿಪಿಎಲ್ ವರ್ಗೀಕರಣವು ದೊಡ್ಡ ಪ್ರಮಾಣದಲ್ಲಿ ಬಡವರನ್ನು ಹೊರಗಿಟ್ಟಿದೆ. ಎಪಿಎಲ್ ವಿಭಾಗಕ್ಕೆ ನೀಡಲಾಗುತ್ತಿದ್ದ ಆಹಾರ ಧಾನ್ಯಗಳಲ್ಲಿ ಭಾರಿ ಕಡಿತ ಮಾಡಲಾಗಿದೆ. ಮೂರು ಕೋಟಿ ಟನ್‌ಗಳಷ್ಟು ಆಹಾರಧಾನ್ಯವು ಗೋದಾಮುಗಳಲ್ಲಿ ಬಿದ್ದಿದೆ. ಆದರೂ ಕೂಡ ಸರ್ಕಾರವು ಆಹಾರಧಾನ್ಯ ಕಡಿತವನ್ನು ಕೈಬಿಡಲು ಒಪ್ಪುತ್ತಿಲ್ಲ.

ಬೆಲೆ ಏರಿಕೆ ತಡೆಗೆ ವಿಫಲ :

ಅಗತ್ಯ ವಸ್ತುಗಳ ನಿರಂತರ ಬೆಲೆ ಏರಿಕೆಯ ಪರಿಣಾಮವಾಗಿ ಜನತೆ ತೀವ್ರ ತೊಂದರೆಗೆ ಗುರಿಯಾಗಿದ್ದಾರೆ. ಹಣದುಬ್ಬರ ದರ ಶೇ.4 ಕ್ಕಿಂತ ಕಡಿಮೆಯಾಗಿದೆ ಎಂದು ಸರ್ಕಾರ ಹೇಳಿಕೊಳ್ಳುತ್ತಿದ್ದರೂ ಆಹಾರಧಾನ್ಯಗಳ ಬೆಲೆಗಳು ಶೇ.10 ರ ದರದಲ್ಲಿ ಏರುತ್ತಿವೆ.



ದೊಡ್ಡ ಕಂಪನಿಗಳ ಹಿತಾಸಕ್ತಿ ಕಾಯುತ್ತಾ :

ಮನಮೋಹನ್‌ಸಿಂಗ್ ಸರ್ಕಾರವು ದೇಶೀಯ, ವಿದೇಶೀಯ ದೊಡ್ಡ ಕಾರ್ಪೊರೇಟ್ ಕಂಪನಿಗಳ ಪರವಾದ ನೀತಿಗಳನ್ನು ಜಾರಿಗೆ ತಂದಿತು. SEZ ಎನ್ನುವುದು ಭೂಮಿ ಕಬಳಿಸುವ ಕಾರ್ಪೊರೇಟ್ ಕಂಪನಿಗಳ ಭೂಮಿದಾಹಕ್ಕೆ ತಕ್ಕಂತೆ ರೂಪಿತವಾಗಿದೆ. ಅಲ್ಲದೆ ಈ ಕಂಪನಿಗಳಿಗೆ ಯಥೇಚ್ಛ ತೆರಿಗೆ, ಸುಂಕ ವಿನಾಯಿತಿ ನೀಡಲಾಗುತ್ತಿದೆ. ಶೇರುಮಾರುಕಟ್ಟೆಯಲ್ಲಿ ಬಂಡವಾಳದ ಗಳಿಕೆ ಮೇಲೆ ತೆರಿಗೆ ವಿಧಿಸಲು ಸಿದ್ಧವಿಲ್ಲದ ಸರ್ಕಾರದ ಧೋರಣೆ ಮತ್ತು ಮಾರಿಷಸ್ ಮಾರ್ಗದ ಮೂಲಕ ಶೇರು ಬಂಡವಾಳದ ಪ್ರವೇಶಕ್ಕೆ ಮುಕ್ತ ಅವಕಾಶ ನೀಡುವ ನೀತಿಯು ದೇಶೀಯ ಮತ್ತು ವಿದೇಶಿಯ ಜೂಜುಕೋರರಿಗೆ ಬೃಹತ್ ಲಾಭ ಮಾಡಿಕೊಳ್ಳಲು ಅವಕಾಶ ನೀಡುವ ಉದ್ದೇಶ ಹೊಂದಿದೆ. ಚಿಲ್ಲರೆ ವ್ಯಾಪಾರದಲ್ಲಿ ಹಿಂಬಾಗಿಲ ಮೂಲಕ ಬರುತ್ತಿರುವ ವಿದೇಶಿ ನೇರ ಬಂಡವಾಳ ದೇಶದ ಲಕ್ಷಾಂತರ ಸಣ್ಣ ವ್ಯಾಪಾರಸ್ಥರು ಮತ್ತು ಅಂಗಡಿ ಮಾಲೀಕರ ಜೀವನಾಧಾರವನ್ನು ನಾಶ ಮಾಡುತ್ತಿದೆ.

ಜನರ ಹಕ್ಕುಗಳ ನಿರಾಕರಣೆ : ಕಾರ್ಮಿಕರ ಮತ್ತು ನೌಕರರ ಹಕ್ಕುಗಳನ್ನು ಹತ್ತಿಕ್ಕಲಾಗಿದೆ. ಕಾರ್ಮಿಕರ ಭವಿಷ್ಯ ನಿಧಿಯ ಮೇಲಿನ ಬಡ್ಡಿದರವನ್ನು 8.5 ಕ್ಕೆ ಇಳಿಸಲಾಗಿದೆ. ಸರ್ಕಾರವು ಉದ್ಯೋಗವನ್ನು ಗುತ್ತಿಗೀಕರಣ ಮಾಡಲು ಹಾಗೂ 'ದಿನಗೂಲೀಕರಣ' ಮಾಡಲು ಪ್ರೋತ್ಸಾಹಿಸಿತು. ಮಹಿಳೆಯರಿಗೆ ಶಾಸನಸಭೆಯಲ್ಲಿ ಪಾರ್ಲಿಮೆಂಟ್‌ನಲ್ಲಿ ಶೇ.33 ಮೀಸಲಾತಿ ನೀಡುವ ವಿಚಾರದಲ್ಲಿ ಸಮಾನ ಕನಿಷ್ಟ ಕಾರ್ಯಕ್ರಮದಲ್ಲಿ ನೀಡಲಾದ ಭರವಸೆಯನ್ನು ಈಡೇರಿಸದೇ ಮಾತು ತಪ್ಪಿತ್ತು. ಮುಸ್ಲಿಂ ಅಲ್ಪಸಂಖ್ಯಾತರಿಗೆ ಯೋಜನೆಯೊಳಗೊಂದು ಉಪ ಯೋಜನೆ ರೂಪಿಸುವ ಶಿಫಾರಸ್ಸು ಸೇರಿದಂತೆ ಅಲ್ಪಸಂಖ್ಯಾತರ ಅಭಿವೃದ್ಧಿಯ ಕುರಿತ ಸಾಚಾರ್ ವರದಿಯ ಶಿಫಾರಸ್ಸುಗಳನ್ನು ಜಾರಿ ಮಾಡುವಲ್ಲಿ ಕೇಂದ್ರ ಯುಪಿಎ ಸರ್ಕಾರ ವಿಫಲವಾಯಿತು.

ಜಾಗತಿಕ, ಆರ್ಥಿಕ ಬಿಕ್ಕಟ್ಟಿನಿಂದ ಜನರನ್ನು ರಕ್ಷಿಸುವಲ್ಲಿ ವೈಫಲ್ಯ

ಕಳೆದ ಆರು ತಿಂಗಳ ಅವಧಿಯಲ್ಲಿ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮವು ಸಾಮೂಹಿಕವಾದ ಉದ್ಯೋಗನಾಶದ ಮೂಲಕ ಜನರ ಬದುಕನ್ನು ಹಾಗೂ ಕಾಂಗ್ರೆಸ್ ನೇತೃತ್ವದ ಕೇಂದ್ರಸರ್ಕಾರವನ್ನು ತಟ್ಟಿದೆ. ಆದರೆ ಸರ್ಕಾರವು ಘೋಷಿಸಿದ ಆರ್ಥಿಕ ಉತ್ತೇಜಕ ಪ್ಯಾಕೇಜು ಯಾತಕ್ಕೂ ಸಾಲದ್ದಾಗಿದೆ. ಮಾತ್ರವಲ್ಲ ಪ್ಯಾಕೇಜ್ ಉದ್ದೇಶವು ದೊಡ್ಡ ಕಾರ್ಪೋರೇಟ್ ಕಂಪನಿಗಳಿಗೆ ತೆರಿಗೆ ವಿನಾಯತಿ ನೀಡುವ ಉದ್ದೇಶ ಹೊಂದಿವೆ.

ಕೋಮುವಾದದ ಅಪಾಯ

ಬಿಜೆಪಿ, ಆರೆಸ್ಸೆಸ್ ಕೂಟವು ಸಂಘ ಪರಿವಾರದ ಅಂಗಸಂಸ್ಥೆಗಳು ಕೋಮು ಗಲಭೆಗಳನ್ನು ಪ್ರಚೋದಿಸುತ್ತಾ ಅಲ್ಪಸಂಖ್ಯಾತರನ್ನು ದಾಳಿಗೆ ಗುರಿಮಾಡುತ್ತಿವೆ. ಕಳೆದ 5 ವರ್ಷಗಳ ಅವಧಿಯಲ್ಲಿ ಮಧ್ಯಪ್ರದೇಶ, ರಾಜಸ್ಥಾನ, ಚತ್ತೀಸ್‌ಘಢ, ಗುಜರಾತ್, ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ಪ್ರದೇಶ, ಉತ್ತರಪ್ರದೇಶ ಮುಂತಾದ ರಾಜ್ಯಗಳಲ್ಲಿ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ದಾಳಿಗಳು ನಡೆದವು.

ಒರಿಸ್ಸಾದ ಕಂದಮಾಲ್ ಜಿಲ್ಲೆಯ ಕ್ರಿಶ್ಚಿಯನ್ನರ ಮೇಲಿನ ಅತ್ಯಂತ ಹೀನ ದಾಳಿಯನ್ನು ಕಂಡಿತು.

ಪುಟ 11 ಕ್ಕೆ

ಮಹಿಳೆಯರ ಬಗ್ಗೆ ಮೊಸಳೆ ಕಣ್ಣೀರು ಸುರಿಸುವ ಯಡಿಯೂರಪ್ಪರವರ ತಂತ್ರ, ಕುತಂತ್ರಗಳು

ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರ ಮಹಿಳೆಯರ ಕುರಿತು ಇನ್ನಿಲ್ಲದ ಕಾಳಜಿ ತನ್ನದು ಎಂದು 'ಪ್ರದರ್ಶನ' ನೀಡುತ್ತದೆ. ತೋರಿಕೆಯ ಕಾಳಜಿ ವಾಸ್ತವವಾಗಿ ಜಾರಿಗೆ ಬರಬೇಕಲ್ಲ! ಸರ್ಕಾರದ ಮಹಿಳಾಪರ ಕಾಳಜಿಯ ನಿಜ ಹೂರಣವೇನೆಂದು ವಿವರಿಸುವ ಲೇಖನ

ಎಸ್.ವರಲಕ್ಷ್ಮಿ

ರಾಜ್ಯದಲ್ಲಿ ಜೆಡಿಎಸ್, ಬಿಜೆಪಿ ಸರ್ಕಾರದ ಪತನದ ನಂತರ ಬಿಜೆಪಿ ಅಧಿಕಾರದ ಗದ್ದುಗೆಯೇರುವ ಮುನ್ನ ಚುನಾವಣೆಗಳಲ್ಲಿ ಹಲವಾರು ಆಶ್ವಾಸನೆಗಳನ್ನು ನೀಡಲಾಗಿತ್ತು. ಆ ಚುನಾವಣೆಗಳಲ್ಲಿ ಬಿಜೆಪಿಯ ನಾಯಕಿ ಸುಶ್ಮ ಸ್ವರಾಜ್ ಟಿ.ವಿ. ಚಾನಲ್‌ಗಳಲ್ಲಿ ಪತ್ರಿಕೆಗಳಲ್ಲಿ ಜಾಹೀರಾತುಗಳಲ್ಲಿ ಬೆಲೆಯೇರಿಕೆಯಿಂದ ಜನರನ್ನು ರಕ್ಷಿಸಲು, ಹಸಿವಿನಿಂದ ಬಳಲಿದವರಿಗೆ, 1 ಕೆ.ಜಿ ಅಕ್ಕಿ, ಮಹಿಳೆಯರ ಸಬಲೀಕರಣ ಪ್ರಸ್ತುತ ಸವಾಲಿಗೆ ಬಿಜೆಪಿ ಪರಿಹಾರ ಎಂಬ ಘೋಷಣೆಗಳೊಂದಿಗೆ ಅಧಿಕಾರಕ್ಕೆ 2008 ಮೇ 30 ರಂದು ಅಸ್ತಿತ್ವಕ್ಕೆ ಬಂದಿತು. ಅಧಿಕಾರಕ್ಕೆ ಬಂದು 10 ತಿಂಗಳುಗಳಾಗಿವೆ. 100 ದಿನದ ಸರ್ಕಾರೀ ಸಂಭ್ರಮಾಚರಣೆ, ಅಧಿಕಾರದ ಗದ್ದುಗೆ ಹಿಡಿಯಲು ಮತ್ತು ಬಿಜೆಪಿಯಲ್ಲಿ ಯಡಿಯೂರಪ್ಪರವರ ಮೇಲುಗೈ ಪಡೆಯಲು 'ಆಪರೇಷನ್ ಕಮಲದ' ಮುಖಾಂತರ ಕುರ್ಚಿ ಬದ್ರ ಮಾಡಿಕೊಳ್ಳುವಲ್ಲಿ ಮೆರೆದ ಶ್ರದ್ಧೆ ಮತ್ತು ಮುತುವರ್ಜಿ ತಾನೇ ಕೊಟ್ಟ ಆಶ್ವಾಸನೆಗಳಿಗೆ ಸಿಗಲಿಲ್ಲ.

ಪ್ಯಾಕೇಟ್‌ನಿಂದ ಬಾಟಲಿಗೆ

ಮಹಿಳೆಯರ ಬಗ್ಗೆ ವಿಶೇಷ ಕಾಳಜಿಯನ್ನು ವ್ಯಕ್ತ ಮಾಡುವ, ಮಹಿಳೆಯರ ಬಗ್ಗೆ ವಿಶೇಷ ಪ್ರೀತಿ 'ಪ್ರದರ್ಶನ' ಮಾಡುವ ಮುಖ್ಯಮಂತ್ರಿಗಳು ಸಾರಾಯಿ ಮಾರಾಟ ನಿಷೇದ ಮಾಡಿದ್ದು ಯಾಕೆ ಎಂಬ ಪ್ರಶ್ನೆಯಿದೆ. ಇದು ಮೇಲ್ನೋಟಕ್ಕೆ 'ಕಳ್ಳಬಟ್ಟಿ ಸಾರಾಯಿ ದುರಂತವನ್ನು ತಪ್ಪಿಸಲು ಮಾಡಿದ ನಿಷೇದ' ಆದರೆ ವಾಸ್ತವವೇ ಬೇರೆ. ಸಾರಾಯಿ ಉತ್ಪನ್ನ ಮಾಡುವವರು ಕೆಳವರ್ಗದ ಜನತೆ. ಈ ಸಾರಾಯಿಯನ್ನು ಕುಡಿದು ಹಗಲಿಡೀ ದುಡಿದ ಮನುಷ್ಯ ಗ್ರಾಮಾಂತರ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ 10 ರೂಗಳನ್ನು ಕೊಟ್ಟು ಸಾರಾಯಿ ಕುಡಿಯುತ್ತಿದ್ದ. ಆದರೆ ಈಗ ಸಾರಾಯಿ ನಿಷೇದದಿಂದ 10 ರೂ. ಖರ್ಚು ಮಾಡುವವನು 40 ರೂ. ಕೊಟ್ಟ ಕುಡಿಯಬೇಕಾದ ಪರಿಸ್ಥಿತಿ. ಕೃಷಿ ಕೂಲಿಕಾರ, ಬಡರೈತ, ಅಸಂಘಟಿತ ವಲಯದ ಕಾರ್ಮಿಕ ಮತ್ತು ಇತರ ಕಡಿಮೆ ಆದಾಯದ ಜನರಿಗೆ "ಪ್ಯಾಕೆಟ್‌ನಿಂದ ಬಾಟಲಿಗೆ ಪ್ರಮೋಷನ್‌ವನ್ನು ಸರ್ಕಾರ ಕೊಟ್ಟಿದೆ ವಿನ: ಸಂಪೂರ್ಣ ಮದ್ಯಪಾನ ನಿಷೇಧವಲ್ಲ. ಸಾರಾಯಿ ನಿಷೇಧ ಮಾಡಿ ಹೆಚ್ಚಿನ ಬಾರ್‌ಗಳಿಗೆ ಲೈಸೆನ್ಸ್ ಕೊಟ್ಟಿದ್ದರ ಅರ್ಥವೇನು? ಬಾರ್‌ಗಳಿಗಾಗಿ ಮದ್ಯ ತಯಾರು ಮಾಡುವ ಕೋಡೆ ಸಾಮ್ರಾಜ್ಯದ ವಿಜಯ ಮಲ್ಯ, ದಾಸಪ್ಪ ಮುಂತಾದ ಕೋಟಿಗಟ್ಟಲೆ ಕಪ್ಪು ಹಣ ಇಟ್ಟಂತಹವರು ತಯಾರಿಸುವ ಮದ್ಯ ಎಲ್ಲೆಡೆ ಸುಲಭವಾಗಿ ಎಲ್ಲ ಜನರಿಗೆ ಸಿಗುವಂತೆ ಮಾಡಿದ್ದೇ ಹೊರತು ಬೇರೇನೂ ಅಲ್ಲ.

ಸಾರಾಯಿ ನಿಷೇದದಿಂದ ಮಹಿಳೆಯರ ಉಳಿತಾಯಕ್ಕೆ ಕತ್ತರಿ ಬಿದ್ದಿರುವುದಂತೂ ಸತ್ಯ.

ಸ್ತ್ರೀಶಕ್ತಿ ಮತ್ತು ಸ್ವಸಹಾಯ ಗುಂಪುಗಳ ಅನುದಾನದ ಬಗ್ಗೆ

ರಾಜ್ಯದಲ್ಲಿ ಮಹಿಳೆಯರ ಸಾಮಾಜಿಕ, ಆರ್ಥಿಕವಾಗಿ ಸಬಲೀಕರಣಕ್ಕೆ ಎಂದು ಹೇಳಿ ರಾಜ್ಯದಲ್ಲಿ ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಲಾಯಿತು. ಈ ಗುಂಪುಗಳನ್ನು ರಚಿಸುವಾಗ ಗುಂಪಿನ ಸದಸ್ಯರು ಬಿಪಿಎಲ್ ಕಾರ್ಡನ್ನು ಪಡೆದವರು ಮಾತ್ರ ಎಂಬ ನಿಯಮ ಇತ್ತು. ಈ ನಿಯಮವನ್ನು ಪ್ರಾಯೋಗಿಕವಾಗಿ ಹಳ್ಳಿಗಳಲ್ಲಿ ಜಾರಿ ಮಾಡಲು ಆಗಲಿಲ್ಲ. ಈ ಗುಂಪುಗಳನ್ನು ರಚಿಸಲು ಕಡ್ಡಾಯವಾಗಿ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯನ್ನು ಬಳಸಲಾಯಿತು. ಹಳ್ಳಿಯ ಮಹಿಳೆಯರ ಬಳಿ 10-15 ಮಹಿಳೆಯರನ್ನು ಒಂದೆಡೆ ಕೂರಿಸಿ, ಅವರಿಗೆ ಸಭೆಯಲ್ಲಿ ಪಾಲ್ಗೊಳ್ಳಲು ಮಾತನಾಡಲು, ಸಭೆಯಲ್ಲಿ ನಡೆದ ಚರ್ಚೆಗಳನ್ನು ದಾಖಲು ಮಾಡಲು ಕಲಿಸುವುದು, ಅದರಂತೆ ಸಭೆ ನಡೆಸುವ ಜವಾಬ್ದಾರಿ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಪ್ರಮುಖ ಜವಾಬ್ದಾರಿಯನ್ನಾಗಿ ಅಂದಿನ ಸರ್ಕಾರ ಮಾಡಿತು. ಈ ರೀತಿಯಲ್ಲಿ ಪ್ರತಿ ಹಳ್ಳಿಯಲ್ಲಿ, ಪ್ರತಿ ಮನೆಯ ಮಹಿಳೆಯರನ್ನು ಹೊರಗೆ ತಂದು ಸ್ತ್ರೀ ಶಕ್ತಿ ಮುಖಾಂತರ ಸಂಘಟಿಸಲಾಯಿತು. ಈ 20 ಲಕ್ಷ ಮಹಿಳೆಯರು 1.40 ಲಕ್ಷ ಗುಂಪುಗಳು ರಚಿತಗೊಂಡು 600 ಕೋಟಿ ರೂ.ಗಳ ಹಣವನ್ನು ಉಳಿತಾಯ ಮಾಡಲು ಸಾಧ್ಯವಾಗಿದೆ.

ಸ್ತ್ರೀ ಶಕ್ತಿ ಮಹಿಳೆಯರು ಮತ್ತು ಮಹಿಳಾ ಚಳುವಳಿ ಈ ಗುಂಪುಗಳಿಗೆ ಸಬ್ಸಿಡಿ ಲೋನ್, ಉದ್ಯೋಗ, ತರಬೇತಿ, ಮಾರುಕಟ್ಟೆ ಮತ್ತು ಸಾಮಾಜಿಕ ವಿಚಾರಗಳಿಗಾಗಿ ಹೋರಾಟ ಮಾಡಬೇಕೆಂದೂ ಬಯಸುತ್ತದೆ.

ಆದರೆ ಸರ್ಕಾರ ಇವರನ್ನು ಸರಿಯಾಗಿ ನಿಭಾಯಿಸದೇ, ವೈಜ್ಞಾನಿಕವಾದಂತಹ ಯಾವುದೇ ಯೋಜನೆಗಳು ಇಲ್ಲವೇ ಬೇಕಾಬಿಟ್ಟಿಯಾಗಿ ಬಳಕೆಯಾಗುತ್ತಿದೆ.

ಈ ಗುಂಪುಗಳು ರಚನೆಗೊಂಡ ಬಳಿಕ ನೊಂದಣಿ ಮಾಡಲು ದಾಖಲಾತಿ ಪುಸ್ತಕ ಮತ್ತು 1 ಟ್ರಂಕನ್ನು ಕೊಟ್ಟು, ಕ್ರಿಯಾತ್ಮಕವಾದ 6 ತಿಂಗಳ ನಂತರ 5000 ರೂ.ಗಳ ಪ್ರೋತ್ಸಾಹಧನ ನೀಡಲಾಗುತ್ತದೆ.

ಜಾತಿವಾರು ವಿಭಜನೆ

ಒಂದು ತರಬೇತಿಯನ್ನು ನೀಡಿದ ನಂತರ ಸರ್ಕಾರದ ಜವಾಬ್ದಾರಿಯಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕೆಲವು ಸ್ಕೀಮುಗಳನ್ನು ಜಾತಿಯಾಧಾರದಲ್ಲಿ ಕೆಲವೊಂದು ಸಾಲ ಸೌಲಭ್ಯಗಳು ಕೆಲವು ಗುಂಪುಗಳಿಗೆ ಮಾತ್ರ ಸಿಗುತ್ತವೆ.

1 ಗುಂಪು 50 ಸಾವಿರ ಗಳನ್ನು ಉಳಿಸಿದರೆ 60 ರಿಂದ 70 ಸಾವಿರ ಹಣವನ್ನು ಸ್ಥಳೀಯ ಬ್ಯಾಂಕ್‌ಗಳು ಶೇ.10ರ ಬಡ್ಡಿಯ ಲೋನ್‌ಗಳನ್ನು ಕೊಡುತ್ತೇವೆ. ಅಂದರೆ ಈ "ಮಹಿಳೆಯರು ಇಡುವ ಹಣಕ್ಕೆ ಬಡ್ಡಿಯಿಲ್ಲ, ಬ್ಯಾಂಕ್‌ನಿಂದ ತೆಗೆದುಕೊಳ್ಳುವ ಹಣಕ್ಕೆ ಮಾತ್ರ ಬಡ್ಡಿ"!

ಯಡಿಯೂರಪ್ಪ ರವರು ತಾಲ್ಲೂಕು ಕೇಂದ್ರಗಳಲ್ಲಿ ಸ್ತ್ರೀ ಶಕ್ತಿ ಭವನ ನಿರ್ಮಿಸಲು 7.5 ಕೋಟಿ, ಶೇ.6 ಬಡ್ಡಿದರದಲ್ಲಿ ಬ್ಯಾಂಕ್‌ಲೋನ್ ಕೊಡಬೇಕೆಂದೂ 17 ಜುಲೈ 2008 ರಂದು ಮಂಡಿಸಿದ್ದ ಬಜೆಟ್‌ನಲ್ಲಿ ಪ್ರಸ್ತಾಪಿಸಿದೆ. ಆದರೆ ಅದು ಇದುವರೆಗೂ ಜಾರಿಯಾಗಿಲ್ಲ. ದರ ಇಳಿಕೆ ಎಂದು ಹೇಳಿದರೂ ಅದು ಜಾರಿಯಾಗದಿರುವುದು ಮಹಿಳೆಯರ ಬಗೆಗಿನ ಕಾಳಜಿಯನ್ನು ಇದು ಎತ್ತಿ ನೋಡಿಸುತ್ತಿದೆ.

ಈ ಮೂಲಕ ಮಹಿಳೆಯರನ್ನು ಒಂದು ಮಾಡಿದ ಸರ್ಕಾರ ಈಗ ಕೆಲವೊಂದು ಗುಂಪುಗಳಿಗೆ ಮಾತ್ರ ಕೆಲವೊಂದು ಸೌಲಭ್ಯಗಳನ್ನು ಕೊಡುವ ಮುಖಾಂತರ ವಿಭಜನೆ ಮಾಡುತ್ತಿದೆ. ಜಾತಿವಾದಿ ರಾಜಕಾರಣದ ದೆಸೆಯಿಂದಾಗಿ ಈ ಗುಂಪುಗಳು ಜಾತಿವಾರು ವಿಭಜನೆಯಾಗುವ ಅಪಾಯವು ಮುಂದಿನ ದಿನಗಳಲ್ಲಿ ತಪ್ಪಿದ್ದಲ್ಲ.

'ಬಡ್ಡಿ ವ್ಯಾಪಾರ'

ಈ ಗುಂಪುಗಳಿಗೆ ಸಾಮಾಜಿಕ ಸಮಸ್ಯೆಗಳಾದ ವರದಕ್ಷಿಣೆ, ಬಾಲ್ಯವಿವಾಹ, ಕೌಟುಂಬಿಕ ದೌರ್ಜನ್ಯಗಳ ವಿರುದ್ಧ, ದೇವದಾಸಿ ಪದ್ಧತಿಯ ವಿರುದ್ಧ ಆರೋಗ್ಯ, ಶಿಕ್ಷಣ, ವಿಧವಾ ವಿವಾಹಗಳ ಬಗ್ಗೆ ಅರಿವು ಮೂಡಿಸಿ ಅದರ ವಿರುದ್ಧ ಹೋರಾಟ ಮೂಡಿಸಲು ಬೇಕಾದ ಯಾವುದೇ ಕಾರ್ಯತಂತ್ರಗಳ ಬದಲಿಗೆ "ಸ್ತ್ರೀ ಶಕ್ತಿ ಎಂದರೆ ಬಡ್ಡಿ ವ್ಯವಹಾರದ" ಕೇಂದ್ರವಾಗಿ ಮಾರ್ಪಾಡಾಗುತ್ತದೆ. ಅಷ್ಟೇ ಅಲ್ಲದೆ ಕೆಲವೆಡೆ ಯಾವ ಅಂಗನವಾಡಿ ಕಾರ್ಯಕರ್ತೆಯರಿಂದ ಜನ್ಮ ತಾಳಿದ ಗುಂಪುಗಳೇ ಅವರ ವಿರುದ್ಧ ಸೆಟೆದು ನಿಲ್ಲುವ ಪರಿಸ್ಥಿತಿಗಳು ಉದ್ಭವವಾಗುತ್ತಿದೆ. ಚುನಾವಣೆಗಳು ಬಂದಾಗ ಸ್ತ್ರೀಶಕ್ತಿ ಪ್ರತಿನಿಧಿಗಳ ಮನೆ ಬಾಗಿಲನ್ನು ತಟ್ಟಿ ರಾಜಕೀಯ ಪಕ್ಷಗಳು ಇವರನ್ನು ಉಪಯೋಗಿಸುತ್ತವೆ. ಅಷ್ಟೇ ಅಲ್ಲದೆ, ಈ ಮಹಿಳೆಯರು ಕೂಡಾ ಇಂದಿನ ರಾಜಕಾರಣಿಗಳಿಂದ ಬೇಸತ್ತು "ಚುನಾವಣೆ ಸಂದರ್ಭದಲ್ಲಿಯೇ ವಸೂಲಿ ಮಾಡಿಬಿಡಬೇಕು" ಎಂಬ ರೀತಿಯಲ್ಲಿ ಯೋಚಿಸುತ್ತಿವೆ. ಈ ಮಹಿಳೆಯರನ್ನು ಇಂದು ಸರ್ಕಾ ರಾಜಕೀಯ ಸಮಾವೇಶಗಳಿಗೆ, ಸರ್ಕಾರದ ಕಾರ್ಯಕ್ರಮಗಳ ಉದ್ಘಾಟನೆಗೆ, ಸರ್ಕಾ ಕಾರ್ಯಕ್ರಮಗಳಿಗೆ ದುರ್ಬಳಕೆಯ ಮಾಡುತ್ತಿರುವುದಷ್ಟೇ ಅಲ್ಲದೇ ಈ ಮಹಿಳೆ ಸೀರೆ, ಬಳೆ, ಅರಿಶಿಣ, ಕುಂಕುಮ ಕೊಡಿಸುವುದು ದೇವಸ್ಥಾನಗಳಿಗೆ ಉಚಿತವಾಗಿ ಕಳುಹಿಸಿಕೊಡುವುದು ಯಥೇಚ್ಛವಾಗಿ ನಡೆಯುತ್ತಿದೆ. ಇಂತಹ ಪರಿಸ್ಥಿತಿಯಿಂದ ಈ ಮಹಿಳೆಯರನ್ನು ಪ್ರಜ್ಞಾವಂತ ಮಹಿಳಾ ಚಳುವ ಕಾಪಾಡುವುದಕ್ಕೋಸ್ಕರವೇ "ಜನವಾದಿ ಮಹಿಳ ಸಂಘಟನೆ"ಯ ಅಡಿಯಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಒಕ್ಕೂಟ ತಲೆಯೆತ್ತಿದೆ.

ಭಾಗ್ಯಲಕ್ಷ್ಮಿ ಯೋಜನೆ : ಮರೆತ ಅಂಗನವಾಡಿ ಮಹಿಳೆಯರ ಶ್ರಮ


ಬಜೆಟ್ ನ ಪತ್ರದಲ್ಲಿ ತಿಳಿಸಿರುವಂತೆ ಭಾಗ್ಯಲ ಯೋಜನೆ, ಸಂಧ್ಯಾ ಸುರಕ್ಷಾ ಯೋಜನೆ, ಸುವರ್ಣ ಕಾಯಕ ಯೋಜನೆ, ಉಚಿತ ಬೈಸಿಕಲ್ ವಿತರಣ ಮತ್ತು ಆದರ್ಶ ವಿವಾಹ ಯೋಜನೆಗಳು ಬಿಜೆ ಸರ್ಕಾರದ ಕೊಡುಗೆಗಳು ಅಲ್ಲ. ಜೆಡಿಎಸ್, ಬಿಜೆ ಸರ್ಕಾರದಲ್ಲಿ ಪ್ರಾರಂಭಿಸಿದ ಯೋಜನೆಯನ್ನ ಸರ್ಕಾರ ಮುಂದುವರಿಸಿದೆ ಅಷ್ಟೆ. ಆದರೆ ಇದ ರಾಜಕೀಯ ಲಾಭ ಪಡೆಯುವ ಯಡಿಯೂರಪ್ಪರವರು ಅತೀ ಸಾಹಸಪಡುತ್ತಿದ್ದಾರೆ

ಸಮಾಜದಲ್ಲಿ ಗಾಢವಾಗಿ ಬೇರೂರಿದ ಹೆಣ್ಣು ಮಗು ಕುರಿತ ತಿರಸ್ಕಾರ ಧೋರಣೆಯನ್ನು ತೊಡೆದುಹಾಕುವ ನಿಟ್ಟಿನಲ್ಲಿ ಭಾಗ್ಯಲಕ್ಷ್ಮಿ ಯೋಜನೆ ಜಾರಿಗೆ ಬಂದಿದೆ ಎಂದು ಹೇಳಲಾಗುತ್ತದೆ ಕುಟುಂಬದಲ್ಲಿ ಹೆಣ್ಣು ಮಗು ಜನಿಸಿದಾಗ ಸರ್ಕಾರ ಆ ಮಗುವಿನ ಹೆಸರಿನಲ್ಲಿ ಒಂದು ಆರಂಭಿ ಠೇವಣಿಯನ್ನು ಇಡುತ್ತದೆ. ಈ ಮೊತ್ತವು ಹೆಣ್ಣು ಮಗುವಿಗೆ 18 ವರ್ಷ ತುಂಬಿದಾಗ 1 ಲ ರೂ. ಅಂತಿಮ ಮೊತ್ತವಾ ಸಂದಾಯವಾಗುತ್ತದೆ.

ಈ ಬಾಂಡ್‌ನ್ನು ಉಪಯೋಗಿ ಶೇ.50 ಸಾಲ ಪಡೆದು ಹೆಣ್ಣುಮಗು ಉನ್ನ ಶಿಕ್ಷಣವನ್ನು ಪಡೆಯಲು ಹಾಗೂ ವೈ ಜೀವನವನ್ನು ಪ್ರವೇಶಿಸಲು ಸಾಧ್ಯವಾಗುತ್ತ ಎಂಬುದು ಸರ್ಕಾರದ ಘೋಷಿ ಯೋಜನೆ.

1,25,000 ಕ್ಕೆ ಹೆಚ್ಚಿನ ಹೆಣ್ಣು ಮಕ್ಕಳಿ 190 ಕೋಟಿ ರೂ. ಮೊತ್ತದ ಬಾಂಡ್‌ಗಳನ ನೀಡಲಾಗಿದೆ ಎಂದು ರಾಜ್ಯ ಸರ್ಕಾರ ಪ್ರ ಫಲಾನುಭವಿಗೂ ಯಡಿಯೂರಪ್ಪ ರವ ಫೋಟೋ ಸಹಿ ಇರುವ ಪತ್ರಗಳನ್ನ ತಲುಪಿಸಲಾಗಿದೆ. ಈ ಫಲಾನುಭವಿಗಳನ್ನು ಆಯ ಮಾಡುವುದು, ಅವರ ದಾಖಲೆಗಳನ್ನು ಸಂಗ್ರಹಿ ಸರ್ಕಾರಕ್ಕೆ ಕಳುಹಿಸುವ ಪ್ರತಿಯೊಂದು ಕೆಲಸವನ್ನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮುಖಾಂತರ, ಅಂಗನವಾಡಿ ಕಾರ್ಯಕರ್ತೆಯರಿಂ ಇದನ್ನು ಮಾಡಿಸಿ ಅವರಿಗೆ ಬರೀ 25 ರೂ. ಗಳನ್ನ ಮಾತ್ರ ಕೊಟ್ಟು ರಾಜ್ಯ ಸರ್ಕಾರ ಹೆಸರನ್ನ ಪಡೆಯುತ್ತದೆ.

ಇದೇ ರೀತಿ ಹೆಣ್ಣುಮಗುವಿಗೆ ಅದಕ್ಕೆ 18 ವರ್ಷ ತುಂಬಿದಾಗ 3 ಲಕ್ಷ ರೂ. ದೊರೆಯುವಂತಹ ಕೇಂದ್ರ ಸರ್ಕಾರದ ಯೋಜನೆಯೊಂದು ಇದೆ ಎನ್ನಲಾಗಿ ಆದರೆ ರಾಜ್ಯದಲ್ಲಿ ಈ ಬಗ್ಗೆ ಯಾವುದೇ ಕೇಳುತ್ತಿಲ್ಲ. ಜನಪರ ಸಂಘಟನೆಗಳ ಕಾರ್ಯಕರ್ತ ಈ ಬಗೆಗೆ ವಿಚಾರ ಮಾಡಬೇಕಿದೆ.



'ಯಡಿಯೂರಪ್ಪನವರ ಪ್ರೀತಿ ಪ್ರದರ್ಶನ'

ಭಾರತ ಜನತೆಗೊಂದು ಹೊಸದಾರಿ

ಟ 5 ರಿಂದ

ಚರ್ಚ್‌ಗಳು ಮನೆಗಳನ್ನು ದೊಡ್ಡ ಪ್ರಮಾಣದಲ್ಲಿ ಸುಡಲಾಯಿತು. ಪಾದ್ರಿಗಳು ಮತ್ತು ಸನ್ಯಾಸಿನಿಯರ ಮೇಲೆ ದೊಡ್ಡ ಪ್ರಮಾಣದ ದಾಳಿಗಳಾದವು. ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಮಂಗಳೂರು, ದಾವಣಗೆರೆ ಮುಂತಾದ ಕಡೆಗಳಲ್ಲಿಯೂ ಕ್ರಿಶ್ಚಿಯನ್ನರ ಮೇಲೆ ಕ್ರೂರ ದಾಳಿಗಳು ನಡೆದವು. 2004ರ ಬಿಜೆಪಿ ವಿರುದ್ಧದ ಜನಾದೇಶವನ್ನು ಕೋಮುವಾದ ಮತ್ತು ಪ್ರತಿಗಾಮಿ ಚಟುವಟಿಕೆಗಳ ವಿರುದ್ಧ ಕಠಿಣ ಕ್ರಮ ವಹಿಸಲು ಬಳಸಬೇಕಿತ್ತು. ಕೇಂದ್ರ ಸರ್ಕಾರವು ಕಂದಮಾಲ್ ಮುಂತಾದ ಕಡೆ ನಡೆದ ಗಲಭೆಗಳ ನಂತರ ಬಜರಂಗದಳದಂತಹ ಸಂಘಟನೆಗಳನ್ನು ನಿಷೇದಿಸಬೇಕಾಗಿತ್ತು. ಆದರೆ ಕೇಂದ್ರ ಸರ್ಕಾರ ಇವುಗಳನ್ನು ಮಾಡಲಿಲ್ಲ.

ಬಿಜೆಪಿಯ ರಾಜಕೀಯ ಮತ್ತು ಚಟುವಟಿಕೆಗಳು ತ್ರಿಟ್ಟಿ ಇಳಿಸಿದ ಕೋಮುವಾದವನ್ನೇ ಪ್ರತಿನಿಧಿಸುತ್ತದೆ. ಮತ್ತು ಅದು ದೇಶದ ಐಕ್ಯತೆಗೆ ಹಾನಿ ಮಾಡಬಲ್ಲುದಾಗಿದೆ. ಸಾಚಾರ್ ವರದಿಯ ಶಿಫಾರಸ್ಸುಗಳ ಆಧಾರದಲ್ಲಿ ಭಾರತದ 15 ಕೋಟಿ ಮುಸ್ಲೀಮರ ಬದುಕನ್ನು ಉತ್ತಮಪಡಿಸುವ ಯಾವುದೇ ಯತ್ನಕ್ಕೆ ಬಿಜೆಪಿಯು ಬಹಿರಂಗವಾಗಿಯೇ ಅಡ್ಡಿಪಡಿಸುತ್ತದೆ ಮತ್ತು ಅದಕ್ಕೆ 'ಮುಸ್ಲೀಮರ ತುಷ್ಟೀಕರಣ' ಎಂದು ಹಣೆಪಟ್ಟಿ ಹಚ್ಚುತ್ತದೆ. ಭಯೋತ್ಪಾದನೆಯ ಕುರಿತ ಬಿಜೆಪಿ ನಿಲುವು ಕೂಡ ವಿನಾಶಕಾರಿಯಾಗಿದೆ. ಎಲ್ಲ ರೀತಿಯ ಭಯೋತ್ಪಾದನಾ ಚಟುವಟಿಕೆಗಳನ್ನೂ ಮುಸ್ಲೀಮರ ತಲೆಗೆ ಕಟ್ಟಲು ಅದಕ್ಕೆ ಯಾವ ಅಳುಕೂ ಇಲ್ಲ. ಭಯೋತ್ಪಾದನೆಗೆ ವೈವಿಧ್ಯಮಯವಾದ ಮೂಲಗಳಿವೆ ಎಂಬುದನ್ನು ಅದು ಒಪ್ಪುವುದಿಲ್ಲ. ಮಾಲೆಗಾಂವ್ ಸ್ಫೋಟ ಪ್ರಕರಣದಲ್ಲಿ ಆರೋಪಿಗಳಾದ ಹಿಂದುತ್ವವಾದಿ ತೀವ್ರಗಾಮಿಗಳ ರಕ್ಷಣೆಗೆ ಅದು ನಿಂತಿತು. ಭಯೋತ್ಪಾದನಾ ವಿರೋಧಿ ದಳ (ಎ.ಟಿ.ಎಸ್) 'ಹಿಂದು ಧಾರ್ಮಿಕ ಸಂತ'ರನ್ನು ಗುರಿಮಾಡುತ್ತಿದೆ ಎಂದು ಅದು ಹುಯಿಲೆಬ್ಬಿಸಿತು. ಭಯೋತ್ಪಾದನೆಯ ಕುರಿತ ಬಿಜೆಪಿಯ ದ್ವಂದ್ವ ನೀತಿ ಈಗಾಗಲೇ ಬಯಲಾಗಿದೆ. ಭಾರತದ ಜನತೆ ಇಂತಹ ಪ್ರತಿಗಾಮಿಯಾದ ಸಮಾಜದ ಪ್ರಗತಿಯನ್ನು ಹಿಂದಕ್ಕೊಯ್ಯುವ ದೃಷ್ಟಿಕೋನದ ಹಾಗೂ ಮೂಢ ವಿಚಾರಧಾರೆಯ ಪಕ್ಷವು ದೇಶವನ್ನಾಳುವುದನ್ನು ಒಪ್ಪುವುದು ಸಾಧ್ಯವಿಲ್ಲ.

ಭಯೋತ್ಪಾದನೆ

ದೇಶವು 2005 ರಲ್ಲಿ ದೆಹಲಿ ಸರಣಿ ಬಾಂಬ್ ಸ್ಫೋಟದೊಂದಿಗೆ ಆರಂಭವಾಗಿ ಕಳೆದ 5 ವರ್ಷಗಳ ಕಾಲ ಭಯೋತ್ಪಾದಕ ದಾಳಿಗಳನ್ನು ಎದುರಿಸಿತು. ಭಯೋತ್ಪಾದನೆಯ ಸಮಸ್ಯೆಯನ್ನು ಸೂಕ್ತ ರೀತಿಯಲ್ಲಿ ಹತ್ತಿಕ್ಕುವಲ್ಲಿ ಕೇಂದ್ರ ಸರ್ಕಾರವು ವಿಫಲವಾಯಿತು. ಭಾರತದಲ್ಲಿ ಭಯೋತ್ಪಾದನೆಗೆ ವೈವಿಧ್ಯಮಯವಾದ ಮೂಲಗಳಿವೆ. ಮುಸ್ಲಿಂ ಸಮುದಾಯದ ಕೆಲವು ತೀವ್ರಗಾಮಿಗಳು ನಡೆಸುತ್ತಿರುವ ಭಯೋತ್ಪಾದನೆ ಇದೆ. ಇತ್ತೀಚಿನ ದಿನಗಳಲ್ಲಿ ನಡೆದ ಮಾಲೆಗಾಂವ್ ಸ್ಫೋಟ ಪ್ರಕರಣ ಮತ್ತು ಮಹಾರಾಷ್ಟ್ರದಲ್ಲಿ ಅದಕ್ಕೂ ಮುಂಚೆ ನಡೆದ ಹಲವು ಸ್ಫೋಟಗಳು ಸ್ಪಷ್ಟವಾಗಿ ಹಿಂದುತ್ವವಾದಿಗಳ ಕೃತ್ಯವೇ ಆಗಿದೆ. ಈಶಾನ್ಯ ರಾಜ್ಯಗಳಲ್ಲಿ ಉಲ್ಫಾ ಮತ್ತು ಇತರ ಜನಾಂಗೀಯ, ಛಿದ್ರಕಾರಿ ಶಕ್ತಿಗಳೂ, ಭಯೋತ್ಪಾದಕ ಧಾಳಿ ನಡೆಸುತ್ತಿವೆ. ಯಾವುದೇ ಮೂಲದ ಭಯೋತ್ಪಾದನೆ ಇರಲಿ ಅದರ ವಿರುದ್ಧ ಸರ್ಕಾರ ದೃಢವಾಗಿ ವರ್ತಿಸಬೇಕೆಂದು ಸಿಪಿಐ(ಎಂ) ಹಿಂದಿನಿಂದಲೂ ಒತ್ತಾಯಿಸುತ್ತಲೇ ಬರುತ್ತಿದೆ. ಪಾಕಿಸ್ತಾನ ಮೂಲದಿಂದ ಪ್ರೇರಿತವಾದ ಭಯೋತ್ಪಾದಕ ದಾಳಿಗಳ ವಿಚಾರದಲ್ಲಿ ಭಾರತವು ಅಂತರರಾಷ್ಟ್ರೀಯ ಅಭಿಪ್ರಾಯ ರೂಪಿಸುವ ಮೂಲಕ ಪಾಕಿಸ್ತಾನದ ಮೇಲೆ ಒತ್ತಡ ಹೇರಿ ಅದು ಭಯೋತ್ಪಾದಕ ಶಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಮಾಡಬೇಕು.

ವಿದೇಶಾಂಗ ನೀತಿ : ಅಮೇರಿಕದೊಂದಿಗೆ ವ್ಯೂಹಾತ್ಮಕ (ಸಮರ) ಮೈತ್ರಿ

ಮನಮೋಹನ್‌ಸಿಂಗ್ ಸರ್ಕಾರದ ಅತಿದೊಡ್ಡ ವಿಶ್ವಾಸದ್ರೋಹವೆಂದರೆ ಒಂದು ಸ್ವತಂತ್ರ ವಿದೇಶಾಂಗ ಧೋರಣೆ ಅನುಸರಿಸುವ ಬದ್ಧತೆಯನ್ನು ಕೊಡವಿಕೊಂಡು ಅಮೇರಿಕಾ ಸಂಯುಕ್ತ ಸಂಸ್ಥಾನದೊಂದಿಗೆ ವ್ಯೂಹಾತ್ಮಕ (ಸಮರ) ಮೈತ್ರಿಗೆ ಮುಂದಾಗಿದ್ದು. ಕಾಂಗ್ರೆಸ್ ನೇತೃತ್ವದ ಸರ್ಕಾರವು ಅಮೇರಿಕದೊಂದಿಗೆ ಮಿಲಿಟರಿ ಸಹಕಾರಕ್ಕಾಗಿ 10 ವರ್ಷಗಳ ರಕ್ಷಣಾ ಚೌಕಟ್ಟು ಒಪ್ಪಂದಕ್ಕೆ ಸಹಿಹಾಕಿದೆ. ಸಮಾನ ಕನಿಷ್ಠ ಕಾರ್ಯಕ್ರಮದ ಬದಲಿಗೆ, ಇಂಡೋ, ಅಮೇರಿಕ ಸಿಇಓ ವೇದಿಕೆಯ ಅಜೆಂಡಾಗಳಾದ ವಿಮಾರಂಗ, ಬ್ಯಾಂಕುಗಳು, ಶಿಕ್ಷಣ, ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ಮುಂತಾದವುಗಳೇ ಮನಮೋಹನ್ ಸರ್ಕಾರದ ನಡೆಗೆ ಮಾರ್ಗದರ್ಶಕ ಸೂತ್ರಗಳಾಗಿವೆ. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಮುಂದಿಟ್ಟಿದ್ದ ಅಮೇರಿಕ-ಇಸ್ರೇಲ್, ಭಾರತಗಳ ಮೈತ್ರಿ ಕೂಟದ ಸಾಕಾರಕ್ಕಾಗಿ ಮನಮೋಹನ್‌ಸಿಂಗ್ ಸರ್ಕಾರ ಯತ್ನ ಮುಂದುವರೆಸಿತು. ಇಸ್ರೇಲ್ ಈಗ ಭಾರತಕ್ಕೆ ಶಸ್ತ್ರಾಸ್ತ್ರ ಪೂರೈಸುವ ರಾಷ್ಟ್ರಗಳಲ್ಲಿ ಅಗ್ರ ಸ್ಥಾನಕ್ಕೇರಿದೆ.

ಅಣು ಒಪ್ಪಂದ :

ಆತ್ಮ ಗೌರವವುಳ್ಳ ಯಾವುದೇ ಸರ್ಕಾರವು ಒಪ್ಪಲಾಗದಂತಹ ಷರತ್ತುಗಳುಳ್ಳ ಅಮೇರಿಕದೊಂದಿಗಿನ ಅಣು ಒಪ್ಪಂದಕ್ಕೆ ಕಾಂಗ್ರೆಸ್ ನೇತೃತ್ವದ ಸರ್ಕಾರ ಸಹಿ ಮಾಡಿತು. ಅಣು ಒಪ್ಪಂದದಿಂದ ಎಲ್ಲ ಗ್ರಾಮಗಳಿಗೂ ಮತ್ತು ಮನೆಗಳಿಗೂ ವಿದ್ಯುತ್ ನೀಡಲು ಸಾಧ್ಯವಾಗುತ್ತದೆ ಎಂದು ಕಾಂಗ್ರೆಸ್ ಪ್ರಚಾರ ನಡೆಸಿದೆ. ವಿದೇಶದಿಂದ ಆಮದಾದ ಅಣು ಸ್ಥಾವರದಲ್ಲಿ ಉತ್ಪಾದಿತವಾಗುವ ಅಣು ವಿದ್ಯುತ್‌ನ ದರ ಯೂನಿಟ್ ಒಂದಕ್ಕೆ 8 ರೂಪಾಯಿಗಳಷ್ಟು ದುಬಾರಿಯಾಗುವಾಗ ಕಾಂಗ್ರೆಸ್ ಪಕ್ಷದ ಪ್ರಚಾರವು ಒಂದು ಕ್ರೂರ ಹಾಸ್ಯವಾಗಿದೆ. ಯುಪಿಎ ಸರ್ಕಾರವು ಅಣು ಒಪ್ಪಂದಕ್ಕೆ ಮುಂದಾದ ಹಿನ್ನೆಲೆಯಲ್ಲಿ ಜುಲೈ 9, 2008 ರಂದು ಎಡಪಕ್ಷಗಳು ಸರ್ಕಾರಕ್ಕೆ ಬೆಂಬಲ ವಾಪಸ್ ಪಡೆದವು. ಭಾರತದ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಹಾಗೂ ಭಾರತ ಸ್ವತಂತ್ರ ವಿದೇಶಾಂಗ ನೀತಿಗೆ ಹಾಗೂ ದೇಶದ ವ್ಯೂಹಾತ್ಮಕ (ಸಮರ) ಸ್ವಾಯತ್ತತೆಗೆ ಹಾನಿಯುಂಟು ಮಾಡುವ ರೀತಿಯಲ್ಲಿ ಅಮೇರಿಕದ ಆಣತಿಯಂತೆ ಕೆಲಸ ಮಾಡಲು ಉದ್ದೇಶಿರುವ ಸರ್ಕಾರವೊಂದಕ್ಕೆ ಬೆಂಬಲವನ್ನು ನೀಡುವುದು ಸಿಪಿಐ(ಎಂ) ಹಾಗೂ ಎಡಪಕ್ಷಗಳಿಗೆ ಸಾಧ್ಯವಾಗಲಿಲ್ಲ.

ಒಕ್ಕೂಟ ತತ್ವದ ಉಲ್ಲಂಘನೆ

ಕಾಂಗ್ರೆಸ್ ನೇತೃತ್ವದ ಸರ್ಕಾರವು ರಾಜ್ಯಗಳ ಹಕ್ಕುಗಳ ಬಗೆಗೆ ಸೂಕ್ತ ಸಂವೇದನಾಶೀಲತೆಯಿಂದ ವರ್ತಿಸಲಿಲ್ಲ. ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಬದ್ಧತೆ ಹೊಂದಿದ್ದಾಗ್ಯೂ ಸಹ ರಾಜ್ಯಗಳ ಅಧಿಕಾರವನ್ನು ಹಾಗೂ ಸಂಪನ್ಮೂಲಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಲ್ಲಿ ಸರ್ಕಾರವು ವಿಫಲವಾಯಿತು. ರಾಜ್ಯಗಳ ಸಾಲಗಳ ಪ್ರಮಾಣ ಕಡಿಮೆಯಾಗಲಿಲ್ಲ. ಹಾಗೆಯೇ ತೆರಿಗೆ ಹಂಚಿಕೆಯಲ್ಲಿ ರಾಜ್ಯಗಳ ಪಾಲಿನಲ್ಲಿ ಹೆಚ್ಚಳ ಕೂಡ ಮಾಡಲಿಲ್ಲ. ಯುಪಿಎ ಸರ್ಕಾರವು 13ನೇ ಹಣಕಾಸು ಆಯೋಗ ಮತ್ತು ರಾಜ್ಯ,ಕೇಂದ್ರ ಸಂಬಂಧಗಳ ಕುರಿತ ಆಯೋಗಗಳಿಗೆ ಷರತ್ತುಗಳನ್ನು ರೂಪಿಸುವ ಮೂಲಕ ಸಾಮಾನ್ಯ ಕನಿಷ್ಟ ಕಾರ್ಯಕ್ರಮವನ್ನು ಉಲ್ಲಂಘಿಸಿತು.

ಭ್ರಷ್ಟಾಚಾರ

ಜುಲೈ 2008 ರಲ್ಲಿ ಪಾರ್ಲಿಮೆಂಟ್‌ನಲ್ಲಿ ಸರ್ಕಾರವು ಬಹುಮತವನ್ನು ಗಳಿಸಲು ಅಧಿಕಾರ ರೂಢ ಮೈತ್ರಿಯು ಅಪಾರ ಪ್ರಮಾಣದ ಹಣದ ಬಳಕೆ, ಲಂಚ, ಆಮಿಷ,ಸಂಸದರ ಖರೀದಿ ಹಾಗೂ ಪಕ್ಷಾಂತರ ಮುಂತಾದವುಗಳ ಮೂಲಕ ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ಕಲುಷಿತಗೊಳಿಸಿತು.

ಜುಲೈ 2008 ರ ಪಾರ್ಲಿಮೆಂಟಿನ ವಿಶೇಷ ಅಧಿವೇಶನವನ್ನು ಡಿಸೆಂಬರ್ ಕೊನೆಯವರೆಗೂ ಮುಂದೂಡಿ ಚಳಿಗಾಲದ ಅಧಿವೇಶನವನ್ನೇ ನಡೆಸದೇ ಸರ್ಕಾರವು ಪಾರ್ಲಿಮೆಂಟನ್ನು ಸಹ



ಅಪಮಾನಿಸಿತು. ಸಾರ್ವಜನಿಕ ತನಿಖಾ ಸಂಸ್ಥೆಗಳು ಹಾಗೂ ಸಾರ್ವಜನಿಕ ಸಂಸ್ಥೆಗಳ ದುರುಪಯೋಗವು ಈ ಸರ್ಕಾರದ ಅವಧಿಯಲ್ಲಿ ಸಹಜವೆಂಬಂತಾಗಿದ್ದವು.

ಯುಪಿಎ ಸರ್ಕಾರ ಬೃಹತ್ ಭ್ರಷ್ಟಾಚಾರದ ಹಗರಣವಾದ ಟೆಲಿಕಾಂ ಹಗರಣದಲ್ಲಿ ತೊಡಗಿತು. ಅದು ಮೊದಲು ತನಗೆ ಬೇಕಾದ ಕಂಪನಿಗಳಿಗೆ 2ಜಿ ಪರವಾನಗಿಯನ್ನು ಮಾರಿತು. ಕಂಪನಿಗಳು ನಂತರ ದೊಡ್ಡ ಲಾಭಕ್ಕೆ ತಮ್ಮ ಶೇರುಗಳನ್ನು ಮಾರಿಕೊಂಡವು. ಈ ಹಗರಣದಲ್ಲಿ ಸರ್ಕಾರದ ಖಜಾನೆಗೆ 1 ಲಕ್ಷ ಕೋಟಿ ರೂ.ಗಳ ನಷ್ಟ ಸಂಭವಿಸಿತು. ಈ ದೈತ್ಯ ಭ್ರಷ್ಟಾಚಾರದ ಕುರಿತು ತನಿಖೆಗೆ ಆದೇಶಿಸಲು ಸರ್ಕಾರವು ನಿರಾಕರಿಸಿತು. ಸತ್ಯಂ, ಮೈತಾಸ್ ಹಗರಣ ಮತ್ತೊಂದು ಆಘಾತಕಾರಿ ಪ್ರಕರಣ. ಲೂಟಿಕೋರ ಬಂಡವಾಳಶಾಹಿಯು ಹೇಗೆ ಭ್ರಷ್ಟಾಚಾರವನ್ನೇ ಸಾಂಸ್ಥಿಕ ವ್ಯವಸ್ಥೆಯನ್ನಾಗಿಸುತ್ತಿದೆ ಎನ್ನುವುದಕ್ಕೆ ಇದೊಂದು ಆಘಾತಕಾರಿ ಉದಾಹರಣೆಯಾಗಿದೆ.

ಸಿಪಿಐ(ಎಂ) ಮತ್ತು ಎಡಪಕ್ಷಗಳ ಪಾತ್ರ

ಸಿಪಿಐ(ಎಂ) ಮತ್ತು ಎಡಪಕ್ಷಗಳು ಈ ಐದು ವರ್ಷಗಳ ಅವಧಿಯಲ್ಲಿ ಜನರ ಹಿತಾಸಕ್ತಿಗಳ ಕಾವಲುಗಾರರಂತೆ ಕೆಲಸ ಮಾಡಿದರೆ ಯುಪಿಎ ಸರ್ಕಾರ ಅದಕ್ಕೆ ವಿರುದ್ಧವಾಗಿ ವರ್ತಿಸಿತು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ, ಅರಣ್ಯ ವಾಸಿಗಳ ಅರಣ್ಯ ಹಕ್ಕು ಕಾಯ್ದೆ-ಈ ಎರಡು ಕಾಯ್ದೆಗಳೂ ಕೂಡ ಸಿಪಿಐ(ಎಂ)ನ ಮಧ್ಯ ಪ್ರವೇಶವಿಲ್ಲದಿದ್ದರೆ ಈಗಿನ ಈ ಸ್ವರೂಪದಲ್ಲಿರುತ್ತಿರಲಿಲ್ಲ. ಎಡಪಕ್ಷಗಳು ಜನತೆಗೆ ಬಾರಿ ದೊಡ್ಡ ಪ್ರಯೋಜನಗಳನ್ನು ನೀಡುವ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಪ್ರಶ್ನೆಯಲ್ಲಿ ಮಧ್ಯ ಪ್ರವೇಶ ಮಾಡಿದರು: ಆದಿವಾಸಿಗಳು ಮತ್ತು ಇತರ ಅರಣ್ಯವಾಸಿಗಳ ಅರಣ್ಯ ಹಕ್ಕು ಕಾಯ್ದೆಯು ಕೂಡ ಎಡಪಕ್ಷಗಳ ಸತತ ಒತ್ತಾಯದಿಂದಾಗಿಯೇ ಅಂಗೀಕಾರ ಪಡೆಯಿತು.

ಸಿಪಿಐ(ಎಂ) ಮತ್ತು ರಾಜಕೀಯ ಪಕ್ಷಗಳು 5 ವರ್ಷಗಳ ಅವಧಿಯಲ್ಲಿ ನಿರ್ವಹಿಸಿದ ಮಹತ್ವದ ಪಾತ್ರವು ಜೂಜುಕೋರ ಹಣಕಾಸು ಬಂಡವಾಳದ ದಾಳಿಯಿಂದ ದೇಶದ ಹಣಕಾಸು ರಂಗವನ್ನು ರಕ್ಷಿಸಿತು. ಬ್ಯಾಂಕ್ ನಿಯಂತ್ರಣ (ತಿದ್ದುಪಡಿ) ಮಸೂದೆಯನ್ನು ವಿರೋಧಿಸುವ ಮೂಲಕ ಎಡಪಕ್ಷಗಳು ವಿದೇಶಿ ಬ್ಯಾಂಕುಗಳು ಭಾರತದ ಖಾಸಗೀ ಬ್ಯಾಂಕುಗಳನ್ನು ವಶಕ್ಕೆ ತೆಗೆದುಕೊಳ್ಳುವ ಅವಕಾಶ ನೀಡುವುದನ್ನು ತಪ್ಪಿಸಿದವು. ವಿಮಾರಂಗದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗಿದ್ದ ಮಿತಿ ಹೆಚ್ಚಳ ವಿರೋಧಿಸುವ ಮೂಲಕ ಎಡಪಕ್ಷಗಳು ವಿಮಾರಂಗವನ್ನು ರಕ್ಷಿಸಿದವು. ಪಿಎಫ್‌ಆರ್‌ಡಿಎ ಮಸೂದೆಯನ್ನು ವಿರೋಧಿಸುವ ಮೂಲಕ ಲಕ್ಷಾಂತರ ಕಾರ್ಮಿಕರ ಭವಿಷ್ಯನಿಧಿ (ಪಿಎಫ್) ನ್ನು ಖಾಸಗೀಕರಿಸಿ ಜೂಜುಕೋರ ಷೇರು ಮಾರುಕಟ್ಟೆಯಲ್ಲಿ ತೊಡಗಿಸುವ ಅಪಾಯವನ್ನು ಎಡಪಕ್ಷಗಳು ತಪ್ಪಿಸಿದವು. ಸಿಪಿಐ(ಎಂ) ಮತ್ತು ಎಡಪಕ್ಷಗಳ ಹೋರಾಟದಿಂದಾಗಿ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಭೀಕರ ದುಷ್ಪರಿಣಾಮದಿಂದಾಗಿ ಭಾರತದ ಆರ್ಥಿಕತೆ ಗಂಭೀರ ಹಾನಿಗೆ ಗುರಿಯಾಗುವುದು ತಪ್ಪಿದಂತಾಗಿದೆ.

ಸಿಪಿಐ(ಎಂ) ಪಕ್ಷ ಮತ್ತು ಎಡಪಕ್ಷಗಳು ಸಾರ್ವಜನಿಕ ಉದ್ದಿಮೆಗಳನ್ನು ಹಾಗೂ ರಾಷ್ಟ್ರದ ನವರತ್ನ ಉದ್ದಿಮೆಗಳ ರಕ್ಷಣೆಗೆ ನಿಂತವು. ನವರತ್ನಗಳಲ್ಲೊಂದಾದ ಬಿ.ಹೆಚ್.ಇ.ಎಲ್.ನ ಶೇರು ಹಿಂತೆಗೆತಕ್ಕೆ ಎಡಪಕ್ಷಗಳು ಸಮ್ಮತಿಸಲಿಲ್ಲ. ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು ಚಿಲ್ಲರೆ ವ್ಯಾಪಾರರಂಗದಲ್ಲಿ ಪ್ರವೇಶ ಮಾಡಿ ಲಕ್ಷಾಂತರ ಜನ ಸಣ್ಣ ವ್ಯಾಪಾರಿಗಳ ಬದುಕನ್ನು ಬಲಿ ತೆಗೆದುಕೊಳ್ಳುವ ಅಪಾಯವನ್ನು ತಪ್ಪಿಸುವ ನಿಟ್ಟಿನಲ್ಲಿ ಎಡಪಕ್ಷಗಳು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ನೀಡುವುದನ್ನು ವಿರೋಧಿಸಿದವು. ಲಕ್ಷಾಂತರ ಸಣ್ಣ ವ್ಯಾಪಾರಿಗಳನ್ನು, ಚಿಲ್ಲರೆ ವ್ಯಾಪಾರ ರಂಗವನ್ನು ರಕ್ಷಿಸಿದವು. ರೈತವಿರೋಧಿ, ದೇಶವಿರೋಧಿ ಬೀಜ ಮಸೂದೆಯನ್ನು ಎಡಪಕ್ಷಗಳ ವಿರೋಧದ ಕಾರಣದಿಂದಾಗಿಯೇ ಪಾರ್ಲಿಮೆಂಟ್‌ನಲ್ಲಿ ಅಂಗೀಕಾರ ಪಡೆಯುವುದು ಸಾಧ್ಯವಾಗಲಿಲ್ಲ. ಶಿಕ್ಷಣ ರಂಗದ ಸಮಗ್ರತೆಯನ್ನು ರಕ್ಷಿಸಲು ಎಡಪಕ್ಷಗಳು, ವಿದೇಶಿ ಶಿಕ್ಷಣ ಸಂಸ್ಥೆಗಳು ಮತ್ತು ವಿದೇಶಿ ವಿಶ್ವವಿದ್ಯಾಲಯವನ್ನು ಭಾರತದಲ್ಲಿ ಆರಂಭ ಮಾಡಲು ಅವಕಾಶ ನೀಡುವ ಮಸೂದೆಯು ಅಂಗೀಕಾರ ಪಡೆಯುವುದನ್ನು ಎಡಪಕ್ಷಗಳು ತಡೆದವು. ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ರಕ್ಷಿಸುವ ಸಲುವಾಗಿ ಹಲವು ಕಾರ್ಮಿಕ ವಿರೋಧಿ ಕಾನೂನುಗಳು ಜಾರಿಕೊಳ್ಳುವುದನ್ನು ಎಡಪಕ್ಷಗಳು ತಡೆಹಿಡಿದವು. ○

ಮುಸ್ಲಿಮರ ಹಿಂದುಳಿದಿರುವಿಕೆಯನ್ನು ಗುರುತಿಸಿ ಅವರ ಅಭಿವೃದ್ಧಿಗೆ ಶಿಫಾರಸ್ಸು ನೀಡಿರುವ ಸಾಚಾರ್ ಸಮಿತಿ ಜಾರಿಗಾಗಿ ಇತ್ತೀಚೆಗೆ ತುಮಕೂರು ಹಾಗೂ ಕೋಲಾರಗಳಲ್ಲಿ ಮುಸ್ಲಿಂ ಅಲ್ಪಸಂಖ್ಯಾತರ ಸಮಾವೇಶಗಳು ನಡೆದಿವೆ. ಒಂದು ವರದಿ

ಸಾಚಾರ್ ವರದಿ ಜಾರಿಗೆ 'ಲಡಾಯಿ ಕರೇಂಗೆ'

ಅಪ್ಪು

ಅದೊಂದು ಗಂಭೀರ ಸಭೆ. ಅಲ್ಲಿದ್ದವರೆಲ್ಲಾ ತಮ್ಮ ಯಾತನಾಮಯವಾದ ಅತಂತ್ರ ಬದುಕನ್ನು ಒಡಲಲ್ಲಿ ತುಂಬಿಕೊಂಡಿದ್ದವರು. ಒಂದೆಡೆ ಬಡತನ ಮತ್ತು ನಿರುದ್ಯೋಗ ಅವರನ್ನು ಕಾಡುತ್ತಿದ್ದರೆ ಮತ್ತೊಂದೆಡೆ ಕೋಮುವಾದಿಗಳ ಅಟ್ಟಹಾಸ ಎಂದು ಹೊಸಕಿ ಹಾಕುತ್ತದೆಯೋ ಎಂಬ ಆತಂಕ ಹೊತ್ತವರು. ಇದು ಕೋಲಾರದಲ್ಲಿ ಇತ್ತೀಚಿಗೆ ನಡೆದ ಮುಸ್ಲಿಂ ಅಲ್ಪ ಸಂಖ್ಯಾತರ ಸಮಾವೇಶದಲ್ಲಿ ನೆರೆದಿದ್ದವರಲ್ಲಿ ಕಾಣುತ್ತಿದ್ದ ಚಹರೆಗಳು. ಪುರುಷರಿಗೆ ಸರಿಸಮಾನ ಸಂಖ್ಯೆಯಲ್ಲಿ ಮಹಿಳೆಯರೂ ಪಾಲ್ಗೊಂಡಿದ್ದುದು ಸಮಾವೇಶದ ವಿಶೇಷವಾಗಿತ್ತು. ಸಾಮಾನ್ಯವಾಗಿ ಮುಸ್ಲಿಂ ಸಮುದಾಯ ಇತರ ಸಮುದಾಯಗಳಂತೆ ಮಹಿಳೆಯರನ್ನು ಹೆಚ್ಚಾಗಿ ಹೊರ ಜಗತ್ತಿಗೆ ಬಿಡುವುದಿಲ್ಲ. ಹಾಗಾಗಿ ಮಹಿಳೆಯರು ಹೆಚ್ಚಾಗಿ ಭಾಗವಹಿಸಿದ್ದು ಸಮಾವೇಶದ ಗಂಭೀರತೆಯನ್ನು ಹೆಚ್ಚಿಸಿತ್ತು. ಸಮಾವೇಶದಲ್ಲಿ ನೆರೆದಿದ್ದ ಬಹುತೇಕ ಮಂದಿಗೆ ರಾಜೆಂದರ್ ಸಾಚರ್ ವರದಿ ಕುರಿತು ಅರಿವು ಇರಲಿಲ್ಲ. ಕೆಲವರಿಗೆ ಇತ್ತಾದರೂ ಆ ಕುರಿತು ಅವರು ಏನೂ ಮಾಡುವ ಪರಿಸ್ಥಿತಿಯಲ್ಲಿ ಇರಲಿಲ್ಲ ಎಂಬಂತೆ ಕಾಣುತ್ತಿತ್ತು. ಕೋಲಾದರಲ್ಲಿ ಸಮಾಜಿಕವಾಗಿ ಗುರುತಿಸಿಕೊಂಡಿರುವ ಬೆರಳೆಣಿಕೆಯಷ್ಟು ಮುಸ್ಲಿಂ ಮುಖಂಡರು ಕಾಂಗ್ರೆಸ್, ದಳ ಎಂದುಕೊಂಡು ತಮಗಾಗುವಷ್ಟು ಬೇಳೆ ಬೇಯಿಸಿಕೊಂಡು ಕಾಲ ಹಾಕುತ್ತಿದ್ದಾರೆಯೇ ವಿನಹ ಎಂದೂ ಆ ಸಮುದಾಯದ ಸಮಗ್ರ ಅಭಿವೃದ್ಧಿಗೆ ಚಿಂತನೆ ನಡೆಸಿದವರಲ್ಲ. ಹಾಗಾಗಿಯೇ ಸಿಪಿಎಂ ಪಕ್ಷದ ನೇತೃತ್ವದಲ್ಲಿ ನಡೆದ ಈ ಸಮಾವೇಶ ವಿಶೇಷ ಮಹತ್ವ ಪಡೆದುಕೊಂಡಿತು. ಹಾಗಂತ ಸಿಪಿಎಂ ಪಕ್ಷ ಕೋಲಾರದ ಮುಸ್ಲಿಂ ಅಲ್ಪಸಂಖ್ಯಾತರಿಗೆ ಹೊಸದೇನೂ ಅಲ್ಲ. ಈ ಹಿಂದೆ ಹೆಚ್ಚಿನ ಪ್ರಮಾಣದ ಮುಸ್ಲಿಂ ಸಂಗಾತಿಗಳು ಪಕ್ಷವನ್ನು ಕಟ್ಟಿ ಬೆಳೆಸುವಲ್ಲಿ ಗಣನೀಯ ಕೊಡುಗೆ ನೀಡಿದ್ದಾರೆ. ಈ ಹಿನ್ನಲೆಯಿಂದಾಗಿಯೇ ಆ ಸಮುದಾಯದಲ್ಲಿ ಪಕ್ಷ ಅತ್ಯಂತ ಹೆಚ್ಚು ಗೌರವವನ್ನು ಪಡೆದುಕೊಂಡಿದೆ. ಭಾರತದಲ್ಲಿ ಮುಸ್ಲಿಂಮರ ಪರವಾಗಿ ಧ್ವನಿ ಎತ್ತುವ ಪಕ್ಷ ಒಂದಿದ್ದರೆ ಅದು ಸಿಪಿಎಂ ಪಕ್ಷವೇ ಎಂದು ಹಲವಾರು ಮಂದಿ ಪ್ರತಿಕ್ರಿಯಿಸಿದರು. ಇದರ ಫಲವಾಗಿಯೇ ಸಮಾವೇಶ ಭಾರಿ ಯಶಸ್ವಿ ಕಂಡಿತು.

ಆತ್ಮೀಯತೆ ಸ್ಪಂದನೆ

ಸಮಾವೇಶಕ್ಕೆ ಪೂರ್ವಭಾವಿಯಾಗಿ ಕೋಲಾರ ನಗರದ ಸುಮಾರು ಹತ್ತು ಹನ್ನೊಂದು ಮೊಹಲ್ಲಾಗಳಲ್ಲಿ ಹಗಲು, ರಾತ್ರಿ ಸಭೆಗಳನ್ನು ನಡೆಸಲಾಯಿತು. ಜಿ.ಸಿ. ಬಯ್ಯಾರೆಡ್ಡಿ, ಗಾಂಧಿನಗರ ನಾರಾಯಣ ಸ್ವಾಮಿ, ಹೊಳೂರು ಶಂಕರ್, ಗೀತಾ ಮತ್ತಿತರು ಊಹಿಸಿದ್ದಕ್ಕಿಂತಲೂ ಹೆಚ್ಚಿನ ಆತ್ಮೀಯತೆಯನ್ನು ಆ ಸಮುದಾಯ ತೋರಿತು. ಎಲ್ಲ ವಾರ್ಡ್ ಮೊಹಲ್ಲಾಗಳಲ್ಲೂ ಉತ್ತಮ ಸ್ಪಂದನೆ ನೀಡಿದರು. ಒಂದು ಹಂತದಲ್ಲಿ ಸಮಾವೇಶ ಯಶಸ್ವಿಯಾಗುತ್ತದೊ ಇಲ್ಲವೊ ಎಂಬ ಆತಂಕ ಇತ್ತಾದರೂ ಆ ಸಮುದಾಯ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳನ್ನು ಹಿಡಿದು ಅವರೆದುರು ನಿಂತಾಗ ದೊರೆತ ಸ್ಪಂದನೆ ಅವಿಸ್ಮರಣೀಯವಾದುದು. ಕೆಲವರಂತೂ ಸಿಪಿಎಂ ಪಕ್ಷ ಎಂದ ತಕ್ಷಣ ಅವರು ಸ್ವೀಕರಿಸುವ ರೀತಿಯೇ ಭಾರಿ ಗೌರವದಿಂದ ಕೂಡಿತ್ತು. ಹಲವಾರು ಪ್ರಮುಖರು ಸಮಾವೇಶ ಯಶಸ್ವಿಗಾಗಿ ತಮ್ಮ ಕೈಲಾದಷ್ಟು ಹಣಕಾಸಿನ ನೆರವನ್ನೂ ಒದಗಿಸಿದರು.

ಕೋಲಾರ ನಗರದ ಒಟ್ಟು ಜನಸಂಖ್ಯೆಯಲ್ಲಿ ಸರಿಸುಮಾರು ಶೇಕಡ 40ರಷ್ಟು ಮುಸ್ಲಿಂ ಅಲ್ಪಸಂಖ್ಯಾತರಿದ್ದಾರೆ. ಅವರಲ್ಲಿ ಶೇಕಡ 90ರಷ್ಟು ಮಂದಿಯ ಬದುಕು ಕಡು ಕಷ್ಟದಲ್ಲಿರುವ ಯಾವುದೇ ದಲಿತ ಕುಟುಂಬಕ್ಕಿಂತಲೂ ಉತ್ತಮವಾಗಿಲ್ಲ. ಪ್ರಾಣಿಗಳು ವಾಸಿಸುವಂತಹ ಪ್ರದೇಶಗಳಲ್ಲಿ ಅವರು ನೆಲೆಸಿದ್ದಾರೆ. ಕೆಲವು ಪ್ರದೇಶಗಳು ಇನ್ನೂ ನಗರಸಭೆ ವ್ಯಾಪ್ತಿಗೆ ಸೇರಿಲ್ಲ. ಹಾಗಾಗಿ ಕುಡಿಯುವ ನೀರಿಲ್ಲ, ಸರಿಯಾದ ವಾಸದ ಮನೆ ಇಲ್ಲ. ಅಲ್ಪ ಸ್ವಲ್ಪ ಮನೆ ಇದ್ದರೆ ಅದಕ್ಕೆ ಯಾವುದೇ ದಾಖಲೆಗಳಿಲ್ಲ. ಹೀಗೆ ಹಲವಾರು ಸಮಸ್ಯೆಗಳ ಮಧ್ಯೆ ಅವರ ಬದುಕು ಸಾಗುತ್ತಿದೆ. ಇನ್ನು ಹೊಟ್ಟೆ, ಬಟ್ಟೆ ವಿಚಾರ ಎತ್ತುವಂತೆಯೇ ಇಲ್ಲ. ಶೇಕಡ 95ರಷ್ಟು ಮಂದಿ ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ವರ್ಕ್‌ಶಾಪ್‌ಗಳು, ಆಟೋ ಚಾಲನೆ, ಎಪಿಎಂಸಿ ಮಾರುಕಟ್ಟೆಯಲ್ಲಿ ಟೊಮಾಟೊ ಬಾಕ್ಸ್‌ಗಳನ್ನು ಮಾಡುವುದು, ಮಾಂಸದ ಅಂಗಡಿಗಳು, ಚಹಾ ದುಖಾನ್‌ಗಳು, ಸಣ್ಣ ಪುಟ್ಟ ಚಿಲ್ಲರೆ ವ್ಯಾಪಾರ... ಇಂಥವೇ ಹಲವಾರು ಕೆಲಸಗಳು ಅವರ ಹೊಟ್ಟೆ ಪಾಡು. ಇನ್ನು ಮಹಿಳೆಯರು ಬೇರೆಯವರ ಮನೆಗಳಲ್ಲಿ ಕೆಲಸ ಮಾಡುವುದು, ಬೀಡಿ ಸುತ್ತುವುದು, ಕೆಲವರು ಕೂಲಿನಾಲಿಗೆ ಹೋಗುವುದು ಬಿಟ್ಟರೆ ಬೇರೆ ಬದುಕಿಲ್ಲ.

ಮುಸ್ಲಿಮರು ಮಾತ್ರವಲ್ಲ...

ಅಂಜುಮನ್ ಶಾದಿ ಮಹಲ್‌ನಲ್ಲಿ ನಡೆದ ಸಮಾವೇಶವನ್ನು ಕರ್ನೂಲ್ ಶಾಸಕರಾದ ಕಾಮ್ರೆಡ್ ಗಫೂರ್ ಉದ್ಘಾಟಿಸಿದರು. ರಾಜೆಂದರ್ ಸಾಚರ್ ನೀಡಿರುವ ವರದಿಯನ್ನು ಅನುಷ್ಠಾನಗೊಳಿಸಲು ಸಂಘಟಿತ ಹೋರಾಟ ನಡೆಸಲು ಕರೆ ನೀಡಿದರು. ಸಿಪಿಎಂ ಪಕ್ಷ ಚುನಾವಣೆಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ರಾಜಕಾರಣ ಮಾಡುವ ಪಕ್ಷವಲ್ಲ. ದುಡಿಯುವ ವರ್ಗ, ಬಡವರ ಪರವಾಗಿ ನಿರಂತರವಾಗಿ ಕೆಲಸ ಮಾಡುವ ಪಕ್ಷ ಎಂಬುದನ್ನು ಮನದಟ್ಟು ಮಾಡಿಕೊಟ್ಟರು. ಪಕ್ಷದ ರಾಜ್ಯ ಮುಖಂಡರಾದ ಅಮಾನುಲ್ಲಾ ಖಾನ್ ಮಾತನಾಡುತ್ತಾ ಸಾಚರ್ ವರದಿ ಅನುಷ್ಠಾನಕ್ಕೆ ಕೇವಲ ಮುಸ್ಲಿಂ ಸಮುದಾಯ ಮಾತ್ರವಲ್ಲದೆ ಇತರ ಜಾತ್ಯತೀತ, ಪ್ರಜಾಪ್ರಭುತ್ವೀಯ ಸಂಘಟನೆಗಳ ಜೊತೆಗೂಡಿ ಸಂಘಟಿತ ಹೋರಾಟ ನಡೆಸಬೇಕಾದ ಅಗತ್ಯತೆಯನ್ನು ಒತ್ತಿ ಹೇಳಿದರು. ಮುಸ್ಲಿಂ ಸಮುದಾಯ ಇಂದು ಎರಡು ರೀತಿಯ ಸವಾಲುಗಳನ್ನು ಎದುರಿಸುತ್ತಿದೆ. ಒಂದು ಕೋಮುವಾದಿ ಸಮಸ್ಯೆಯಾದರೆ ಮತ್ತೊಂದು ಆರ್ಥಿಕ ಸಮಸ್ಯೆ. ದೇಶದಲ್ಲಿ ಮುಸ್ಲಿಮ್ ಜನ ಒಡಾಡುತ್ತಿದ್ದರೆ ಇತರೆ ಜನಸಮುದಾಯ ಅನುಮಾನದಿಂದ ನೋಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮುಸ್ಲಿಂ ಸಮುದಾಯ ಇಂದು ಅತ್ಯಂತ ನಿಕೃಷ್ಟ ಪರಿಸ್ಥಿತಿಯಲ್ಲಿ ಜೀವನ ಸಾಗಿಸುತ್ತಿದೆ. ಈ ಹಿನ್ನಲೆಯಲ್ಲಿ ಎಡಪಕ್ಷಗಳು ಯುಪಿಎ ಸರ್ಕಾರದ ಮೇಲೆ ನಿರಂತರ ಒತ್ತಡ ಹೇರಿದ್ದರಿಂದ ಸಾಚರ್ ಸಮಿತಿಯನ್ನು ರಚಿಸಲಾಗಿದ್ದು ಸಮಿತಿ ಈಗಾಗಲೇ ವರದಿ ನೀಡಿದೆ. ಅದರ ಜಾರಿಗೆ ಸಂಘರ್ಷ ನಡೆಸುವ ಅಗತ್ಯತೆಯನ್ನು ತಿಳಿಸಿದರು.



ಮುಸ್ಲಿಂ ಸಮುದಾಯದ ಏಳಿಗೆಗಾಗಿ ಶತಾಯಗತಾಯ ಹೋರಾಟ ನಡೆಸಲು ಸಿಪಿಎಂ ಪಕ್ಷ ಸಿದ್ಧವಾಗಿದ್ದು ನಾವೆಲ್ಲರೂ ಒಗ್ಗಟ್ಟಾಗಿ ಹೋರಾಟಗಳನ್ನು ನಡೆಸೋಣ ಎಂಬ ಭರವಸೆಯನ್ನು ರಾಜ್ಯ ಕಾರ್ಯದರ್ಶಿ ಕಾಮ್ರೆಡ್ ವಿಜೆಕೆ ನಾಯರ್ ನೀಡಿದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ. ಬಯ್ಯಾರೆಡ್ಡಿ ಮಾತನಾಡಿ ಸಾಚರ್ ವರದಿ ಜಾರಿಗೆ ಕೇವಲ ಮುಸ್ಲಿಂ ಸಮುದಾಯ ಮಾತ್ರವಲ್ಲ. ಇತರ ಎಲ್ಲ ಸಮಾನ ಮನಸ್ಕ ಸಮುದಾಯದೊಂದಿಗೆ ಸೇರಿ ಸಂಘರ್ಷ ನಡೆಸಲು ಕರೆ ನೀಡಿದರು. ಮುಸ್ಲಿಮರ ಸ್ಥಿತಿಗತಿಗಳ ಕುರಿತು ವಿವರಿಸಿದರು. ಕೋಲಾರ ಜಿಲ್ಲೆಯ ಎಲ್ಲ ತಾಲೂಕುಗಳಿಂದಲೂ ಅಲ್ಪ ಸಂಖ್ಯಾತರು ಈ ಸಮಾವೇಶಕ್ಕೆ ಆಗಮಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಕಾಮ್ರೆಡ್ ಅರ್ಜುನನ್, ಮುಖಂಡರಾದ ಗಾಂಧಿನಗರ ನಾರಾಯಣ ಸ್ವಾಮಿ, ಹೊಳೂರು ಶಂಕರ್, ಗೀತಾ, ಸಂಪಂಗಿ ಮತ್ತಿತರರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

'ಸಾಚಾರ್ ವರದಿ ವಿರೋಧಿಸಿದ್ದ ಬಿಜೆಪಿ'

ಮುಸ್ಲಿಮರ ಸ್ಥಿತಿಗತಿ ಸುಧಾರಿಸುವುದು ಬಿಜೆಪಿಗೆ ಇಷ್ಟವಿಲ್ಲದ್ದರಿಂದಲೇ ಬಿಜೆಪಿ ಜಸ್ಟಿಸ್ ಸಾಚಾರ್ ವರದಿಯನ್ನು ಸಂಸತ್ತಿನಲ್ಲಿ ಮಂಡಿಸುವುದಕ್ಕೆ ಬಿಜೆಪಿ ವಿರೋಧ ವ್ಯಕ್ತಪಡಿಸಿತ್ತು ಎಂದು ಪಶ್ಚಿಮ ಬಂಗಾಳದ ಸಿಪಿಎಂ ಸಂಸದ ಹನನ್ ಮುಲ್ಲ ಟೀಕಿಸಿದರು.

ಅವರು ಫೆಬ್ರವರಿ 22 ರಂದು ತುಮಕೂರಿನಲ್ಲಿ ಸಿಪಿಎಂ ವತಿಯಿಂದ ಆಯೋಜಿಸಲಾಗಿದ್ದ ಸಾಚಾರ್ ವರದಿ ಕುರಿತ ರಾಜ್ಯಮಟ್ಟದ 2 ದಿನಗಳ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

'ವರದಿಯಲ್ಲಿ ಸ್ವಾತಂತ್ರ್ಯ ನಂತರದ ಅವಧಿಯಲ್ಲಿ ದೇಶದೊಳಗಿನ ಮುಸ್ಲಿಮರು ಎದುರಿಸುತ್ತಿರುವ ಸಮಸ್ಯೆಗಳನ್ನು ಸಮಗ್ರವಾಗಿ ಚರ್ಚಿಸಲಾಗಿದೆ. ಮುಸ್ಲಿಮರು ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ಸೇರಿದಂತೆ ಎಲ್ಲ ರಂಗಗಳಲ್ಲೂ ಹಿಂದುಳಿದಿದ್ದು, ಸಮುದಾಯದ ಅಭಿವೃದ್ಧಿಗೆ ಸಾಚಾರ್ ವರದಿ ಅನುಷ್ಠಾನ ಅತ್ಯಗತ್ಯ' ಎಂದು ಪ್ರತಿಪಾದಿಸಿದರು.



ಮೂಲ ಸೌಕರ್ಯದಿಂದ ವಂಚಿತರು : ದೇಶದಲ್ಲಿನ ಮುಸ್ಲಿಂಮರು ಮೂಲ ಸೌಕರ್ಯಗಳಿಂದ ವಂಚಿತರಾಗಿದ್ದು, ಅನಾಗರಿಕ ಬದುಕು ಸಾಗಿಸುತ್ತಿರುವುದು ಕಣ್ಣೆದುರಿಗಿದೆ. ಇದರ ಮೇಲೆ ಸಾಚಾರ್ ಸಮಿತಿ ಬೆಳಕು ಚೆಲ್ಲಿದೆ. ವರದಿ ಸಂಸತ್ತಿನಲ್ಲಿ ಮಂಡಿಸಲ್ಪಟ್ಟರೆ ಎಲ್ಲಿ ತನ್ನ ಢೋಂಗಿತನ ಬಯಲಾಗುವುದೋ ಎಂಬ ಭಯದಿಂದ ಬಿಜೆಪಿ ಸಾಚಾರ್ ವರದಿ ▶

ಮೂರನೇ ಪರ್ಯಾಯದ ಬಲವರ್ಧನೆ

ಪುಟ 9 ರಿಂದ

ಬೆಳಸಿಕೊಳ್ಳುವ ವಿಶ್ವಾಸದಲ್ಲಿ ತನ್ನನ್ನು ಮುಳುಗಿಸಿಕೊಂಡಿದೆ. ಅದಕ್ಕೆ ಈ ಒಂದು ಅಂಶವೇ ಉದಾಹರಣೆಯಾಗಿದೆ. ಕಾಂಗ್ರೆಸ್ ಪಕ್ಷವು ಮತ್ತು ಸರ್ಕಾರ ಹಣದುಬ್ಬರವೂ ಕಡಿಮೆಯಾಗಿದೆ ಎಂದು ತನ್ನನ್ನು ತಾನು ಬೆನ್ನು ಚಪ್ಪರಿಸಿಕೊಂಡು ಸಂತೋಷಪಡುತ್ತಿದೆ. ಸಗಟು ವ್ಯಾಪಾರದಲ್ಲಿನ ಹಣದುಬ್ಬರದ ಬೆಲೆ ಸೂಚ್ಯಾಂಕವು ಶೇ.4 ಕ್ಕಿಂತ ಕೆಳಗಿದೆ. ಆದರೆ ಆಹಾರ ಪದಾರ್ಥಗಳ ಬೆಲೆಗಳಲ್ಲಿ ವಿಪರೀತ ಏರಿಕೆ ಕಂಡಿದೆ ಗ್ರಾಹಕ ವ್ಯವಹಾರಗಳ ಇಲಾಖೆಯ “ಬೆಲೆ ನಿಯಂತ್ರಣ ವಿಭಾಗದ” ಪ್ರಕಾರವೇ ಅಕ್ಕಿ, ಬೇಳೆ, ಈರುಳ್ಳಿ, ಸಕ್ಕರೆ ಚಹಾ ಮೊದಲಾದ ಬೆಲೆಗಳು ಮಾರುಕಟ್ಟೆಯಲ್ಲಿ ಅತ್ಯಂತ ತುಟ್ಟಿಯಾಗಿವೆ. ಫೆಬ್ರವರಿ 28 ಕ್ಕೆ ಅಂತ್ಯಗೊಂಡ ವಾರದಲ್ಲಿ ಸಗಟು ವ್ಯಾಪಾದಲ್ಲಿರುವ ಹಣದುಬ್ಬರದ ಪ್ರಮಾಣವೇ ಶೇ.7.5 ರಷ್ಟಿದೆ ಎಂದು ಅಂದಾಜಿಸಲಾಗಿತ್ತು. ಈ ಪ್ರಮಾಣವು ಚಿಲ್ಲರೆ ಮಾರಾಟದಲ್ಲಿ ಇನ್ನು ಹಲವು ಪಟ್ಟು ಹೆಚ್ಚಾಗುತ್ತಿದೆ. ಈ ಲೆಕ್ಕಾಚಾರಗಳ ಪ್ರಕಾರವೇ ದೆಹಲಿಯಲ್ಲಿ ಮಾತ್ರವೇ ಅಕ್ಕಿಯ ಬೆಲೆ 2008 ಮಾರ್ಚ್ ಮತ್ತು 2009 ರ ಮಾರ್ಚ್ ನಡುವೆ ಶೇ.22 ಹೆಚ್ಚಾಗಿದೆ. ಸಕ್ಕರೆ ಶೇ.47 ರಷ್ಟು ಬೇಳೆ ಶೇ.31 ರಷ್ಟು ಮತ್ತು ಈರುಳ್ಳಿಯ ಬೆಲೆ ಶೇ.111 ರಷ್ಟು ಪ್ರಮಾಣದಲ್ಲಿ ಹೆಚ್ಚಳವಾಗಿವೆ. ·

ಆಗೊಮ್ಮೆ ಸರ್ಕಾರವೇ ಈ ಹಣದುಬ್ಬರದ ದರ ಇಳಿಕೆಗೆ ತೃಪ್ತಿದಾಯಕ ಕ್ರಮವನ್ನು ತೆಗೆದುಕೊಂಡಿದೆ ಎಂದು ಪ್ರಚಾರ ಮಾಡುತ್ತಿದೆ. ಆದರೆ ವಾಸ್ತವಾಂಶವೆಂದರೆ, ಲಕ್ಷಾಂತರ ಉದ್ಯೋಗಗಳು ಜಾಗತೀಕ, ಆರ್ಥಿಕ ಕುಸಿತದ ಪರಿಣಾಮದಿಂದಾಗಿ ನಾಶಗೊಂಡಿವೆ. ಕೃಷಿ ಕ್ಷೇತ್ರದ ಬಿಕ್ಕಟ್ಟು, ಬೆಲೆಯೇರಿಕೆ, ನಿರುದ್ಯೋಗ ಮತ್ತು ಜನತೆಯ ಜೀವನಮಟ್ಟದ ಕುಸಿತದ ಬಗ್ಗೆ ಆಳುವ ಕಾಂಗ್ರೆಸ್ಸಿಗರು ನಿರ್ಲಕ್ಷ್ಯ ವಹಿಸಿದ್ದಾರೆ. ಇದಕ್ಕಾಗಿ ಅವರು ಬಾರೀ ಬೆಲೆ ತೆರಬೇಕಾಗುತ್ತದೆ..

ಕಾಲವೀಗ ಬಂದಿದೆ

ಒಂದೇ ತೆರನಾದ ಆರ್ಥಿಕ ನೀತಿಗಳನ್ನು ಅನುಸರಿಸುತ್ತಿರುವ ಕಾಂಗ್ರೆಸ್ ಬಿಜೆಪಿಗಳನ್ನು ತಿರಸ್ಕರಿಸಿ ಪರ್ಯಾಯವನ್ನು ಆಯ್ಕೆ ಮಾಡುವ ಕಾಲವೀಗ ಬಂದಿದೆ. ಎಡಪಕ್ಷಗಳು ಪೂರ್ಣ ಪ್ರಮಾಣದ ಪರ್ಯಾಯ ನೀತಿಗಳ ವೇದಿಕೆ ನಿರ್ಮಾಣಕ್ಕಾಗಿ ಕೆಲಸ ಮಾಡುತ್ತಿವೆ. ಸಿಪಿಐ(ಎಂ) ಪಕ್ಷವು ಜನಪರವಾದ ಆರ್ಥಿಕ ನೀತಿಗಳು, ಧರ್ಮ ನಿರಪೇಕ್ಷತೆಯ ಬಲವಾದ ರಕ್ಷಣೆಗೆ ಬದ್ಧವಾದ, ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವ ಮತ್ತು ಸ್ವತಂತ್ರ ವಿದೇಶಾಂಗ ನೀತಿಯ ಆಧಾರದಲ್ಲಿ ಕೆಲಸ ಮಾಡಲು ಬಯಸುವ ಪಕ್ಷಗಳ ಒಂದು ವೇದಿಕೆಯಡಿಯಲ್ಲಿ ಆ ಎಲ್ಲಾ ಪಕ್ಷಗಳನ್ನು ಒಂದುಗೂಡಿಸುವ ಕೆಲಸಕ್ಕೆ ಮುಂದಾಗಿದೆ. ಆ ಮೂಲಕ ಪರ್ಯಾಯದ ಆಯ್ಕೆಯೊಂದನ್ನು ಜನತೆಯ ಮುಂದಿಡಲಾಗಿದೆ. ಮುಂಬರುವ ಈ ಚುನಾವಣೆ ಪ್ರಚಾರದಲ್ಲಿ ಈ ಪರ್ಯಾಯ ನೀತಿಗಳನ್ನು ಜನತೆಯ ಮುಂದಿಡಲು ನಿರ್ಧರಿಸಿದ್ದೇವೆ. ○

ಸಾಚಾರ್ ವರದಿ ವಿರೋಧಿಸಿದ್ದ ಬಿಜೆಪಿ

▶

ಮಂಡಿಸಲು ಮೊದಲಿಗೆ ವಿರೋಧಿಸಿತ್ತು ಎಂದರು.

ಸಮಿತಿ ವರದಿಯನ್ನಾಧರಿಸಿ ಸಿಪಿಎಂ ಅಲ್ಪಸಂಖ್ಯಾತರ ಹಿತರಕ್ಷಣೆಗಾಗಿ ಚಳುವಳಿಯನ್ನೇ ರೂಪಿಸಿದೆ. ಆದರೆ ಈ ಆಂದೋಲನ ಬಹುಸಂಖ್ಯಾತ ಹಿಂದೂಗಳನ್ನು ಹೊರತುಪಡಿಸಿ ಅಲ್ಲ ಎಂದು ಅನಾನ್ ಮುಲ್ಲ ಸ್ಪಷ್ಟಪಡಿಸಿದರು. ಹಿಂದೂಗಳು ಸೇರಿದಂತೆ ಅಗತ್ಯ ಮೂಲಸೌಲಭ್ಯಗಳಿಂದ ವಂಚಿತಗೊಂಡಿರುವ ಎಲ್ಲ ಅಲ್ಪಸಂಖ್ಯಾತ ವರ್ಗಗಳನ್ನು ಒಟ್ಟುಗೂಡಿಸಿ ಹೋರಾಡಲು ಸಿಪಿಎಂ ಬದ್ಧವಾಗಿದೆ ಎಂದರು.

ದೇಶದ ಜನಸಂಖ್ಯೆಯಲ್ಲಿ ಮುಸ್ಲೀಮರು ಶೇ.13.5 ರಷ್ಟಿದ್ದು, ಸಮುದಾಯ ಸಾಕ್ಷರತೆಯಲ್ಲಿ ತೀರಾ ಹಿಂದುಳಿದಿದೆ. ಉನ್ನತ ಶಿಕ್ಷಣ ಹಾಗೂ ಉನ್ನತ ಅಧಿಕಾರ ಸ್ಥಾನದಲ್ಲಿರುವವರ ಸಂಖ್ಯೆ ಸಮುದಾಯದ ಜನಸಂಖ್ಯೆಯಲ್ಲಿ ಶೇ.3 ರಷ್ಟಿದೆ ಹನನ್ ಮುಲ್ಲ ಹೇಳಿದರು.

ಕಮ್ಯೂನಿಸ್ಟ್ ಪಕ್ಷ ಮಾತ್ರ :

ವಿಶ್ವದಲ್ಲಿ ಕಮ್ಯೂನಿಸ್ಟ್ ಪಕ್ಷ ಮಾತ್ರ ಅಲ್ಪಸಂಖ್ಯಾತರ ರಕ್ಷಣೆಗೆ ನಿರಂತರ ಹೋರಾಟ ಮಾಡುತ್ತಲೇ ಬಂದಿದೆ. ಭಾರತದಲ್ಲಿ ಮುಸ್ಲೀಮರ ಕಲ್ಯಾಣಕ್ಕಾಗಿ ಎಡಪಕ್ಷಗಳು ಒತ್ತಡ ಹೇರಿದ್ದರಿಂದಾಗಿ 2005 ರಲ್ಲಿ ಜಸ್ಟಿಸ್ ಸಾಚಾರ್ ನೇತೃತ್ವದಲ್ಲಿ ಆಯೋಗ ರಚನೆಯಾಯಿತು. ಇದನ್ನು ಯಾರೂ ಮರೆಯುವಂತಿಲ್ಲ ಎಂದು ತಿಳಿಸಿದರು.

ಲೇಖಕಿ ಬಾನುಮುಷ್ತಾಕ್ ಮಾತನಾಡಿ, ಮುಸ್ಲಿಮ್ ಸಮುದಾಯಕ್ಕೆ ಸಂಬಂಧಿಸಿದ ವಿಷಯವನ್ನೇ ಮುಂದಿಟ್ಟುಕೊಂಡು ರಾಜಕಾರಣಿಗಳು ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ರಾಜಕೀಯ ಪಕ್ಷಗಳಿಗೆ ಮುಸ್ಲೀಮರ ವಿಷಯವಿಲ್ಲದೆ ಅಸ್ತಿತ್ವವೇ ಇಲ್ಲದಂತಾಗಿದೆ. ಕೋಮುಗಲಭೆ ಸೃಷ್ಟಿಸಿ ಮುಸಲ್ಮಾನರನ್ನು ಹಿಂಸಿಸಿದರೆ ಓಟುಗಳು ಗ್ಯಾರಂಟಿ ಎಂದು ಕೆಲ ಪಕ್ಷಗಳು ತೀರ್ಮಾನಕ್ಕೆ ಬಂದಿವೆ ಎಂದು ಲೇವಡಿ ಮಾಡಿದರು.

ಸಾಚಾರ್ ವರದಿ ಶಿಫಾರಸ್ಸಿನ ಅನ್ವಯ ಪಂಚವಾರ್ಷಿಕ ಯೋಜನೆಯಲ್ಲಿ ಶೇ.15 ರಷ್ಟು ಹಣವನ್ನು ಮುಸ್ಲಿಮರ ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ಮೀಸಲಿಡುವಂತೆ ಆಗ್ರಹಿಸಿದರು.

ಲೇಖಕ ಫಕೀರ್ ಅಹಮದ್ ಕಟ್ಪಾಡಿ ಮಾತನಾಡಿ, ದೇಶದಲ್ಲಿ ಎಲ್ಲ ಮುಸ್ಲಿಮರನ್ನು ಭಯೋತ್ಪಾದಕರಂತೆ ಕಾಣುತ್ತಿರುವುದು ವಿಷಾದನೀಯ. ಭಯೋತ್ಪಾದನೆ ಹಾಗೂ ಕೋಮುವಾದ ಬೆಳೆಸುವವರಿಗೆ ಜನತೆ ತಕ್ಕ ಪಾಠ ಕಲಿಸಬೇಕಿದೆ ಎಂದರು.

ಸಿಪಿಎಂ ರಾಜ್ಯ ಕಾರ್ಯದರ್ಶಿ ಕಾಂ. ವಿಜೆಕೆ ನಾಯರ್ ಅಧ್ಯಕ್ಷತೆ ವಹಿಸಿದ್ದರು. ರಾಜ್ಯಸಮಿತಿ ಸದಸ್ಯರಾದ ಸೈಯದ್ ಮುಜೀಬ್ ಸ್ವಾಗತಿಸಿ, ಸುಬ್ರಹ್ಮಣ್ಯ ವಂದಿಸಿದರು. ○

....ಜಗತ್ತಿಗೆ ಬೆಳಕು ನೀಡಿದ ಗೆಲಿಲಿಯೋ

ಪುಟ 26 ರಿಂದ

ಹಲವು ಶೋಧನೆಗಳ ಹಂತವನ್ನು ದಾಟಿ ಬಂದಿದ್ದೇವೆ: ಸೂರ್ಯನ ಸುತ್ತ ಭೂಮಿ ಸುತ್ತುತ್ತದೆ. ‘ಮಿಲ್ಕಿ ವೇ’ ಎಂಬ ನಮ್ಮ ನಕ್ಷತ್ರಪುಂಜದಲ್ಲಿ ಸುತ್ತುತ್ತಿರುವ ಒಂದು ಲಕ್ಷ ಕೋಟಿಗೂ ಹೆಚ್ಚು ನಕ್ಷತ್ರಗಳಲ್ಲಿ ಸೂರ್ಯ ಕೂಡ ಒಂದು. ನಮಗೆ ಗೋಚರವಾಗಬಲ್ಲ ವಿಶ್ವದಲ್ಲಿ ಒಂದು ಲಕ್ಷ ಕೋಟಿಗೂ ಹೆಚ್ಚು ಇರುವ ನಕ್ಷತ್ರಪುಂಜಗಳಲ್ಲಿ ಈ ‘ಮಿಲ್ಕಿ ವೇ’ ಕೂಡ ಒಂದಷ್ಟೆ. ಸರಳವಾಗಿ ಹೇಳುವುದಾದರೆ ನಮ್ಮ ಭೂಮಿಯ ಇಡೀ ಎಲ್ಲ ಸಾಗರ ತಟದಲ್ಲಿರುವ ಒಟ್ಟು ಮರಳುಗಳ ಕಣಗಳಷ್ಟು ನಕ್ಷತ್ರಗಳು ಹಾಗೆಯೇ ಬಹುಶ: ಗ್ರಹಗಳು ನಮ್ಮ ವಿಶ್ವದಲ್ಲಿವೆ!

ಗೆಲಿಲಿಯೋಗಿಂತಲೂ ಮುಂಚೆಯೇ ಕೋಪರ್ನಿಕಸ್ ಎಂಬ ವಿಜ್ಞಾನಿ ಸೂರ್ಯನ ಸುತ್ತ ಇತರೆ ಗ್ರಹಗಳು ಸುತ್ತುತ್ತವೆಂದು ಪ್ರತಿಪಾದಿಸಿದ್ದರೂ ಅದಕ್ಕೆ ಅಗತ್ಯವಾದ ಗ್ರಹಗಳ ಚಲನೆ ಅಂಕಿಅಂಶಗಳನ್ನು ಕಲೆಹಾಕಿರಲು ಸಾಧ್ಯವಾಗಿರಲಿಲ್ಲ. ನಂತರ ಟೈಕೋ ಬ್ರಾಹೆ ಎಂಬ ವಿಜ್ಞಾನಿಯು ನಿರಂತರವಾಗಿ ಹಲವಾರು ವರ್ಷಕಾಲ ಗ್ರಹಗಳ ಚಲನೆಯನ್ನು ವೀಕ್ಷಿಸಿ ಅವುಗಳ ಪಥ, ದಿಕ್ಕು, ಇತ್ಯಾದಿ ಅಂಕಿ ಅಂಶಗಳನ್ನು ನಿಖರವಾಗಿ ದಾಖಲು ಮಾಡಿಕೊಂಡಿದ್ದು ಕೆಪ್ಲರ್ ಎಂಬ ಮತ್ತೊಬ್ಬ ವಿಜ್ಞಾನಿಗೆ ಸೂರ್ಯ-ಕೇಂದ್ರಿತ ನೆಲೆಯ ಸಿದ್ಧಾಂತವನ್ನು ಬಲಗೊಳಿಸಲು ಸಾಕಷ್ಟು ಅನುವುಮಾಡಿಕೊಟ್ಟಿತ್ತು. ಕೆಪ್ಲರ್ ಮತ್ತು ಗೆಲಿಲಿಯೋ ಸಮಕಾಲೀನರಾಗಿದ್ದರು.

ವಿಜ್ಞಾನದ ಆಧಾರದ ಮೇಲೆ ಧರ್ಮಗಳನ್ನು ರೂಪಿಸಬೇಕು

ಆದರೆ ಅಂದು ಚರ್ಚುಗಳು ಮತ್ತು ಧಾರ್ಮಿಕ ಪಂಥೀಯರು ಗೆಲಿಲಿಯೋ ತರಹದ ವಿಜ್ಞಾನಿಗಳ ಆವಿಷ್ಕಾರಗಳು ತಮ್ಮ ಬುಡಕ್ಕೆ ಪೆಟ್ಟು ನೀಡುವವೆಂದು, ಅಂತಹ ವೈಚಾರಿಕ ವಿಚಾರಗಳನ್ನು ವಿರೋಧಿಸುತ್ತಿದ್ದರು. ಬೈಬಲ್‌ಗೆ ವಿರುದ್ಧವಾದ ಯಾವುದೇ ಅಂಶವನ್ನು ದೈವನಿಂದನೆ ಎಂದು ಪರಿಗಣಿಸಿ ಉಗ್ರ ಶಿಕ್ಷೆಗೆ ಒಳಪಡಿಸುತ್ತಿದ್ದವು. ಹೀಗಿರುವಾಗ ಒಮ್ಮೆ ಗೆಲಿಲಿಯೋನ ಮಾಜಿ ವಿದ್ಯಾರ್ಥಿಯೊಬ್ಬ ಅಲ್ಲಿಯ ರಾಜ ಮತ್ತು ಅವನ ತಾಯಿಯೊಡನೆ ನಡೆದ ವಾಗ್ವಾದವೊಂದರಲ್ಲಿ ಕೋಪರ್ನಿಕಸ್ ಸಿದ್ಧಾಂತವನ್ನು ಸಮರ್ಥಿಸಿ ಮಾತನಾಡಿದ. ತನ್ನ ವಿದ್ಯಾರ್ಥಿಯು ಸಮರ್ಥಿಸಿದ ಕೋಪರ್ನಿಕಸ್ ಸಿದ್ಧಾಂತವನ್ನು ಗೆಲಿಲಿಯೋ ಸಾರ್ವಜನಿಕವಾಗಿ ಎತ್ತಿಹಿಡಿದು, ವಿಜ್ಞಾನವು ಕಂಡುಕೊಂಡ ಸತ್ಯದ ಆಧಾರದ ಮೇಲೆ ಬೈಬಲ್ ತರಹದ ಧಾರ್ಮಿಕ ಗ್ರಂಥಗಳು ತಮ್ಮ ಧರ್ಮವನ್ನು ಅರ್ಥೈಸಬೇಕೆಂದು ಹೇಳಿದರು. ಇದರಿಂದ ರೊಚ್ಚಿಗೆದ್ದ ರಾಜ ಇದರ ವಿಚಾರಣೆ ನಡೆಸುವಂತೆ ಚರ್ಚಿನ ಅತಿ ದೊಡ್ಡ ಪಾದ್ರಿಗೆ ಆದೇಶಿಸಿದ. ಸ್ವಲ್ಪದರಲ್ಲಿ ಉಗ್ರ ಶಿಕ್ಷೆಯಿಂದ ಗೆಲಿಲಿಯೋ ಪಾರಾದರೂ ಧಾರ್ಮಿಕ ಪಂಥೀಯರ ಕಣ್ಣು ಅವನ ಮೇಲೆ ನೆಟ್ಟಿತ್ತು.

ಅಷ್ಟಕ್ಕೂ ಸುಮ್ಮನಾಗದ ಗೆಲಿಲಿಯೋ ರಾಜನಿಗೊಂದು ಪತ್ರ ಬರೆದರು. ಅದರ ಒಕ್ಕಣೆ ಇಲ್ಲಿದೆ: ಸೂರ್ಯನೇ ಎಲ್ಲ ಗ್ರಹಗಳಿಗೂ ಕೇಂದ್ರವೆಂದು ನನಗೆ ಮನವರಿಕೆಯಾಗಿದೆ. ಭೂಮಿಯೂ ಕೂಡ ಅದರ ಸುತ್ತ ಸುತ್ತುತ್ತದೆ. ಟಾಲೆಮಿ ಮತ್ತು ಅರಿಸ್ಟಾಟಲ್ ಪ್ರತಿಪಾದಿಸಿರುವ ಭೂಮಿ ಕೇಂದ್ರಿತ ವಾದವನ್ನು ನಾನು ತಿರಸ್ಕರಿಸುತ್ತೇನೆ.

ವಿಜ್ಞಾನಿ ಗೆಲಿಲಿಯೋ ವಿರುದ್ಧ ಚರ್ಚುಗಳ ಸಮರ

ಇದರ ಪರಿಣಾಮವಾಗಿ ರಾಜನು ಕೋಪರ್ನಿಕಸ್ ಸಿದ್ಧಾಂತದ ಸತ್ಯಾಸತ್ಯತೆಯನ್ನು ತಿಳಿಯಲು ಅಲ್ಲಿನ ಮುಖ್ಯ ಚರ್ಚೊಂದರ ಪೋಪ್‌ರವರಿಗೆ ಆದೇಶಿಸಿದನು. ಕೋಪರ್ನಿಕಸ್ ಸಿದ್ಧಾಂತವನ್ನು ಸಾರಾಸಗಟಾಗಿ ಸುಳ್ಳಿನ ಕಂತೆಯೆಂದು ತಿರಸ್ಕರಿಸಿದ ಪೋಪ್, ಅದನ್ನು ಕಲಿಸುವವರಿಗೆ ಉಗ್ರ ಶಿಕ್ಷೆ ನೀಡಬೇಕೆಂದು ಘೋಷಿಸಿದನು. ಇದಕ್ಕೆ ಬಗ್ಗದ ಗೆಲಿಲಿಯೋ ‘ಎರಡು ಮುಖ್ಯ ವಿಶ್ವಗಳನ್ನು ಕುರಿತ ಚರ್ಚೆ’ ಎಂಬ ತಮ್ಮ ಪ್ರಸಿದ್ಧ ಪುಸ್ತಕವನ್ನು ಬರೆದು ಪ್ರಕಟಿಸಿದರು. ಅದು ವ್ಯಾಪಕವಾಗಿ ಮಾರಾಟವಾಯಿತು. ಅದನ್ನು ಮುಟ್ಟುಗೋಲು ಹಾಕಿಕೊಂಡು ನಿಷೇಧಗೊಳಿಸಿದ ಸರ್ಕಾರ, ಗೆಲಿಲಿಯೋನನ್ನು ಗೃಹ ಬಂಧನದಲ್ಲಿರಿಸಿತು. ಅದೇ ಸಮಯದಲ್ಲಿ ಗೆಲಿಲಿಯೋ ಮಗಳು ರೋಗಕ್ಕೆ ತುತ್ತಾಗಿ ಮತ್ತೊಂದು ಹೊಡೆತಕ್ಕೆ ಸಿಲುಕಿದರು. ಗೃಹಬಂಧನದಲ್ಲಿರುವಾಗಲೇ ತಮ್ಮ ಆವಿಷ್ಕಾರಗಳನ್ನು ಪರಿಷ್ಕರಿಸಿ ಮತ್ತೊಂದು ಬಹು ಮುಖ್ಯ ಪುಸ್ತಕವನ್ನು ಬರೆದರು. ಅದನ್ನು ಇಟಲಿಯಿಂದ ಕದ್ದು ಹಾಲೆಂಡ್ ತಲುಪುವಂತೆ ಏರ್ಪಾಟು ಮಾಡಿದರು. ಅದು ಅಲ್ಲಿ ಪ್ರಕಟಗೊಂಡಾಗ ವ್ಯಾಪಕ ಪ್ರಸಿದ್ಧಿ ಗಳಿಸಿತು.

ಗೆಲಿಲಿಯೋ 1642ರಲ್ಲಿ ಸುದೀರ್ಘ ಬಳಲಿಕೆಯಿಂದ ಮರಣವಾದರು. ಅವರು ಸಾಯುವ 4 ವರ್ಷಗಳ ಮುಂಚಿನಿಂದ ಅವರಿಗೆ ಕಣ್ಣು ಕಾಣುತ್ತಿರಲಿಲ್ಲ. ಚರ್ಚಿನ ವಿಧಿವಿಧಾನಗಳಿಗೆ ಬದಲಾಗಿ ತಮ್ಮನ್ನು ಬಸಿಲಿಕಾ ಎಂಬ ಸ್ಥಳದಲ್ಲಿ ಹೂಳಬೇಕೆಂದು ಅವರು ಬಯಸಿದ್ದರು. ಚರ್ಚಿನಿಂದ ತೀವ್ರ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆಂದು ಹೆದರಿದ ಅವರ ಕುಟುಂಬದವರು ಅವರ ಕಳೇಬರವನ್ನು ರಹಸ್ಯವಾಗಿ ಹೂಳಿದ್ದರು. ಹೀಗೆ ತಮ್ಮ ಜೀವನದುದ್ದಕ್ಕೂ ಚರ್ಚು ಮತ್ತು ಧಾರ್ಮಿಕ ಪಂಥೀಯರ ವಿರೋಧದ ವಿರುದ್ಧ ಸೆಣಸುತ್ತಾ ವೈಜ್ಞಾನಿಕ ಕ್ರಾಂತಿಯ ಭಾಗವಾಗಿದ್ದರು.

1992ರಲ್ಲಿ ಪೋಪ್ ಜಾನ್‌ಪಾಲ್ 2 ರವರು ಮಾತನಾಡುತ್ತಾ ಗೆಲಿಲಿಯೋರವರಿಗೆ ಅಂದಿನ ಚರ್ಚು ತೀವ್ರ ಹಿಂಸೆಗೊಳಪಟ್ಟಿಸಿದ್ದನ್ನು ಒಪ್ಪಿಕೊಂಡರು. ಆದರೆ ಅವರು ಅದಕ್ಕಾಗಿ ಯಾವುದೇ ವಿಷಾದ ವ್ಯಕ್ತಪಡಿಸಿಲಿಲ್ಲ. ಖಗೋಳಶಾಸ್ತ್ರದ ಕುರಿತು ಹೆಚ್ಚಿಗೆ ಅರಿವು ಮೂಡಿಸಲು ಹೆಚ್ಚು ಸಂಶೋಧನೆಗಳನ್ನು ಕೈಗೊಳ್ಳಲು 2009ನೇ ವರ್ಷವನ್ನು ಅಂತರರಾಷ್ಟ್ರೀಯ ಖಗೋಳಯಾನ ಸಂಸ್ಥೆಯು ‘ಅಂತರರಾಷ್ಟ್ರೀಯ ಖಗೋಳಯಾನ ವರ್ಷ’ ಎಂದು ಆಚರಿಸುತ್ತಿದೆ. ○

ಜಗದಗಲ

ಶರತ್‌ಚಂದ್ರ

ಬಾಂಗ್ಲಾ ರೈಫಲ್ಸ್ ಸೈನಿಕರ ದಂಗೆ - ಐ.ಎಸ್.ಐ. ಕೈವಾಡ ?

ಫೆಬ್ರುವರಿ 25 ರಂದು ಬಾಂಗ್ಲಾದೇಶ ರೈಫಲ್ಸ್ (ಪ್ಯಾರಾಮಿಲಿಟರಿ ಗಡಿ ಭದ್ರತಾಪಡೆ) ಮುಖ್ಯ ಕಚೇರಿಯ ಆವರಣದಲ್ಲಿ ವಾರ್ಷಿಕ ಮೇಳ ನಡೆಯುತ್ತಿತ್ತು. ಒಂದು ವಾರ ನಡೆಯುವ ಈ ಮೇಳದ ಎರಡನೆಯ ದಿನ ಪಡೆಯ ಮುಖ್ಯಸ್ತ ಮೇಜರ್ ಜನರಲ್ ಶಕೀಲ್ ವಿಶೇಷ ಸೇವೆಗಾಗಿ ಅಧಿಕಾರಿಗಳು ಮತ್ತು ಸೈನಿಕರಿಗೆ ಪದಕಗಳನ್ನು ಪ್ರದಾನ ನೀಡುವ ಸಮಾರಂಭ ಇತ್ತು. ಸಂಪ್ರದಾಯದ ಪ್ರಕಾರ ಈ ಮೇಳದಲ್ಲಿ ಎಲ್ಲರೂ ನಿಶ್ಯಸ್ತ್ರರಾಗಿ ಇರುತ್ತಾರೆ. ಆದರೆ ಹಠಾತ್ತಾಗಿ ಸಮಾರಂಭ ನಡೆಯುತ್ತಿದ್ದ ದರ್ಬಾರ್ ಹಾಲಿಗೆ ಕೆಲವು ಭದ್ರತಾಪಡೆಯ ಸೈನಿಕರು' ಸಶಸ್ತ್ರರಾಗಿ ದಾಳಿ ಮಾಡಿ, ಪಡೆಯ ಹಲವಾರು ಉನ್ನತ ಮತ್ತು ಮಧ್ಯಮ ಹಂತದ ಅಧಿಕಾರಿಗಳನ್ನು ಗುಂಡಿಟ್ಟು ಕೊಂದರು. ಅಧಿಕಾರಿಗಳ ಕ್ವಾರ್ಟರ್ಸ್‌ಗಳಿಗೂ ದಾಳಿ ಮಾಡಿ ಅವರ ಕುಟುಂಬದವರ ಮೇಲೂ ದಾಳಿ ಮಾಡಿ ಅವರನ್ನು ಕೊಂದರು. ಅವರ ಆಸ್ತಿ ಪಾಸ್ತಿ ಲೂಟಿ ಮಾಡಿದರು. ಮನೆಗಳಿಗೆ, ವಾಹನಗಳಿಗೆ ಬೆಂಕಿ ಇಟ್ಟರು. ಪಡೆಯ ಮುಖ್ಯಸ್ತ ಮೇಜರ್ ಜನರಲ್ ಶಕೀಲ್ ಮತ್ತು ಅವರ ಮಡದಿಯನ್ನು ದಂಗೆಕೋರರು ಕೊಲೆ ಮಾಡಿದರು.



ಒಂದು ಸೈನಿಕರ ಗುಂಪು ಮುಖ್ಯ ಕಚೇರಿಯ ಆವರಣದಲ್ಲಿ ಈ ರೀತಿ ಹಿಂಸಾಚಾರದಲ್ಲಿ ತೊಡಗಿದ್ದರೆ, ಇನ್ನೊಂದು ಗುಂಪು ಮುಖ್ಯದ್ವಾರದ ಬಳಿ ಸಾರ್ವಜನಿಕರ ಮೇಲೆ ಬೇಕಾಬಿಟ್ಟಿ ಗುಂಡು ಹಾರಿಸುತ್ತಾ ಇತ್ತು. ಈ ದಂಗೆಯ ಸುದ್ದಿ ತಿಳಿದು ಬಂದ ಸೈನಿಕ ತುಕಡಿಯ ಮೇಲೆ ದಾಳಿ ಮಾಡಿ ಅವರು ಒಳಗೆ ಹೋಗದಂತೆ ತಡೆಯಿತು. ದಂಗೆಯಲ್ಲಿ 67 ಉನ್ನತ ಮತ್ತು ಮಧ್ಯಮ ಹಂತದ ಅಧಿಕಾರಿಗಳು ಕೊಲೆಯಾದರು. ನಾಲ್ಕು ನಾಗರಿಕರು ಕೊಲೆಯಾದರು. 131 ಜನ ತೀವ್ರವಾಗಿ ಗಾಯಗೊಂಡರು. ಸೈನ್ಯ ಮತ್ತು ಗಡಿ ಭದ್ರತಾ ಪಡೆ ನಡುವೆ ಪೂರ್ಣಪ್ರಮಾಣದ ಗುಂಡಿನ ಕಾಳಗ ತಡೆಯಲು ಸರ್ಕಾರ ದಂಗೆಕೋರರ ಪ್ರತಿನಿಧಿಗಳ ಜತೆ ಮಾತುಕತೆ ನಡೆಸಿತು.



36 ಗಂಟೆಗಳ ದಂಗೆಯ ತನಿಖೆ

ದೀರ್ಘ ಮಾತುಕತೆಗಳ ನಂತರ 36 ಗಂಟೆಗಳ ದಂಗೆ ಕೊನೆಗೊಂಡಿತು. ಆದರೆ ಮಾತುಕತೆಗಳ ಸಮಯದಲ್ಲಿ ಸರ್ಕಾರಕ್ಕೂ ಗಡಿ ಭದ್ರತಾಪಡೆಯ ಮುಖ್ಯ ಕಚೇರಿಯ ಆವರಣದಲ್ಲಿ ನಡೆದ ಭೀಕರ ನರಮೇಧದ ಪೂರ್ಣ ಚಿತ್ರ ಸಿಕ್ಕಿರಲಿಲ್ಲ. ಸೈನ್ಯದ ತುಕಡಿಯನ್ನು ಗಡಿ ಭದ್ರತಾಪಡೆಯ ಮುಖ್ಯ ಕಚೇರಿಯ ಆವರಣದಿಂದ ಹಿಂತೆಗೆದುಕೊಳ್ಳಲು ಮತ್ತು ದಂಗೆಕೋರರಿಗೆ ಸಾರ್ವತ್ರಿಕ ಕ್ಷಮಾಪಣೆ ಕೊಡಲು ಸರ್ಕಾರ ದಂಗೆ ಕೊನೆಗೊಳಿಸಲು ಷರತ್ತಾಗಿ ಒಪ್ಪಿಕೊಂಡಿತು. ಸೈನ್ಯದಿಂದ ಬಂದಿರುವ ಹಿರಿಯ ಅಧಿಕಾರಿಗಳು ಪಡೆಯ ಸಾಮಾನ್ಯ ಸೈನಿಕರನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತಾರೆ. ಅವರಿಬ್ಬರ ನಡುವಿನ ಸಂಬಳ ಮತ್ತು ಸವಲತ್ತುಗಳ ಅಂತರ ಅಗಾಧವಾಗಿದೆ. ಸೈನಿಕರ ಸಮಸ್ಯೆಗಳನ್ನು ಕೇಳುವವರೇ ಇಲ್ಲ. ಮೇಳದ ಮೊದಲ ದಿನ ಆಗಮಿಸಿದ ಪ್ರಧಾನಿಯವರನ್ನು ಭೇಟಿ ಮಾಡಿ ತಮ್ಮ ಸಮಸ್ಯೆಗಳನ್ನು ತೋಡಿಕೊಳ್ಳಲು ಪಡೆಯ ಹಿರಿಯ ಅಧಿಕಾರಿಗಳು ಬಿಡಲಿಲ್ಲ. ಆದ್ದರಿಂದ ಉದ್ರಿಕ್ತರಾದ ಸೈನಿಕರು ದಂಗೆಯೆದ್ದರು. ಇದು ದಂಗೆಕೋರರ ಸೈನಿಕರ ಪ್ರತಿನಿಧಿಗಳ ಅಂಬೋಣ.

ದಂಗೆ ನಿಂತರೂ ಅದರ ತೀವ್ರ ಪರಿಣಾಮಗಳು ನಿಂತಿಲ್ಲ. ಪ್ರಮುಖ ವಿರೋಧ ಪಕ್ಷಗಳಾದ ಬಿ.ಎನ್.ಪಿ. ಮತ್ತು ಮೂಲಭೂತವಾದಿ ಜಮಾತೇ ಇಸ್ಲಾಮೀ ಪಕ್ಷಗಳು ಗೃಹಮಂತ್ರಿಯ ರಾಜೀನಾಮೆ ಕೇಳಿವೆ. ಸೈನ್ಯದಲ್ಲಿ ತೀವ್ರ ಅತೃಪ್ತಿ ಹರಡಿದೆ. ಸೈನ್ಯ ಮತ್ತು ಗಡಿ ಭದ್ರತಾ ಪಡೆ ನಡುವೆ ತೀವ್ರ ಸಂಘರ್ಷದ ವಾತಾವಾರಣ ಇದೆ. ಗಡಿ ಭದ್ರತಾ ಪಡೆಯನ್ನು ಬರ್ಖಾಸ್ತು ಮಾಡಬೇಕು ಎಂದು ಸೈನ್ಯದ ಅಧಿಕಾರಿಗಳು ಒತ್ತಾಯಿಸುತ್ತಿದ್ದಾರೆ. ಸರ್ಕಾರ ಈ ದಂಗೆಯ ಹಿನ್ನೆಲೆ ತಿಳಿಯಲು ಒಂದು ತನಿಖಾ ಸಮಿತಿ ನೇಮಿಸಿದೆ. ಸೈನ್ಯ ತನ್ನದೇ ಒಂದು ತನಿಖಾ ಸಮಿತಿ ನೇಮಿಸಿದೆ. ಅಲ್ಲದೆ ದಂಗೆಕೋರರ ಜತೆ ಸಂಧಾನ ನಡೆಸಿದ ಗೃಹಮಂತ್ರಿ ಸರ್ಕಾರೀ ತನಿಖಾ ಸಮಿತಿಯಿಂದ ಕೈಬಿಡುವಂತೆ ಒತ್ತಡ ಹಾಕಿ ಸಫಲವಾಗಿದೆ. ಗಡಿ ಭದ್ರತಾಪಡೆಯ ಮುಖ್ಯ ಕಚೇರಿಯ ಆವರಣದಲ್ಲಿ ಮತ್ತು ಢಾಕಾದ ಪ್ರಮುಖ ಪ್ರದೇಶಗಳಲ್ಲಿ ಗಸ್ತು ತಿರುಗುತ್ತಿದೆ. ಒಂದುವರೆ ತಿಂಗಳ ಹಸೀನಾ ಸರ್ಕಾರ ಎದುರಿಸುತ್ತಿರುವ ತೀವ್ರ ರಾಜಕೀಯ ಬಿಕ್ಕಟ್ಟು ಇದು. ಈ ಬೆಳವಣಿಗೆ ಬಾಂಗ್ಲಾದೇಶದಲ್ಲಿ ಮತ್ತು ಅಂತರ್ರಾಷ್ಟ್ರೀಯವಾಗಿ ದಿಗ್ಭ್ರಮೆ ಮತ್ತು ಆಶ್ಚರ್ಯ ತಂದಿದೆ.

ವ್ಯವಸ್ಥಿತ ಪಿತೂರಿ

ಮೊದಲ ನೋಟಕ್ಕೆ ಇದು ಗಡಿ ಭದ್ರತಾ ಪಡೆಯ ಸೈನಿಕರ ಸಮಸ್ಯೆ ತಂದ ಆಕ್ರೋಶದ ಆಸ್ಫೋಟದಂತೆ ಕಾಣುತ್ತದೆ. ಆದರೆ ಆ ನಂತರ ಹೊರಬಿದ್ದ ಹಲವು ಅಂಶಗಳನ್ನು ನೋಡಿದರೆ ಇದರ ಹಿಂದೆ ವ್ಯವಸ್ಥಿತ ಪಿತೂರಿ ಇರುವುದು ಕಂಡು ಬರುತ್ತದೆ. ದಂಗೆಯ ನರಮೇಧದಿಂದ ರಕ್ಷಿಸಲ್ಪಟ್ಟ ಹಲವು ಅಧಿಕಾರಿಗಳು ದಂಗೆಗೆ ಮುಂಚೆ ಹೊರಗಿನಿಂದ ದೊಡ್ಡ ಪ್ರಮಾಣದಲ್ಲಿ ಟ್ರಕ್ಕುಗಟ್ಟಲೆ ಶಸ್ತ್ರಾಸ್ತ್ರಗಳು ಬಂದಿದ್ದು ಮತ್ತು ಸೈನಿಕರನ್ನು ಅವರ ಸಮಸ್ಯೆಗಳನ್ನು ಆಕ್ರೋಶಕಾರಿ ರೀತಿಯಲ್ಲಿ ಬಿಂಬಿಸಿದ ಕರಪತ್ರಗಳನ್ನು ಯುವ ಸೈನಿಕರಲ್ಲಿ ಹಂಚಿದ್ದು ನೋಡಿರುವುದಾಗಿ ವರದಿಯಾಗಿದೆ. ದಂಗೆಯಲ್ಲಿ ಭಾಗವಹಿಸಿದ್ದು ಕೆಲವು ಯುವ ಸೈನಿಕರು. ಅದರಲ್ಲಿ ವ್ಯಾಪಕ ಪಾಲ್ಗೊಳ್ಳುವಿಕೆ ಕಾಣಲಿಲ್ಲ. ಮಿಂಚಿನ ದಾಳಿಯ ವೇಗ ಸಹ ವ್ಯವಸ್ಥಿತ ಪಿತೂರಿಯತ್ತ ಬೆಟ್ಟು ಮಾಡುತ್ತಿವೆ. ಸಂಧಾನ ನಡೆಯುತ್ತಿದ್ದಂತೆ ದಂಗೆಕೋರರು ನರಮೇಧದ ಕುಕೃತ್ಯಗಳ ಸುಳಿವು ಸಿಗದಂತೆ ಮಾಡಿ ಪರಾರಿಯಾದರು. ಸಂಧಾನದ ದೀರ್ಘ ಅವಧಿಯನ್ನು ಇದಕ್ಕಾಗಿ ಬಳಸಿಕೊಳ್ಳಲಾಯಿತು ಎಂದೂ ವರದಿಯಾಗಿದೆ.



ಈ ಪಿತೂರಿ ನಡೆಸಿದವರು ಯಾರು?

ಅವರ ಗುರಿ ಉದ್ದೇಶ ಏನು? ಬಾಂಗ್ಲಾದೇಶ ರೈಫಲ್ಸ್ ಹಿಂದೆ ಸಂಘಟಿತವಾದ ಪೂರ್ವ ಪಾಕಿಸ್ತಾನ ರೈಫಲ್ಸ್‌ನ ಹೊಸ ಅವತಾರ. ಭಾರತದ ಜತೆ ಇರುವ ಸುಮಾರು 4 ಸಾವಿರ ಕಿ.ಮಿ. ಗಡಿಯನ್ನು ಕಾಯುವ ಪ್ಯಾರಾಮಿಲಿಟರಿ ಪಡೆ. ಹಿಂದೆ ಪಾಕಿಸ್ತಾನದ ಮಿಲಿಟರಿ ಸರ್ಕಾರಗಳ ಮತ್ತು ಇತ್ತೀಚಿನ ದಶಕಗಳಲ್ಲಿ ಬಿ.ಎನ್.ಪಿ.-ಜಮಾತೇ ಇಸ್ಲಾಮಿ ಸರ್ಕಾರದ ಆಳ್ವಿಕೆಯಲ್ಲಿ ಬಾಂಗ್ಲಾದೇಶ ರೈಫಲ್ಸ್ ಭಾರತ- ವಿರೋಧಿ ಚಟುವಟಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಭಾರತ-ವಿರೋಧಿ ಮೂಲಭೂತವಾದಿ ಮತ್ತು ಪ್ರತ್ಯೇಕತಾವಾದಿ ಗುಂಪುಗಳಿಗೆ ಇದು ತೆರೆದ ಗಡಿಯಾಗಿತ್ತು. ಮಾತ್ರವಲ್ಲ ಶಸ್ತ್ರಾಸ್ತ್ರ, ಅಡಗುದಾಣ, ಆಹಾರ ಪೂರೈಕೆ ಮುಂತಾದ ಎಲ್ಲಾ ರೀತಿಯ ಬೆಂಬಲ ಅವರಿಗೆ ದೊರಕುತ್ತಿತ್ತು. ಇದೆಲ್ಲಾ ಸ್ವಾಭಾವಿಕವಾಗಿಯೇ ಬಾಂಗ್ಲಾದೇಶ ರೈಫಲ್ಸ್‌ನ ಬೆಂಬಲ ಇಲ್ಲದೆ ಸಾಧ್ಯವಿಲ್ಲ.

ಐ.ಎಸ್.ಐ.- ಜಮಾತೇ ಇಸ್ಲಾಮೀ ಕೈವಾಡ

ಈ ಎಲ್ಲಾ ಚಟುವಟಿಕೆಗಳನ್ನು ಪಾಕಿಸ್ತಾನದ ಐ.ಎಸ್.ಐ. ಸಂಯೋಜಿಸುತ್ತಿತ್ತು. ಇಂತಹ ಮಿತ್ರದೇಶ ಭಾರತದ ವಿರುದ್ಧವಾದ ಚಟುವಟಿಕೆಗಳನ್ನು ಹಲವು ರೈಫಲ್ಸ್‌ನ ಅಧಿಕಾರಿಗಳು ವಿರೋಧಿಸಿದ್ದರು. ಅದರಲ್ಲೂ ಬಾಂಗ್ಲಾದೇಶ ವಿಮೋಚನಾ ಹೋರಾಟದಲ್ಲಿ ಭಾಗವಹಿಸಿದ್ದ ಮತ್ತು ಅದರಿಂದ ಪ್ರಭಾವಿತರಾದ ಅಧಿಕಾರಿಗಳು ವಿರೋಧಿಸಿದ್ದರು. ಅವರನ್ನು ದಂಗೆಕೋರರು ವಿಶೇಷವಾಗಿ ಗುರಿ ಮಾಡಿದ್ದು ಕಂಡು ಬಂದಿದೆ. ಮುಖ್ಯಸ್ಥ ಶಕೀಲ್ ಸಹ ಇಂತಹ ಒಬ್ಬ ಅಧಿಕಾರಿಯಾಗಿದ್ದರು. ಶೇಖ್ ಹಸಿನಾ ಸರ್ಕಾರ ಬಂದ ನಂತರ ಭಾರೂ-ವಿರೋಧಿ ಚಟುವಟಿಕೆಗಳನ್ನು ನಿಲ್ಲಿಸುವತ್ತ ಅವರು ಹಲವು ಕ್ರಮ ಕೈಗೊಂಡಿದ್ದರು. ಅಲ್ಲದೆ ವಿಮೋಚನಾ ಸಮರದ ಅಪರಾಧಿಗಳನ್ನು ಗುರುತಿಸಿ ಶಿಕ್ಷಿಸುವುದು ಮತ್ತು ಮೂಲಭೂತವಾದಿ ಭಯೋತ್ಪಾದನೆ ವಿರುದ್ಧ ಕಠಿಣ ಕ್ರಮ ಒಂದು ಚುನಾವಣಾ ವಿಷಯವಾಗಿತ್ತು. ಶೇಖ್ ಹಸಿನಾ ಸರ್ಕಾರ ಈ ನಿಟ್ಟಿನಲ್ಲಿ ಪಾರ್ಲಿಮೆಂಟಿನ ನಿರ್ಣಯ ಮಾಡಿಸಿ ಕಾರ್ಯಪಡೆ ಒಂದನ್ನು ನೇಮಿಸಿತ್ತು.


ಬಿ.ಎನ್.ಪಿ. ಸರ್ಕಾರದ ಆಳ್ವಿಕೆಯಲ್ಲಿ ವ್ಯಾಪಕವಾಗಿ ಮೂಲಭೂತವಾದಿ ಜಮಾತೇ ಇಸ್ಲಾಮಿ ತನ್ನ ಬೆಂಬಲಿಗರನ್ನು ಬಾಂಗ್ಲಾದೇಶ ರೈಫಲ್ಸ್, ಸೈನ್ಯ ಮತ್ತು ಪೋಲೀಸು ಪಡೆಗ[illegible] ತೂರಿಸಿದೆ. ಬಾಂಗ್ಲಾದೇಶದ ವಿಮೋಚ[illegible] ಹೋರಾಟದ ಸಮಯದಲ್ಲಿ ಜನತೆ ವಿರುದ್ಧ ಪಾಕಿಸ್ತಾನಿ ಸೈನ್ಯದ ಜತೆ ಶಾಮೀಲಾಗಿ ಕೊಲೆ - ಸುಲಿಗೆ - ಮಾನಭಂಗ ಮುಂತಾದ ಹೇಯ ಕೃತ್ಯಗಳಲ್ಲಿ ತೊಡಗಿದ್ದ ರಜಾಕಾರ್ ಅಲ್ ಶಾಮ್ ಅಲ್ ಬದರ್ ಮುಂತಾದ ಮೂಲಭೂತವಾದಿ ಶಕ್ತಿಗಳೇ ಜಮಾ[illegible] ಇಸ್ಲಾಮಿ ಎಂಬ ಪಕ್ಷ ರಚಿಸಿದ್ದು ಎಂದು ಇಲ್ಲಿ ನೆನೆಸಿಕೊಳ್ಳಬಹುದು. ಅವರನ್ನು ವಿಮೋಚನಾ ಹೋರಾಟದ ಅಪರಾಧಿಗಳು ಎಂದು [illegible] ಪರಿಗಣಿಸುತ್ತಾರೆ.

ಶೇಖ್ ಹಸಿನಾ ಸರ್ಕಾರ ಇಂತಹ ಕ್ರಮಗಳು ಕೈಗೊಳ್ಳದಂತೆ ಒತ್ತಡ ತರುವುದು ಮತ್ತು ಸಾಧ್ಯವಾದರೆ ಸರ್ಕಾರವನ್ನು ಉರುಳಿಸುವುದು ಈ ಪಿತೂರಿಯ ಉದ್ದೇಶವಾಗಿತ್ತು. ಜಮಾತೇ-ಇಸ್ಲಾಮಿ ತನ್ನ ಅಸ್ತಿತ್ವಕ್ಕೆ ಸಂಚಕಾರ ಬರಬಹುದು ಎಂಬ ಭೀತಿ ಇದಕ್ಕೆ ಕಾರಣವಾಗಿರಬಹುದು. ಇದರ ಹಿಂದೆ ಜಮಾತೇ ಇಸ್ಲಾಮಿ ಮತ್ತು ಐ.ಎಸ್.ಐ. ಕೈವಾಡ ಇದೆ ಎಂದು ತಿಳಿದು ಬಂದಿದೆ. ದಂಗೆ ನಿಂತರೂ ಪಿತೂರಿಗಳು ನಿಂತಿಲ್ಲ ಎಂದು ಶೇಖ್ ಹಸಿನಾ ಹೇಳಿದ್ದು ಈ ಸಂಧರ್ಭದಲ್ಲಿ ಗಮನಾರ್ಹ. ಆದರೆ ಶೇಖ್ ಹಸಿನಾ ಸರ್ಕಾರ ಈ ಪಿತೂರಿಯ ತನಿಖೆಗೆ ಅಮೆರಿಕದ ಎಫ್.ಬಿ.ಐ. ನೆರವು ಕೇಳಿದ್ದನ್ನು ಅವರ ಹಲವು ಬೆಂಬಲಿಗ ಪಕ್ಷಗಳೇ ಟೀಕಿಸಿವೆ. ಅಮೆರಿಕದ ಸಿ.ಐ.ಎ. ಬಾಂಗ್ಲಾದೇಶದಲ್ಲಿ ಜಮಾತೇ ಇಸ್ಲಾಮಿ ಮತ್ತು ಐ.ಎಸ್.ಐ. ಚಟುಚಟಿಕೆಗಳಿಗೆ ಬೆಂಬಲ ನೀಡುವುದರಲ್ಲಿ ಸಕ್ರಿಯವಾಗಿದೆ ಎಂಬುದು ಬಹಿರಂಗ ಗುಟ್ಟು ಎಂಬ ಹಿನ್ನೆಲೆಯಲ್ಲಿ ಇದನ್ನು ನೋಡಬೇಕು.

ಹಾರಾಷ್ಟ್ರದ ಹಿರಿಯ ಸಿಪಿಐ(ಎಂ) ಗೂ ಕಾರ್ಮಿಕ ಮುಖಂಡ ಪ್ರಭಾಕರ ಝುಗಿರಿಯವರು ಮಾರ್ಚ್ 10ರಂದು ರಾಗಿದ್ದಾರೆ. ಅವರು ದೇಶದ ಮುಖ ಕಾರ್ಮಿಕ ಸಂಘಟನೆ ಟಿಯುನ ಮಹಾರಾಷ್ಟ್ರ ರಾಜ್ಯ ಮಿತಿಯ ಮಾಜಿ ಅಧ್ಯಕ್ಷರು ಮತ್ತು ಖಿಲ ಭಾರತ ಉಪಾಧ್ಯಕ್ಷರೂ ಗಿದ್ದರು. ಸಿಪಿಐ(ಎಂ)ನ ಮಾಜಿ ಕೇಂದ್ರ ಮಿತಿ ಸದಸ್ಯರೂ ಹಾಗೂ ಮಹಾರಾಷ್ಟ್ರ ಜ್ಯ ಸಮಿತಿಯ ಕಾರ್ಯದರ್ಶಿಯೂ ಗಿದ್ದ ಅವರು ಉತ್ತಮ ಮರಾಠಿ ಲೇಖಕರೂ ಆಗಿದ್ದರು. 1941ರಲ್ಲಿ ಮ್ಯುನಿಸ್ಟ್ ಪಕ್ಷ ಸೇರಿದ ಇವರು ಮರಾಠಿ ಭಾಷೆಯಲ್ಲಿ ಮಾರ್ಕ್ಸ್‌ವಾದಿ ಕ್ಕೆ ನೀಡಿರುವ ಕೊಡುಗೆ ಣನೀಯವಾದುದು. ತತ್ವಶಾಸ್ತ್ರವನ್ನು ರಿಚಯಿಸುವ ಅವರ ಕೃತಿ ಚಾರ್ವಾಕನಿಂದ ಮಾರ್ಕ್ಸ್‌ವರೆಗೆ" ದರ ಕನ್ನಡ ಅನುವಾದ ಕ್ರಿಯಾ ಪ್ರಕಾಶನದಿಂದ ಈಗ ಪ್ರಕಟಣೆಗೆ ಸಿದ್ಧವಾಗಿದೆ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳೂ, ಹಾಗೂ ಕಾರ್ಮಿಕ ಆಂದೋಲನದಲ್ಲಿ ಅವರ ದೀರ್ಘಕಾಲದ ಸಹಯೋಗಿಯೂ ಆಗಿರುವ).ಜೆ.ಕೆ.ನಾಯರ್ ರವರ ಶ್ರದ್ಧಾಂಜಲಿಯನ್ನು ಈ ಮುಂದೆ ನೀಡಲಾಗಿದೆ.

ಕಾಮ್ರೇಡ್ ಪ್ರಭಾಕರ ಸಂಝುಗಿರಿ ಜ್ಞಾನ ಮತ್ತು ಬದ್ಧತೆಯ ಪ್ರತೀಕ

ಕಾಮ್ರೇಡ್ ಪಿ.ಪಿ.ಸಂಝುಗಿರಿಯವರ ನಿಧನ ದಿಂದಾಗಿ ಒಟ್ಟಾರೆಯಾಗಿ ಕಾರ್ಮಿಕ ವರ್ಗದ ಆಂದೋಲನ ಅದಕ್ಕೆ ತನ್ನನ್ನು ಗಂಭೀರವಾಗಿ ಸಮರ್ಪಿಸಿಕೊಂಡಿದ್ದ ಒಬ್ಬ ಮುಖಂಡರನ್ನು ಕಳೆದುಕೊಂಡಿದೆ. ಅವರು ಬಹಳ ಸಮಯದಿಂದ ಅಸ್ವಸ್ಥರಾಗಿದ್ದರು. ಈ ಸುದ್ದಿಯನ್ನು ಅವರ ಕುಟುಂಬದವರಿಂದ ಕೇಳುವ ವೇಳೆಗೆ ನಾನು ಅವರ ತತ್ವಶಾಸ್ತ್ರ ಕುರಿತಾದ "ಚಾರ್ವಾಕ ತೆ ಮಾರ್ಕ್ಸ್"(ಚಾರ್ವಾಕನಿಂದ ಮಾರ್ಕ್ಸ್‌ವರೆಗೆ) ಎಂಬ ಕೃತಿಯ ಕುರಿತು ಕನ್ನಡದ ಓದುಗರಿಗೆ ಬರೆಯುತ್ತಿದ್ದೆ. ಅದನ್ನು ಈ ವಾರ ಪ್ರಕಟಿಸುವವರಿದ್ದೆವು. ತತ್ವಶಾಸ್ತ್ರದ ಮೇಲೆ ಒಂದು ಉತ್ತಮ ಕೃತಿಯನ್ನು ಕೊಡುವಲ್ಲಿ ಅವರ ಅಧ್ಯಯನ ಮತ್ತು ಕೊಡುಗೆಯ ಬಗ್ಗೆ ನಾನು ಅಭಿಮಾನ ಪಡುತ್ತೇನೆ. ಇದು ಅವರ ಚಿರಕಾಲ ನಿಲ್ಲುವ ಕೊಡುಗೆ.



ನಾನು ಕಾಂ. ಸಂಝುಗಿರಿಯವರನ್ನು ನಾಲ್ಕು ದಶಕಗಳಿಗಿಂತಲೂ ಹೆಚ್ಚು ಸಮಯದಿಂದ ಬಲ್ಲೆ. ಕಾರ್ಮಿಕ ವರ್ಗದ ಗುರಿಯ ಸಂಪೂರ್ಣ ಜ್ಞಾನ ಮತ್ತು ಬದ್ಧತೆಯೊಂದಿಗೆ ಅವರು ಜನಸಮೂಹಗಳ ನಡುವೆ ಕೆಲಸ ಮಾಡಲು ತನ್ನನ್ನು ಸಮರ್ಪಿಸಿಕೊಂಡಿದ್ದರು. ಇದರಿಂದ ನನ್ನಂತಹ ಹಲವು ಕಾರ್ಮಿಕ ಮುಖಂಡರಿಗೆ ಅವರು ಅಚ್ಚುಮೆಚ್ಚಿನವರಾಗಿದ್ದರು. ಉತ್ಪಾದಕತೆಯ ಪ್ರಶ್ನೆಯ ಬಗ್ಗೆ ಅವರ ತಿಳುವಳಿಕೆ ಮತ್ತು 1983ರ ಕಾರ್ಮಿಕ ಆಂದೋಲನದ ಕರ್ತವ್ಯಗಳ ಕುರಿತಾದ ದಸ್ತಾವೇಜಿನಲ್ಲಿ ಈ ಬಗ್ಗೆ ಕರಾರುವಾಕ್ಕಾದ ಸರಿಯಾದ ನಿಲುವನ್ನು ನನ್ನಂತವರು ಆತ್ಮಗತ ಮಾಡಿಕೊಂಡೆವು. ಈ ಸರಿಯಾದ ಮಾರ್ಕ್ಸ್‌ವಾದಿ ತಿಳುವಳಿಕೆ, ಅದರ ಸಾಮಾಜಿಕ ಆಯಾಮಗಳು ಹಾಗೂ ಅಪಾರ ಸಾಧ್ಯತೆಗಳು ಈ ರಂಗದಲ್ಲಿ ಆಗ ಕಾರ್ಯಶೀಲರಾಗಿದ್ದ ಯುವಕರಿಗೆ ಮೌಲ್ಯ ಎಂದರೆ ಸಾಮಾಜಿಕವಾಗಿ ಅಗತ್ಯವಾದ ಶ್ರಮಸಮಯ ಎಂಬ ಮೂರನೆಯ ಹಾಗೂ ಬಹಳ ಮಹತ್ವದ ನಿರೂಪಣೆಯ ಸಂಪೂರ್ಣ ಆಯಾಮಗಳನ್ನು ಸರಿಯಾಗಿ ಅರಿತುಕೊಳ್ಳುವಂತೆ ಮಾಡಿದವು. ಮಾರ್ಕ್ಸ್ ತನ್ನ ಕೃತಿ 'ಬಂಡವಾಳ'ದಲ್ಲಿ ಇದನ್ನು ಬಹಳ ವಿವರವಾಗಿ ರೂಪಿಸಿದ್ದಾರೆ. ಇದು ಎಂದೆಂದಿಗೂ ನನ್ನ ಮನದಲ್ಲಿ ಒಂದು ದಾರಿದೀಪವಾಗಿರುತ್ತದೆ.

ನನಗೆ ಸಂಝುಗಿರಿಯವರಲ್ಲಿದ್ದ ತತ್ವಜ್ಞಾನಿ ಗೊತ್ತಿರಲಿಲ್ಲ, ತೆರೆಮರೆಯಲ್ಲಿದ್ದರು. 'ಚಾರ್ವಾಕನಿಂದ ಮಾರ್ಕ್ಸ್‌ವರೆಗೆ' ಎಂಬ ಮಹತ್ವದ ಕೃತಿಯ ಕನ್ನಡ ಆವೃತ್ತಿಯನ್ನು ನೋಡಬೇಕಾಗಿ ಬಂದಾಗ ನನಗೆ ಅದು ವ್ಯಕ್ತಗೊಂಡಿದೆ. ತತ್ವಶಾಸ್ತ್ರದ ಪ್ರಶ್ನೆಯ ಮೇಲೆ ಭಾರತದ ವಾಸ್ತವತೆಗಳನ್ನು ಓದುವುದು, ಅರ್ಥಮಾಡಿಕೊಳ್ಳುವುದು ಹೇಗೆ ಎಂದು ಅವರು ನಮಗೆ ಬಿಟ್ಟುಹೋಗಿರುವ ಕೃತಿ ಒಂದಿಲ್ಲೊಂದು ದಿನ ಒಂದು ಶಾಸ್ತ್ರೀಯ ಕೃತಿಯಾಗುವುದು ಖಂಡಿತ. ನಾನು ಮಾರ್ಕ್ಸ್‌ವಾದಿ ದ್ವಂದಾತ್ಮಕತೆ, ಯುರೋಪಿಯನ್ ತತ್ವಶಾಸ್ತ್ರ ಮತ್ತು ದೇಬಿಪ್ರಸಾದ್‌ರವರ ಪಥಪ್ರದರ್ಶಕ ಕೃತಿಗಳನ್ನು ಓದಿದ್ದೇನೆ. ಆದರೆ ಕಾಂ. ಸಂಝುಗಿರಿಯವರು ಅವನ್ನು ನಮಗೆ ಪರಿಚಯಿಸುವ ಶೈಲಿಯನ್ನು ತಿಳಿಯುವ ಮತ್ತು ಅನುಭವಿಸುವ ಅವಕಾಶ ನನಗಿರಲಿಲ್ಲ. ನಮ್ಮಲ್ಲಿ ಕೆಲವರು ಬಾಣಿ ದೇಶಪಾಂಡೆಯವರ 'ವೇದಾಂತದಿಂದ ಮಾರ್ಕ್ಸ್‌ವಾದ' ಕೃತಿಯ ಬಗ್ಗೆ ಕೇಳಿದ್ದೇವೆ. ಅದು ವೇದಾಂತದ ಹಿರಿಮೆಯನ್ನು ವಿರುದ್ಧ ದಿಕ್ಕಿನಲ್ಲಿ ಸ್ಥಾಪಿಸ ಹೊರಡುತ್ತದೆ. ಮಾರ್ಕ್ಸ್‌ವಾದ ಹುಟ್ಟಿಬಂದ ಪಾಶ್ಚಿಮಾತ್ಯ ತತ್ವಶಾಸ್ತ್ರ ವೇದಾಂತದಿಂದ ಹೊಮ್ಮಿ ಬಂತು ಎಂದು ಅದು ಹೇಳುತ್ತದೆ. ಇನ್ನೊಂದೆಡೆಯಲ್ಲಿ ಸಂಝುಗಿರಿಯವರ ಕೃತಿಯ ಒಬ್ಬ ಓದುಗ ಚಾರ್ವಾಕ ಮತ್ತು ಲೋಕಾಯತ ತತ್ವಶಾಸ್ತ್ರ ಭಾರತೀಯ ತತ್ವಶಾಸ್ತ್ರಕ್ಕೆ ಚಾಲನೆ ನೀಡಿತು, ಅದಕ್ಕೆ ಅಪಾರ ಕೊಡುಗೆ ನೀಡಿತು ಎಂದು ಅರಿಯುತ್ತಾನೆ. ಅದರ ಹಲವು ಪರಿಕಲ್ಪನೆಗಳನ್ನು ಎರವಲು ತಗೊಂಡು, ಅದರ ಉದ್ದೇಶವನ್ನು ತಲೆಕೆಳಗಾಗಿಸಿ, ಅವನ್ನು ಅಸಂಬದ್ಧಗೊಳಿಸಿ ಅವು ಈಗ ಸಿಗದಂತೆ ಮಾಡಲಾಗಿದೆ. ಆದರೂ ವಿವೇಚಿಸಿ ನೋಡಿದರೆ ಅದರಲ್ಲಿ ಭೌತಿಕವಾದೀ ನೆಲೆಯ 'ಕ್ರಾಂತಿಕಾರಿ ಎಳೆ'ಯನ್ನು ಕಾಣಬಹುದು. ಇದು ಅಂತಿಮವಾಗಿ ಆಧುನಿಕ ಯುಗದಲ್ಲಿ, ಈ ಯುಗದ ನಿರ್ದಿಷ್ಟ ಪರಿಸ್ಥಿತಿಗಳಲ್ಲಿ ಕಾರ್ಮಿಕ ವರ್ಗದ ತತ್ವಶಾಸ್ತ್ರದ ಬೆಳವಣಿಗೆಗೆ, ಮಾರ್ಕ್ಸ್‌ವಾದೀ ವಿಚಾರ ರೂಪುಗೊಳ್ಳುವಲ್ಲಿ ಕಾಣಿಕೆ ನೀಡಿರಬೇಕು.

ಕಾಮ್ರೇಡ್ ಸಂಝುಗಿರಿ ಚಿರಾಯುವಾಗಲಿ.

...ಮನಸಿನಲ್ಲಿ ಕುರುಡುಗತ್ತಲೆ!

ಪುಟ 4 ರಿಂದ

ಶೋಧನೆ ಮಾಡಿದವನು ಥಾಮಸ್ ಅಲ್ವಾ ಡಿಸನ್. ಅವರಿಬ್ಬರೂ ಕ್ರಿಶ್ಚಿಯನ್ ಎಂದು ತ್ತಾಯಿತು. ಇಷ್ಟಾದ ಮೇಲೂ ಬುದ್ಧಿ ಬರದಿದ್ದರೆ ಗೆ? ತಕ್ಷಣ ಲೈಟ್ ಆರಿಸಿದೆ. ಬಲ್ಬುಗಳನ್ನೆಲ್ಲ ಕಿತ್ತಿಟ್ಟೆ. ಳ್ಳೆಣ್ಣೆಯ ದೀಪ ಹಚ್ಚಿ ಕೂತಿದ್ದೇನೆ. ಆ ದೀಪದ ರುಡುಗತ್ತಲಲ್ಲಿ ಬರೆಯಲು ಕುಳಿತಾಗ ಪೆನ್ನು ಡುಹಿಡಿದವನೂ ಕ್ರಿಶ್ಚಿಯನ್ ಆಗಿದ್ದರೆ ಎಂದು ಬರಿಯಾಯಿತು, ಯಾಕೆ ಬೇಕು ರಿಸ್ಕು? ಒಂದಷ್ಟು ಳೆಗರಿಗಳಿಗೆ ಹೇಳಿಕಳಿಸಿದ್ದೇನೆ. ಕಂಠಪತ್ರವನ್ನು ಸುತ್ತಿದ್ದೇನೆ. ತಾಳೆಗರಿಯ ಓಲೆಯಲ್ಲಿ ಕಂಠಪತ್ರವನ್ನು ಯಿಗೆ ಅದ್ದಿ ಬರೆಯುತ್ತಿದ್ದರೆ ನನ್ನ ಹಿಂದುತ್ವದ ಗ್ಗೆ ಆಹಾ ಸಂತೋಷವಾಗುತ್ತಿದೆ. ನಾನು ನಿಜಕ್ಕೂ ಪಾತನಿಯಾದೆ. ಸತ್ಯಂ ವಧ! ಧರ್ಮಂ ಚರ!

ಇನ್ನು ಮೇಲೆ ರೇಲುಗಾಡಿಗಳಲ್ಲಿ ವಂತಿಲ್ಲ, ಬಸ್ಸುಗಳಲ್ಲಿ ಪ್ರಯಾಣಿಸುವಂತಿಲ್ಲ, ರುಗಳಲ್ಲಿ ಚಲಿಸುವಂತಿಲ್ಲ, ಮರದ ಚಪ್ಪಲಿಗಳನ್ನೇ ಕೊಂಡು ಓಡಾಡಬೇಕು. ಎಲ್ಲಕ್ಕಿಂತ ಧರ್ಮ ಮುಖ್ಯ. ಅದನ್ನು ಉಳಿಸುವುದೇ ನಮ್ಮ ಗುರಿಯಾಗಬೇಕು. ನಮ್ಮತನವನ್ನು ಕಳಕೊಂಡು ಬದುಕುವುದಾದರೂ ಏಕೆ?

ಅಷ್ಟಕ್ಕೂ ಚಾರ್ಲಿ ಚಾಪ್ಲಿನ್ ಕರ್ನಾಟಕಕ್ಕೆ ಏನು ಮಾಡಿದ್ದಾನೆ? ಮಂಗಳೂರಿಗೆ ಏನು ಮಾಡಿದ್ದಾನೆ? ಮಂಗಳೂರು ಉಡುಪಿ ರಸ್ತೆ ಮಾಡಿಸಿದ್ದಾನಾ? ರಸ್ತೆ ರಿಪೇರಿ ಮಾಡಿಸಿದ್ದಾನಾ? ಆಸ್ಪತ್ರೆ ಕಟ್ಟಿಸಿದ್ದಾನಾ?


ಚಲನಚಿತ್ರ ನಿರ್ದೇಶಕ ಹೇಮಂತ್ ಹೆಗಡೆ ಪತ್ರಿಕಾಗೋಷ್ಠಿಯಲ್ಲಿ

ಸ್ಕೂಲು ಕಟ್ಟಿಸಿದ್ದಾನಾ? ಏನೂ ಮಾಡಿಲ್ಲ. ಒಂದಷ್ಟು ಸಿನಿಮಾ ಮಾಡಿ ನಗಿಸಿರಬಹುದು? ಅದನ್ನೂ ಅವನು ಉಡುಪಿಯಲ್ಲಿ ಚಿತ್ರೀಕರಿಸಿಲ್ಲ. ಉಡುಪಿ ಕೃಷ್ಣನ ಬಗ್ಗೆ ಸಿನಿಮಾ ಮಾಡಿಲ್ಲ. ಶ್ರೀರಾಮನ ಬಗ್ಗೆ ಸೀರಿಯಲ್ ಮಾಡಿಲ್ಲ? ಅವನ ಮೂರ್ತಿ ಯಾಕೆ ಸ್ಥಾಪಿಸಬೇಕು.

ನಮ್ಮ ಶಿಕ್ಷಣ ಬದಲಾಗಬೇಕು ಅನ್ನುವುದರಲ್ಲಿ ಅರ್ಥವಿದೆ. ಷೇಕ್ಸ್‌ಪಿಯರ್ ಶ್ರೇಷ್ಠ ನಾಟಕಕಾರ ಅನ್ನುವ ಕಾರಣಕ್ಕೆ ಅವನ ನಾಟಕಗಳನ್ನು ಪಠ್ಯ ಮಾಡಿದ್ದಾರೆ. ಅವರಿಗಾದರೂ ಪ್ರಜ್ಞೆಯಿಲ್ಲವೇ? ಷೇಕ್ಸ್‌ಪಿಯರ್ ಕೂಡ ಕ್ರಿಶ್ಚಿಯನ್ ಆಗಿದ್ದ. ಬರ್ನಾರ್ಡ್ ಷಾ, ಆಡೆನ್, ಟಾಲ್‌ಸ್ಟಾಯ್ ಮುಂತಾದವರೂ ಅದೇ ಧರ್ಮದವರು. ಅವರ ಕಾದಂಬರಿಗಳನ್ನೆಲ್ಲ ಕಟ್ಟಿಟ್ಟಿದ್ದೇನೆ. ನಾಳೆಯೋ ನಾಡಿದ್ದೋ ರದ್ದಿಗೆ ಹಾಕಬೇಕು. ಅದರಿಂದ ಬಂದ ಹಣವನ್ನು ದೇವರ ಹುಂಡಿಗೆ ಹಾಕಬೇಕು. ಅಲ್ಲಿಗೆ ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಂಡ ಹಾಗೆ.

ಛೀ, ಎಂಥ ತಪ್ಪು ಮಾಡುತ್ತಿದ್ದೇವೆ ನಾವೆಲ್ಲ? ಈ ವಿಚಾರದಲ್ಲಿ ಹೆಣ್ಮಕ್ಕಳೂ ಬುದ್ಧಿ ಕಲಿಯಬೇಕು. ಇನ್ನು ಮೇಲೆ ಮಿಕ್ಸಿ, ಗ್ರೈಂಡರ್ ಬಳಸುವಂತಿಲ್ಲ. ಟೀವಿ. ಫ್ರಿಜ್ಜು ಉಪಯೋಗಿಸುವಂತಿಲ್ಲ. ಅದೆಲ್ಲವನ್ನೂ ಕಂಡು ಹಿಡಿದದ್ದು ಕ್ರಿಶ್ಚಿಯನ್ನರೇ. ಸರ್ಕಾರ ತಕ್ಷಣವೇ ಕಿಟೆಲ್ ಕನ್ನಡ ಪದಕೋಶವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು? ಅವನದೂ ಅದೇ ಜಾತಿ.

ಈ ವಿಚಾರದಲ್ಲಿ ಅಲ್ಪಸ್ವಲ್ಪ ವಿವೇಕ ಇರುವುದು ಪತ್ರಕರ್ತರಿಗೇ, ಹೇಮಂತ್ ಚಾರ್ಲಿಚಾಪ್ಲಿನ್ ಮೂರ್ತಿ ಸ್ಥಾಪಿಸುತ್ತೇನೆ ಎಂದು ಹೇಳಿದಾಗ ಪತ್ರಕರ್ತರೊಬ್ಬರು ಯಾಕ್ರೀ ಕನ್ನಡದವರು ಯಾರೂ ಸಿಗ್ಲಿಲ್ಲವಾ? ನರಸಿಂಹರಾಜು ಮೂರ್ತಿ ಸ್ಥಾಪಿಸಿ' ಎಂದಿದ್ದರಂತೆ. ಅವರ ವಿವೇಕ ಎಲ್ಲರಿಗೂ ಬರುತ್ತಿದೆ. ಚಾಪ್ಲಿನ್ ಮೂರ್ತಿ ಯಾಕೆ, ವಿವೇಕಾನಂದರ ಮೂರ್ತಿ ಸ್ಥಾಪಿಸಿ ಎಂದು ಯುವಕರು ಹೇಮಂತ್ ಹೆಗಡೆಗೆ ಸಲಹೆ ಮಾಡಿದ್ದಾರಂತೆ.

ಯಾರು ಏನೇ ಮಾಡಲಿ, ನಾನಂತೂ ಕರೆಂಟು ಆರಿಸಿ, ಬಲ್ಬು ಎಸೆದು, ಪೆನ್ನು ಪೇಪರು, ಕಂಪ್ಯೂಟರ್ ಪಕ್ಕಕಿಟ್ಟು, ಹರಳೆಣ್ಣೆಯ ದೀಪ ಹಚ್ಚಿಕೊಂಡು ಗಲ್ಲಕ್ಕೆ ಕೈ ಕೊಟ್ಟು ಮಹಾನ್ ಚಿಂತಕನಂತೆ ಕೂತಿದ್ದೇನೆ.

ಕುರುಡುಗತ್ತಲಲ್ಲಿ ಹೊಸ ಜಗತ್ತು ಅತ್ಯಂತ ಸುಂದರವೂ ಸೌಹಾರ್ದಯುತವೂ ಸನಾತನವೂ ಆಗಿ ಕಂಗೊಳಿಸುತ್ತಿದೆ. ಇಂಥ ಜ್ಞಾನೋದಯಕ್ಕೆ ಕಾರಣರಾದ ಎಲ್ಲರಿಗೂ ನನ್ನ ಸಾಷ್ಟಾಂಗ ನಮಸ್ಕಾರ

ಕೃಪೆ : 'ಅವಧಿ' ಬ್ಲಾಗ್ (ಆಯ್ದ ಭಾಗ)



ಜಯ


ಸಂಶೋಧನೆ ತನ್ನ ಕಣ್ಣು ಕಿತ್ತುಕೊಂಡರೂ

ಜಗತ್ತಿಗೆ ಬೆಳಕು ನೀಡಿದ ಗೆಲಿಲಿಯೋ

ಆಕಾಶದಲ್ಲಿ ಸಕಲ ದೇವತೆಗಳೂ ಸಂತೋಷದಿಂದ ಶಾಶ್ವತವಾಗಿ ಇರುವಂತಹ ಸ್ವರ್ಗ, ಅದರ ಪಕ್ಕದಲ್ಲೇ ಪಾಪಿಗಳಿಗೆ ಶಿಕ್ಷೆ ನೀಡಲು ಇರುವ ನರಕ, ಭೂಮಿಯ ಕೆಳಗಿರುವುದು ಪಾತಾಳ ಮತ್ತು ನರಮನುಷ್ಯರು ವಾಸಿಸುವುದು ಭೂಲೋಕ. ಇದು ಬಹುತೇಕ ನಮಗೆಲ್ಲರಿಗೂ ಚಿಕ್ಕಂದಿನಲ್ಲೇ ಕಲಿಸಿಕೊಡುವ ವಿಶ್ವದ ಕುರಿತಾದ ಮೊದಲ ಪಾಠ. ಇದರ ತರೇವಾರಿ ಕಥೆಗಳು ಸಾಕಷ್ಟಿದ್ದು ಏನಿಲ್ಲವೆಂದರೂ, 'ಇಡೀ ವಿಶ್ವಕ್ಕೆ ದೇವರೇ ಯಜಮಾನ, ಇನ್ನುಳಿದಂತೆ ಮನುಷ್ಯನನ್ನೂ ಸೇರಿಕೊಂಡು ಸಕಲ ಚರಾಚರ ಜೀವಿಗಳೆಲ್ಲ ಅವನು ಹೂಡುವ ದಾಳಗಳಷ್ಟೆ' ಎಂದು ದೃಢವಾಗಿ ನಂಬಿರುವವರ ಗುಂಪಿನಲ್ಲಿ ಜನಸಾಮಾನ್ಯರಲ್ಲಷ್ಟೇ ಅಲ್ಲ, ಅನೇಕ ವಿದ್ಯಾವಂತರೂ, ಉಪನ್ಯಾಸಕರು, ತಂತ್ರಜ್ಞರು ಮತ್ತು ವಿಜ್ಞಾನಿಗಳು ಇವತ್ತಿಗೂ ಕೂಡ ಸೇರಿದ್ದಾರೆ. ಆದರೆ, ಸುಮಾರು 400 ವರ್ಷಗಳ ಹಿಂದೆಯೇ ಇಂತಹ ಮೂಢನಂಬಿಕೆಗಳ ವಿರುದ್ಧ ಟೊಂಕಕಟ್ಟಿ ನಿಂತು ತಾನು ಸ್ವತಃ ದೃಢಪಡಿಸಿಕೊಂಡ ಸಾಕ್ಷ್ಯಾಧಾರಗಳ ಸಮೇತ ಹೋರಾಡಿದರೂ, ತನ್ನ ವೈಜ್ಞಾನಿಕ ನಂಬಿಕೆಗಳ ಸಲುವಾಗಿ ಸೆರೆಮನೆಯಲ್ಲಿ ಬಂಧಿಯಾಗಿ ಕೊನೆಯಕಾಲದಲ್ಲಿ ಕುರುಡನಾಗಿ ಸಾಯಬೇಕಾಗಿ ಬಂದರೂ, ಇಡೀ ಮಾನವ ಇತಿಹಾಸದಲ್ಲಿ ಅಚ್ಚಳಿಯದ ಛಾಪನ್ನೊತ್ತಿರುವ ಅಪ್ರತಿಮ ವಿಜ್ಞಾನಿ ಗೆಲಿಲಿಯೋ.


ಗೆಲಿಲಿಯೋರವರನ್ನು ಆಧುನಿಕ ಭೌತಶಾಸ್ತ್ರದ ಪಿತಾಮಹ ಎಂದು ಕರೆಯಲಾಗುತ್ತದೆ. ಒಂದು ನಿಸರ್ಗ ವ್ಯವಸ್ಥೆಯ ಚಲನಶೀಲತೆ ಮತ್ತು ಗುಣಲಕ್ಷಣಗಳ ಕುರಿತು ಸಾಮಾನ್ಯ ಸತ್ಯಾಸತ್ಯತೆಗಳನ್ನು ರೂಪಿಸಲು ಗೆಲಿಲಿಯೋ ಬಳಸಿದ ಪ್ರಯೋಗಗಳು, ಪ್ರಾಯೋಗಿಕ - ತರ್ಕ ಸರಣಿ, ಗಣಿತಶಾಸ್ತ್ರದ ವಿಶ್ಲೇಷಣೆ ಇಂದಿಗೂ ಅನುಕರಣೀಯ ಯೋಗ್ಯವಾಗಿವೆ. ಅವರು ದೂರದರ್ಶಕವನ್ನು ಸಾಕಷ್ಟು ತಾಂತ್ರಿಕವಾಗಿ ಅಭಿವೃದ್ಧಿಪಡಿಸಿದ್ದಲ್ಲದೆ, ಯಂತ್ರಶಾಸ್ತ್ರದಲ್ಲಿ ಅನೇಕ ಸಿದ್ಧಾಂತಗಳನ್ನು ರೂಪಿಸಿದ್ದಾರೆ. ಅದರಲ್ಲೂ ವಿಶೇಷವಾಗಿ ಚಲಿಸುವ ವಸ್ತುಗಳ ಕುರಿತು ವಿಶೇಷ ಅಧ್ಯಯನ ಮಾಡಿದ್ದಾರೆ.





ತಾನು ಬಯಸಿದ್ದ ಕಲಿಯಲು ಬೆಂಬತ್ತಿಹೊರಟ

ಗೆಲಿಲಿಯೋ ಗೆಲಿಲೈ ಹುಟ್ಟಿದ್ದು 1564ರಲ್ಲಿ ಇಟಲಿ ದೇಶದ ಪೀಸಾ ಎಂಬ ನಗರದಲ್ಲಿ. ಅವರ ತಂದೆ ಸಂಗೀತ ಶಿಕ್ಷಕರಾಗಿದ್ದು ಸಂಗೀತ ಸ್ವರಗಳ ಕುರಿತು ಅನೇಕ ಸಂಶೋಧನೆಗಳನ್ನು ನಡೆಸಿದ್ದರು. ಶಾಲೆಗೆ ಸೇರುವಷ್ಟು ವಯಸ್ಸಾದಾಗ ಗೆಲಿಲಿಯೋರವರನ್ನು ಪಾದ್ರಿಯಾಗಿ ತರಬೇತಾಗುವ ಕ್ರಿಶ್ಚಿಯನ್ ಶಾಲೆಗೆ ಅವರನ್ನು ಸೇರಿಸಲಾಯಿತು. ಆದರೆ, ಅವರ ತಂದೆಗೆ ಗೆಲಿಲಿಯೋ ಡಾಕ್ಟರಾಗಬೇಕೆಂಬ ಆಸೆಯಿದ್ದರಿಂದ ಅವರು ವೈದ್ಯಕೀಯ ಕಲಿಯಲು ಪೀಸಾ ವಿಶ್ವವಿದ್ಯಾಲಯಕ್ಕೆ ಸೇರಿಕೊಂಡರು. ವೈದ್ಯಕೀಯ ಇಷ್ಟವಿರದ ಗೆಲಿಲಿಯೋ ಆಸೆ ಮಾತ್ರ ಗಣಿತಶಾಸ್ತ್ರ ಮತ್ತು ತತ್ವಶಾಸ್ತ್ರದ ಮೇಲಿತ್ತು. ಹೆಚ್ಚೆಚ್ಚು ಗಣಿತಶಾಸ್ತ್ರ ಕಲಿಯಲು ಸಮಯ ಮೀಸಲಿಡುತ್ತಿದ್ದರು ಮತ್ತು ಎಲ್ಲೆಲ್ಲಿ ಗಣಿತ ಪಾಠಗಳು ನಡೆಯುತ್ತವೋ ಅಲ್ಲಿ ಹಾಜರಿರುತ್ತಿದ್ದರು. ಹೀಗಾಗಿ ವೈದ್ಯಕೀಯ ಕಲಿಯಲಾಗದೆ ಅದನ್ನು ಅರ್ಧಕ್ಕೆ ಬಿಟ್ಟು ಗಣಿತಶಾಸ್ತ್ರವನ್ನು ಖಾಸಗಿಯಾಗಿ ಕಲಿಸಲು ಹೊರಟರು. ಅವರಿಗೆ ಪೀಸಾ ವಿಶ್ವವಿದ್ಯಾಲಯದಲ್ಲೂ ನಂತರ ಪಡುವಾ ವಿಶ್ವವಿದ್ಯಾಲಯದಲ್ಲೂ ಗಣಿತಶಾಸ್ತ್ರ ಉಪನ್ಯಾಸಕ ಹುದ್ದೆ ಸಿಕ್ಕಿತು.




ಇಲ್ಲಿಯೇ ಸುಮಾರು 18 ವರ್ಷಗಳ ಕಾಲ ಕಲಿಸಿದ ಗೆಲಿಲಿಯೋ ಹಲವಾರು ಸಂಶೋಧನೆಗಳಲ್ಲಿ ನಿರತರಾಗಿದ್ದರೂ, ಅದುವರೆಗೂ ಯಾವುದೇ ಆಸಕ್ತಿಕರ ಆವಿಷ್ಕಾರದಿಂದ ಯಾರ ಗಮನವನ್ನಿನ್ನೂ ಸೆಳೆದಿರಲಿಲ್ಲ. 1609ರಲ್ಲಿ ಅವರ ಕಿವಿಗೆ ಮಹತ್ತರವಾದೊಂದು ವಿಷಯ ಬೀಳದಿದ್ದಲ್ಲಿ ಗೆಲಿಲಿಯೋ ಇಷ್ಟೊಂದು ವೈಜ್ಞಾನಿಕ ಸತ್ಯಗಳನ್ನು ಹೊರಗೆಳೆಯಲಾಗುತ್ತಿರಲಿಲ್ಲವೇನೋ. ಡಚ್ಚರು ಅದೆಂಥದೋ ಗಾಜಿನಿಂದ ದೂರದಲ್ಲಿರುವ ವಸ್ತುಗಳನ್ನು ಕೂಡ ದೊಡ್ಡದಾಗಿ ನೋಡಬಲ್ಲರು ಎಂಬ ಸುದ್ದಿ ಇವರಿಗೆ ತಲುಪಿತ್ತು. ಅಂಥದೇ ಗಾಜನ್ನು ತಾನು ತಯಾರಿಸಬೇಕೆಂದು ಹಟಕ್ಕೆ ಬಿದ್ದ ಗೆಲಿಲಿಯೋ, ಡಚ್ಚರಿಗಿಂತ ಇನ್ನೂ ನಾವೀನ್ಯತೆಯುಳ್ಳ ಹಲವು ದೂರದರ್ಶಕಗಳನ್ನು ಅವರು ತಯಾರಿಸಿದರು. 1609ರ ಕೊನೆಯ ಹೊತ್ತಿಗೆ ಗೆಲಿಲಿಯೋ ಆಕಾಶದೆಡೆಗೆ ದೂರದರ್ಶಕವನ್ನು ತಿರುಗಿಸಿ ನೋಡತೊಡಗಿದಂತೆ ಒಂದು ದೊಡ್ಡ ಕೋಲಾಹಲವೇ ಎದ್ದಿತು.

ಸ್ವರ್ಗದಲ್ಲಿ ಕಂಡ ಬೆಂಕಿಯುಂಡೆ, ಬೆಟ್ಟ-ಕಣಿವೆ

ಸ್ವರ್ಗದೆಡೆಗೆ ಗೆಲಿಲಿಯೋ ತನ್ನ ದೂರದರ್ಶಕವನ್ನು ತಿರುಗಿಸಿ ಇಂದಿಗೆ 400 ವರ್ಷಗಳಾಗಿವೆ. ಜಗತ್ತಿನೆಲ್ಲೆಡೆ ಅದರ ವಾರ್ಷಿಕೋತ್ಸವವನ್ನು ಆಚರಿಸಲಾಗುತ್ತಿದೆ. ಆದರೆ, ಸ್ವರ್ಗದೆಡೆಗೆ ಗೆಲಿಲಿಯೋ ತನ್ನ ದೂರದರ್ಶಕದಿಂದ ಕಣ್ಣು ಹಾಯಿಸಿದಾಗ ಅವನಿಗೆ ಕಂಡದ್ದು ಕಲೆಗಳಿರುವ ಸೂರ್ಯ ಹಾಗೂ ಬೆಟ್ಟ-ಕಣಿವೆಗಳಿಂದ ಕೂಡಿರುವ ಚಂದ್ರ. ಗೆಲಿಲಿಯೋ ಕಂಡ ಈ ದೃಶ್ಯವೇ ಮುಂದೆ 'ಸ್ವರ್ಗವು ನುಣುಪಾಗಿ, ಎಂದಿಗೂ ಬದಲಾಗದ ಒಂದು ಪೂರ್ಣಗೊಂಡ ದೇವಲೋಕ' ಎಂಬ ಸಾವಿರಾರು ವರ್ಷಗಳ ಸಾಂಪ್ರದಾಯಿಕ ನಂಬುಗೆಯನ್ನೇ ತಲೆಕೆಳಗಾಗಿಸಿತು. ಶುಕ್ರ ಗ್ರಹವನ್ನು ಹಲವು ತಿಂಗಳ ಕಾಲ ವೀಕ್ಷಿಸಿದ ನಂತರ ಅಲ್ಲಿಯವರೆಗೂ ಭೂಮಿಯ ಸುತ್ತ ಅದು ತಿರುಗುತ್ತದೆಂಬ ನಂಬಿಕೆಯನ್ನು ಪಕ್ಕಕ್ಕೆ ಸರಿಸಿ, ಶುಕ್ರ ಗ್ರಹವು ವಾಸ್ತವವಾಗಿ ಸೂರ್ಯನ ಸುತ್ತ ಸುತ್ತುತ್ತದೆಂದು ಗೆಲಿಲಿಯೋ ಸಾಬೀತುಪಡಿಸಿದ. ಜ್ಯೂಪಿಟರ್ ಗ್ರಹವನ್ನು ರಾತ್ರಿಗಳ ನಂತರ ರಾತ್ರಿ ವೀಕ್ಷಿಸಿ ಅದರ ಸುತ್ತಲೂ 4 ಉಪಗ್ರಹಗಳಿವೆಯೆಂದು ತಿಳಿಸಿದರು. ಇದರಿಂದ ಭೂಮಿಯು ಎಲ್ಲದಕ್ಕೂ ಕೇಂದ್ರವಲ್ಲವೆಂದು ಇನ್ನಷ್ಟು ಸ್ಪಷ್ಟವಾಯಿತು.

ಅಂದು ಗೆಲಿಲಿಯೋ ಆರಂಭಿಸಿದ ವಿಶ್ವವನ್ನರಿಯುವ ಶೋಧನೆಯಿಂದ ಇಂದು ನಾವು

ಪುಟ 13 ನೋಡಿ



30 ಲಕ್ಷ ಫ್ರೆಂಚ್ ಕಾರ್ಮಿಕರ ಸಾರ್ವತ್ರಿಕ ಮುಷ್ಕರದಲ್ಲಿ ಬೀದಿಗಿಳಿದ ಕಾರ್ಮಿಕರು

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor : S.Y.GURUSHANTH

ಸಂಪಾದಕರ ಫೈಲ್.